ಆಚಾರ್ಯ ಪದ ೭

ಸಮಡೊಳಿಯಲ್ಲಿ ಪೂಜ್ಯ ಶಾಂತಿಸಾಗರು ಯಾವ ಶ್ರಮಣ ಸಂಘ ನಿರ್ಮಾಣ ಮಾಡಿದರೋ, ಆ ಚತುಃಸಂಘ ಸಮುದಾಯ ಅವರನ್ನು ಆಚಾರ್ಯ ಪರಮೇಷ್ಠಿಯ ರೂಪದಲ್ಲಿ ಪೂಜಿಸಲಾರಂಭಿಸಿತು.

ಆಚಾರ್ಯ ಪದದ ಸ್ವರೂಪ

ಆಧ್ಯಾತ್ಮ ವಿಕಾಸ ಕ್ಷೇತ್ರದಲ್ಲಿ ಆಚಾರ್ಯ ಪದದ ಪ್ರತಿಷ್ಠೆ ಬಹು ದೊಡ್ಡದು. ಮೂಲಾಚಾರದಲ್ಲಿ ಹೀಗೆ ಬರೆದಿದ್ದಾರೆ.

''ಯಾವ ಮುನಿ ಜ್ಞಾನ ದರ್ಶನ ವೀರ್ಯ ತಪ ಮತ್ತು ಚಾರಿತ್ರ ರೂಪದ ಪಂಚ ಆಚಾರಗಳನ್ನೂ ನಿರತಿಚಾರ ಪೂರ್ವಕ ಪಾಲಿಸುವರೋ ಮತ್ತು ಅನ್ಯರಿಂದ ಪಾಲನೆ ಮಾಡಿಸುತ್ತಾರೋ ಅಂತವರನ್ನು ಆಚಾರ್ಯರೆಂದು ಕರೆಯುತ್ತಾರೆ.'' ಧವಲ ಟೀಕೆಯಲ್ಲಿ ಹೀಗೆ ಹೇಳಿದೆ.

''ಯಾರು ಪಂಚವಿಧ ಆಚಾರವನ್ನು ಸ್ವಯಂ ಆಚರಿಸಿ ಅನ್ಯರಿಗೆ ಆಚರಿಸಲು ಹೇಳುತ್ತಾರೋ ಅವರು ಆಚಾರ್ಯ ಪರಮೇಷ್ಠಿಗಳು''

ಮಹಾ ಬಂಧದ ಮಂಗಲ ಶ್ಲೋಕದಲ್ಲಿ ಈ ಮಾತು ಬಂದಿದೆ.

''ಯಾರು ರತ್ನತ್ರಯ ರೂಪಿ ಖಡ್ಗದಿಂದ ಮೋಹರೂಪಿ ಸೇನೆಯ ಮಸ್ತಕವನ್ನು ಚೂರ್ಣ ಮಾಡುತ್ತಾರೋ ಮತ್ತು ಮೋಹವನ್ನು ನಾಶಮಾಡುವ ಉಪದೇಶವನ್ನು ಭವ್ಯರಿಗೆ ಕೊಡುತ್ತಾರೋ ಅಂತಹ ಆಚಾರ್ಯ ಪರಮೇಷ್ಠಿಗಳು ಪ್ರಸನ್ನರಾಗಲಿ''

ಆಚಾರ್ಯ ಪರಮೇಷ್ಠಿಯು ವೀತರಾಗ ಶಾಸನವನ್ನು ನಿರ್ದೇಶಿಸುತ್ತಾರೆ. ರಾಜ ಸರಾಗ ಶಾಸನವನ್ನು ನಿರ್ದೇಶಿಸುತ್ತಾನೆ. ಆಚಾರ್ಯ ಪರಮೇಷ್ಠಿಯ ಶಾಸನದ ಅನುಷ್ಠಾನದಿಂದ ಸ್ವರ್ಗ ಮೋಕ್ಷ ಸಂಬಂಧಿ ಸಾಮಾಗ್ರಿಗಳು ಪ್ರಾಪ್ತಿಯಾಗುತ್ತವೆ. ರಾಜ ಶಾಸನದ ಪಾಲನೆಯಿಂದ ಐಹಿಕ ಸುಖ ಭೋಗಗಳು ಪ್ರಾಪ್ತಿಯಾಗುತ್ತವೆ. ''ರಾಜಾ ಪ್ರಸನ್ನಃ ಗಜ ಭೂಮಿ ದಾನಮ್'' ಎನ್ನುವಂತೆ ರಾಜ ಪ್ರಸನ್ನನಾದರೆ ಗಜ, ಭೂಮಿ, ಯಾದಿಗಳನ್ನು ಯಥೇಚ್ಛ ಕೊಟ್ಟು ಪ್ರಸನ್ನಗೊಳಿಸಬಲ್ಲ. ಆದರೆ ಆಚಾರ್ಯ ಪರಮೇಷ್ಠಿಗಳು ಪ್ರಸನ್ನರಾದರೆ ಶಿಷ್ಯನನ್ನು ತನ್ನ ಸಮಾನನನ್ನಾಗಿ ಮಾಡುತ್ತಾರೆ. ಈ ರೀತಿ ಆಚಾರ್ಯ ಪರಮೇಷ್ಠಿಗೆ ಹೋಲಿಸಿದರೆ ರಾಜ ಪದ ಬಹಳ ಲಘುವಾಗಿ ಹೋಗುತ್ತದೆ. ಆದ್ದರಿಂದ ಅಂತಹ ರಾಜನೂ ಆಚಾರ್ಯ ಪರಮೇಷ್ಠಿಯ ಚರಣ

ರಜವನ್ನು ಮಸ್ತಕದಲ್ಲಿ ಧರಿಸಿ ಕೃತಾರ್ಥನಾಗುತ್ತಾನೆ. ಆಚಾರ್ಯ ಪದ ಮತ್ತು ರಾಜ ಇವೆರಡು ಪದಗಳ ಪ್ರಾಪ್ತಿಗಾಗಿ ಜಾತಿಶುದ್ಧಿಯ ಸಮಾನತೆ ಹೇಳಿದೆ.

''ಸ್ವಜಾತಿ ಯೋಗ್ಯ ಸಂಸ್ಕಾರ ಹಿನಾನಾಂ

ರಾಜ್ಯೋ ಪ್ರವಜ್ಯಾಯಾಂ ನಾಸ್ತ್ಯಾಧಿಕಾರಃ (ನಿ. ಸಾ. ೬೯ ಪೃ.೩೪೩)

ಸ್ವಜಾತಿಯ ಶುದ್ಧ ಸಂಸ್ಕಾರವಿಲ್ಲದವನಿಗೆ ರಾಜ್ಯಾಧಿಕಾರ ದೀಕ್ಷಾಧಿಕಾರ ಕೊಡಲ್ಪಡುವುದಿಲ್ಲ. ಈ ಎರಡು ಪದಗಳಿಗೆ ಅಂತವನು ಅಪಾತ್ರ.

ಆಚಾರ್ಯ ಪದದಲ್ಲಿ ನಿರಾಸಕ್ತಿ

ಆಚಾರ್ಯಪದ, ರಾಜಪದಗಳನ್ನು ಹೋಲಿಸಲಾಯಿತು. ಇಲ್ಲಿ ಒಂದು ಸಂಶಯ ಮೂಡುವುದು ಸಹಜ. ಯಾವ ರೀತಿ ರಾಜ ಪ್ರಜಾಜನರ ಹಿತಕ್ಕಾಗಿ ನಿರಂತರ ಚಿಂತಿಸಬೇಕಾಗುವುದೋ ಅದೇ ರೀತಿ ಆಚಾರ್ಯರೂ ಶಿಷ್ಯರ ಹಿತಚಿಂತನೆಗೆ ಚಿಂತಿಸಿದರೆ ಅವರ ನಿರ್ಗ್ರಂಥ ಪದಕ್ಕೆ ಆಪತ್ತಿ ಬರುವುದಿಲ್ಲವೆ? ಇದು ಒಪ್ಪತಕ್ಕ ಮಾತಲ್ಲ, ರಾಜನು ಪ್ರಜಾಹಿತ ಚಿಂತನೆ ಮಾಡುವುದು ಎಷ್ಟು ಸ್ವಾಭಾವಿಕವೋ ಆಚಾರ್ಯರೂ ಸಂಘ ರಕ್ಷಣೆ ಮಾಡುತ್ತಿದ್ದರೂ ಅಷ್ಟೇ ನಿರ್ಲಿಪ್ತವಾಗಿರುವುದು ಅಷ್ಟೇ ಸ್ವಾಭಾವಿಕವಾಗಿರುತ್ತದೆ. ಸಂಘ ನಿರ್ದೇಶನ ಮಾಡುತ್ತಿದ್ದರೂ ಯಾವುದೇ ಲೌಕಿಕ ಯಶ ಕೀರ್ತಿ ಕಾಂಕ್ಷೆಗಳು ಅಣುಮಾತ್ರವೂ ಅವರಲ್ಲಿರುವುದಿಲ್ಲ. ಧರ್ಮ ಸಾಧನೆಗೆ ಅಗತ್ಯವಿದ್ದಷ್ಟು ಸರಸ-ನೀರಸ ಆಹಾರವನ್ನು ನಿರ್ಲಿಪ್ತರಾಗಿ ತೆಗೆದುಕೊಳ್ಳುತ್ತಾರೆ. ಬಾಹ್ಯದಲ್ಲಿ ಶರೀರಕ್ಕೆ ಆಹಾರವನ್ನುಣ್ಣಿಸುತ್ತಿದ್ದರೂ ಅಂತರ್ಯದಲ್ಲಿ ಆತ್ಮನಿಗೆ ಚಿದಾನ್ನವನ್ನುಣ್ಣಿಸುತ್ತಿರುತ್ತಾರೆ. ಪೂಜ್ಯಪಾದರು ಇಷ್ಟೋಪದೇಶದಲ್ಲಿ ಒಂದು ಮಾತು ಬರೆದಿದ್ದಾರೆ.

ಬ್ರೂವನ್ನಪಿಹಿಬ್ರೂತೆ ಗಚ್ಛನ್ನಪಿನಗಚ್ಛತಿ

ಸ್ಥಿರಕೃತಾತ್ಮ ತತ್ವಸ್ಥಃ ಪಶ್ಯನ್ನಪಿ ನಪಶ್ಯತಿ

ತನ್ನಾತ್ಮನಲ್ಲಿ ಮನಸ್ಸನ್ನು ಸ್ಥಿರಗೊಳಿಸಿರುವ ಮಹಾಯೋಗಿಗಳು ಮಾತಾಡಿದರೂ ಮಾತಾಡದಂತಿರುತ್ತಾರೆ. ನಡೆಯುತ್ತಿದ್ದರೂ ನಡೆಯದವರಂತಿರುತ್ತಾರೆ. ಮೋಹಿಗಳು ಕಣ್ಮುಚ್ಚಿ ಕುಳಿತಿದ್ದರೂ ಕರ್ಮಬಂಧ ಮಾಡಿಕೊಳ್ಳುತ್ತಾರೆ. ನಿರ್ಮೋಹಿಗಳು ನೋಡುತ್ತಿದ್ದರೂ ನಿರ್ಜರೆ ಮಾಡಿಕೊಳ್ಳುತ್ತಾರೆ. ಮಾತಾಡುತ್ತಿದ್ದರೂ ಆತ್ಮನೊಡನೆ (ಆತ್ಮನ ಬಗ್ಗೆ)ಯೇ ಮಾತಾಡುತ್ತಾರೆ. ಆಚಾರ್ಯ ಪರಮೇಷ್ಠಿಯ ಸರ್ವ ಬಾಹ್ಯಭ್ಯಂತರ ವ್ಯವಹಾರಗಳು ಸಂಸಾರ ಛೇದಕ್ಕೇ ಕಾರಣಗಳಾಗಿವೆ. ಅವರು ಸಂಘದಲ್ಲಿದ್ದೂ ನಿಸ್ಸಂಗರಾಗಿರುತ್ತಾರೆ. ಸದಾ

ಧಾರ್ಮಿಕ ಪರಿವಾರದೊಡಗೂಡಿ ರತ್ನತ್ರಯ ಧರ್ಮದ ಅನುಪ್ರೇಕ್ಷೆಯಲ್ಲೇ ಸಂಲಗ್ನವಾಗಿರುವುದರಿಂದ, ಅಧಿಕ ವಿಶುದ್ಧಿಯನ್ನು ಹೊಂದುತ್ತಿರುತ್ತಾರೆ.

ತಮ್ಮ ಮಹಾನ್ ತಪಶ್ಚರ್ಯೆಯಿಂದ ಜನಗಳನ್ನು ಆಕರ್ಷಿಸಿ ಧರ್ಮ ಗಂಗೆಯನ್ನು ಹರಿಸುತ್ತಾ ಆಚಾರ್ಯ ಪದದಲ್ಲಿ ಪ್ರತಿಷ್ಠಿತರಾದರು. ತಮ್ಮ ಶಿಥಿಲಾಚಾರದಿಂದ ಉನ್ಮಾರ್ಗದಲ್ಲಿ ಕ್ರಮಿಸುತ್ತಿದ್ದ ಜೀವಿಗಳನ್ನು ತಮ್ಮ ತಪಃ ಪ್ರಭಾವದಿಂದ ಸನ್ಮಾರ್ಗಕ್ಕೆ ಸೆಳೆಯತೊಡಗಿದರು.

ಈ ಪಂಚಮ ಕಾಲದಲ್ಲಿ ವಿಷಯ-ಕಷಾಯಗಳ ಪ್ರವಾಹವೇ ಹರಿಯುತ್ತಿದೆ. ಎಲ್ಲಾ ಜೀವಿಗಳು ಈ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿವೆ. ಇದರೊಡನೆ ಮಿಥ್ಯಾತ್ವದ

ಜಂಝಾವಾತ ಭೀಕರವಾಗಿ ಬೀಸುತ್ತಿದೆ. ಅಜ್ಞಾನದ ಕಾರ್ಮೋಡಗಳು ದಿಕ್ಕುಗಳನ್ನು ದಟ್ಟವಾಗಿ ಆವರಿಸಿಬಿಟ್ಟಿವೆ. ಮೋಕ್ಷ ಮಾರ್ಗ ಮಿಥ್ಯಾಚರಣೆಯ ಮುಳ್ಳು ಕಂಟೆಗಳಿಂದ ತುಂಬಿಹೋಗಿದೆ. ಈ ಹೀನಕಾಲದಲ್ಲಿ ಮಹಾ ಪಾಪಿಜೀವಿಗಳು ನರಕ ತಿರ್ಯಂಚ ಗತಿಗಳಿಂದಲೇ ಬಂದು ಈ ಮಿಥ್ಯಾತ್ವದ ಜಂಝಾವಾತಕ್ಕೆ ಸಿಕ್ಕಿ ನರಕ ತಿರ್ಯಂಚ ಗತಿಗಳಿಗೇ ಹೋಗಿ ಸೇರುತ್ತವೆ. ಇಂದಿನ ಈ ಹೀನ ಧೀನ ಜೀವಿಗಳನ್ನು ದುರ್ಗತಿಯಿಂದ ರಕ್ಷಿಸಬಲ್ಲವರಾರು? ಪಂಚಮ ಕಾಲದ ಭರತಖಂಡದ ಪರಿಸ್ಥಿತಿಯ ಬಗ್ಗೆ ಮಹಾಪುರಾಣಕಾರರು ಮೊದಲೇ ಹೇಳಿದ್ದಾರೆ. ಭರತಖಂಡಕ್ಕೆ ಪಂಚಮ ಕಾಲದಲ್ಲಿ ಉಂಟಾಗುವ ಪರಿಸ್ಥಿತಿಯ ಬಗ್ಗೆ ಭರತ ಚಕ್ರ ವರ್ತಿಗೆ ಬಿದ್ದ ೧೬ ಕನಸುಗಳ ಫಲ ಇಂದು ಚೆನ್ನಾಗಿ ಗೋಚರವಾಗುತ್ತಿದೆ. ಸ್ವಲ್ಪ ಚಿಂತಿತನಾಗಿ ಭಗವಂತನಲ್ಲಿ ತನ್ನ ಕನಸಿನ ಫಲಗಳನ್ನು ಹೇಳಲು ಪ್ರಾರ್ಥಿಸುತ್ತಾನೆ. ಅವನು ಒಂದು ಕನಸಿನಲ್ಲಿ ಶುಷ್ಕ ವೃಕ್ಷ ನೋಡಿದ್ದ. ಅದರ ಫಲವನ್ನು ಆದಿ ಪ್ರಭುವು ಹೀಗೆ ಹೇಳಿದ್ದರು.

ಪುಸಾಂ ಸ್ತ್ರೀಣಾಂ ಚ ಚಾರಿತ್ರಚ್ಯುತಿ: ಶುಷ್ಕದೃಮೇಕ್ಷಣಾತ್

ಶುಷ್ಕ ವೃಕ್ಷದ ದರ್ಶನದಿಂದ ಪಂಚಮಕಾಲದ ಸ್ತ್ರೀ ಪುರುಷರು ಚಾರಿತ್ರ ಹೀನರಾಗುತ್ತಾರೆ. ಸ್ವೇಚ್ಛಾಚಾರಿಗಳಾಗುತ್ತಾರೆ ಎಂದರು. ಅಧರ್ಮ ಅನಾಚಾರವೇ ಪಂಚಮ ಕಾಲದ ಯುಗಧರ್ಮವಾಗಿದೆ. ಆಚಾರ್ಯಶ್ರೀಯವರು ಅಧರ್ಮದ ವಿರುದ್ಧ ವೈರಾಗ್ಯ ವೃತ್ತಿಯನ್ನು ಬಡಿದೆಬ್ಬಿಸಿ ಸಂಯಮದ ಕಹಳೆ ಊದತೊಡಗಿದರು. ಇಂತಹ ವೈಪರೀತ್ಯದ ಪರಿಸ್ಥಿತಿಯಲ್ಲಿ ಧರ್ಮ ಸಂಸ್ಥಾಪನಾರ್ಥ ಯುಗ ಪರಿವರ್ತನೆಯ ತಿರುಗು ಬಿಂದುವಾಗಿ ಮೂಡಿ ಬಂದರು.

ಪುಣ್ಯ ಮೂರ್ತಿ ಆಚಾರ್ಯ ಶ್ರೀಯವರು ಯಾವ ಗ್ರಾಮ ನಗರಕ್ಕೆ ಕಾಲಿಡುತ್ತಿದ್ದರೋ ಅಲ್ಲಿ ಧರ್ಮದ ದೀಪ ಮಾಲಿಕೆಗಳು ಜಗಜಗಿಸುತ್ತಿದ್ದವು.

ಒಂದೇ ಏಟಿಗೆ ಮಿಥ್ಯಾಂಧಕಾರ ಕಡಿದು ಹೋಗುತ್ತಿತ್ತು. ಉತ್ಕೃಷ್ಟಶಾಸ್ತ್ರ ಚರ್ಚೆ. ಶ್ರೇಷ್ಠ ತತ್ತ್ವ ಚಿಂತನೆ, ಸುಂದರ ತತ್ತ್ವ ವಿಮರ್ಷೆ. ಅದನ್ನು ಕೇಳುವವರಿಗೆ ಮೈಮನಗಳು ಅರಳಿ ಬಿಡುತ್ತಿದ್ದವು. ಪಾಪ ವೃತ್ತಿಯು ಪಲಾಯನ ಮಾಡಿ ಬಿಡುತ್ತಿತ್ತು.

ಕುಂಬೋಜದಲ್ಲಿ ಚಾತುರ್ಮಾಸ

ವಿಹಾರ ಮಾಡುತ್ತಾ ೧೯೩೪ರ ಮೇ ವರ್ಷಾಯೋಗವನ್ನು ಕುಂಬೋಜದಲ್ಲಿ ಕಳೆಯತೊಡಗಿದರು. ಜನಗಳು ಆನಂದದಿಂದ ಉಬ್ಬಿ ಹೋದರು. ಕಾಡೂ ಕಲ್ಯಾಣದ ಬೀಡಾಯಿತು. ಆಚಾರ್ಯಶ್ರೀಯವರ ಸತ್ಸಂಗದಿಂದ ಜನಗಳಿಗೆ ನಾಲ್ಕು ತಿಂಗಳು ನಾಲ್ಕು ದಿನಗಳಂತೆ ಓಡಿ ಹೋದವು.

ಅವರ ಸಂಘ ಅಲ್ಲಿಂದ ಕುಂಥಲಗಿರಿಯತ್ತ ವಿಹಾರ ಹೊರಟಿತು. ಮಾರ್ಗ ಮಧ್ಯದ ಅನೇಕ ಗ್ರಾಮಗಳ ನರನಾರಿಯರು ಆ ಮಹಾಪುರುಷನ ದರ್ಶನ ಪಡೆದು ಧನ್ಯರಾಗುತ್ತಿದ್ದರು. ಪಂಡರಾಪುರ ಸೇರುವಾಗ ದರ್ಶನಾರ್ಥಿಗಳ ಅಸಾಧ್ಯ ದಟ್ಟಣೆ ಏರಿಹೋಗಿತ್ತು. ಅಲ್ಲಿಂದ ಸಂಘ ಸಾವಧಾನವಾಗಿ ಕುಂಥಲಗಿರಿ ಸಿದ್ಧಕ್ಷೇತ್ರ ಸೇರಿತು. ಭಗವಾನ್ ದೇಶಭೂಷಣ ಕುಲಭೂಷಣ ಸ್ವಾಮಿಗಳ ಪರಮಾಹ್ಲಾದಕರ ಬಿಂಬಗಳನ್ನು ದರ್ಶನಮಾಡಿಕೊಂಡು ಅಲ್ಲಿಂದ ಸಂಘ ಸಾವರ್‌ಗಾಂ ತಲ್ಪಿತು. ಅಲ್ಲಿ ಧಾರ್ಮಿಕ ಉತ್ಸವವೊಂದು ಆಯೋಜಿಸಲ್ಪಟ್ಟಿತು. ಅಲ್ಲಿಂದ ಸಂಘ ಸೋಲಾಪುರಕ್ಕೆ ಬಂದಿತು. ಅಲ್ಲಿ ಸಂಘವನ್ನು ಹಾರ್ದಿಕವಾಗಿ ಸ್ವಾಗತಿಸಲಾಯಿತು. ಅವರು ಅಧಿಕ ಉಪದೇಶ ಕೊಡುತ್ತಿರಲಿಲ್ಲ. ಅವರ ವಿಶುದ್ಧ ಜೀವನವೇ ಒಂದು ಉಪದೇಶದಂತಿತ್ತು. ಅವರು ಒಬ್ಬ ಸಿದ್ಧ ಹಸ್ತ ಮಹಾಪುರುಷರಾಗಿದ್ದರು. ಜಿನೇಂದ್ರ ಭಗವಂತನ ಆರಾಧನೆಯ ಮಹತ್ವವನ್ನು ಅವರು ಸದಾ ಒತ್ತಿಒತ್ತಿ ಹೇಳುತ್ತಿದ್ದರು. ಮಹಾಕವಿ ಧನಂಜಯ, ಭಗವಾನ್ ಋಷಭನಾಥ ಪ್ರಭುವನ್ನು ಬಾಲವೈದ್ಯನೆಂದು ಸ್ತುತಿಸಿದ್ದಾನೆ.

''ಹೇ ಭಗವಾನ್! ತನ್ನ ತಪ್ಪಿನಿಂದಲೇ ತಾನು ದುಃಖಿಯಾಗುವ ಮೂಢ ಬಾಲಕನಂತಿರುವ ಈ ಜಗತ್ತನ್ನು ನೀನು ರಕ್ಷಿಸಬಲ್ಲೆ. ಏಕೆಂದರೆ ಬಾಲಕನಂತೆ ತಮ್ಮ ಅಶುಭ ಪ್ರವೃತ್ತಿಯಲ್ಲೇ ಮುಂದುವರಿದು ವಿಪತ್ತಿಕಾರಕ ಪಾಪ ಸಂಗ್ರ ಮಾಡುತ್ತದೆ ಈ ಜಗತ್ತು. ಹೇ ದೇವ! ಹಿತ ಅಹಿತವನ್ನು ತಿಳಿಯಲಾರದ ಈ ಜಗತ್ತಿಗೆ ನೀನು ಬಾಲವೈದ್ಯನಂತಿದ್ದೀಯ''

ಭಗವಂತನ ನಿರಂತರ ಸ್ತುತಿ-ನುಡಿಯಿಂದ ಪಡೆದ ಪುಣ್ಯ ಪ್ರಭಾವದಿಂದ ಅವರು ಭವರೋಗ ಮತ್ತು (ಸಂಸಾರ) ಭಯರೋಗ ದೂರ ಮಾಡುವ ತತ್ತ್ವಾಮೃತ ಪಾನಮಾಡಿಸುತ್ತಿದ್ದರು. ಅವರು ಸತತ ಧ್ಯಾನ ಅಧ್ಯಯನದಿಂದ ಚತುರ್ಥ ಕಾಲದ ಸ್ಥಿತಿಯನ್ನು ಪುನರ್ನಿರ್ಮಾಣ ಮಾಡಿದರು.

ಸ್ಥಿರ ಮನಸ್ಸು

ನಾನು: ಒಮ್ಮೆ ಅವರಲ್ಲಿ ಒಂದು ಪ್ರಶ್ನೆ ಕೇಳಿದೆ.

ಮಹರಾಜ್! ನೀವು ನಿರಂತರ ಸ್ವಾಧ್ಯಾಯಾದಿಕಾರ್ಯ ಮಾಡುತ್ತೀರಿ. ಮನರೂಪಿ ಕೋತಿಯು ಚಂಚಲವಾಗಿರಬಾರದೆಂದು ಅದನ್ನು ಬಂದಿಸಿಡುವುದಕ್ಕೇನು?

ಮಹರಾಜ್:- ''ನಮ್ಮ ಮನಸ್ಸು ಚಂಚಲವಾಗಿಲ್ಲ''

ನಾನು: ''ನಿಮ್ಮ ಮನಸ್ಸಿನ ಸ್ಥಿರತೆ ಹೇಗೆ ಉಂಟಾಗುತ್ತದೆ? ಅದು ಸ್ವಾಭಾವಿಕವಾಗಿ ಚಂಚಲ ಪ್ರಿಯ?''

ಮಹರಾಜ್:- ''ನಮ್ಮ ಹತ್ತಿರ ಮನಸ್ಸಿನ ಚಂಚಲತೆಗೆ ಕಾರಣಗಳೇ ಇಲ್ಲ. ಯಾರ ಹತ್ತಿರ ಪರಿಗ್ರಹಾದಿಗಳಿವೆಯೋ ಅವರಿಗೆ ಅವುಗಳ ರಕ್ಷಣಾರ್ಥ ಚಿಂತೆ ಹುಟ್ಟುತ್ತದೆ. ಆಗ ಮನಸ್ಸಿನಲ್ಲಿ ಚಂಚಲತೆಯೂ ಹುಟ್ಟುತ್ತದೆ. ನಮ್ಮಲ್ಲಿ ಪರಿಗ್ರಹವೂ ಇಲ್ಲ. ತತ್ಕಾರಣ ಚಿಂತೆಯೂ, ಮಾನಸಿಕ ಚಂಚಲತೆಯೂ ಇರುವುದಿಲ್ಲ. ಚಿಂತೆಯನ್ನು ಮಾಡಿ ಸಾಧಿಸುವುದಾದರೂ ಏನನ್ನು? '' ಆಗ ಅವರು ಒಂದು ಸುಂದರ ಉದಾಹರಣೆ ಕೊಟ್ಟರು.

''ಒಂದು ಪಾರಿವಾಳ ಜಹಜಿನ ಧ್ವಜಸ್ತಂಭದ ಮೇಲೆ ಕೊತ್ತಿತ್ತು ಹೊರಗೆ ಹಾರಿ ಹೋಗಲು ಅದು ಇಚ್ಛಿಸುತ್ತಿತ್ತು. ಆದರೆ ಹೋಗುವುದಾರೂ ಎಲ್ಲಿಗೆ? ಆದ್ದರಿಂದ ಒಂದೇ ಸ್ಥಳದಲ್ಲಿ ಸುಮ್ಮನೆ ಕೊತಿತ್ತು. ಈ ಪ್ರಕಾರ ಮನೆ-ಮಠ ಪರಿವಾರಗಳನ್ನು ಬಿಟ್ಟುಬಂದಿರುವ ನಮ್ಮ ಮನಸ್ಸು ಚಂಚಲಗೊಂಡು ಹೋಗುವುದಾದರೂ ಎಲ್ಲಿಗೆ?''

ಚಿಂತಾರಹಿತ ಶಾಂತ ಮನಸ್ಸು

''ನಮ್ಮ ಮನಸ್ಸಿಗೆ ಬೇರೆಲ್ಲಿಯೂ ಆಶ್ರಯವಿರದ ಕಾರಣ ತನ್ನಷ್ಟಕ್ಕೆ ತಾನೇ ಆತ್ಮನಲ್ಲಿ ಬಂದು ಕೂತಿರುತ್ತದೆ. ನಾವು ಎಲ್ಲಿಯೂ ಆತ್ಮಧ್ಯಾನ ಮಾಡಬಲ್ಲೆವು. ಏಕೆಂದರೆ ನಮ್ಮ ಮನಸ್ಸಿಗೆ ಬಾಹ್ಯದಲ್ಲಿ ವಿಶ್ರಮಿಸುವ ಸ್ಥಾನವೇ ಇಲ್ಲ''

ಇನ್ನೊಂದು ಸಂದರ್ಭದಲ್ಲಿ ಚರ್ಚೆ ಧ್ಯಾನದತ್ತ ತಿರುಗಿದಾಗ ಅವರು ತಮ್ಮ ಧ್ಯಾನದ ಅನುಭವ ಹೇಳತೊಡಗಿದರು.

''ನಮ್ಮ ಮನಸ್ಸಿನಲ್ಲಿ ಗಡಿಬಿಡಿಯಾಗಲಿ, ಚಿಂತೆಯಾಗಲಿ ಇಲ್ಲ. ನಾವು ಮೋಕ್ಷ ಸಾಧಿಸಲೂ ಚಿಂತೆ ಮಾಡುವುದಿಲ್ಲ. ಅನಾದಿ ಕಾಲದಿಂದಲೂ ಸಂಸಾರದಲ್ಲಿ

ಇದ್ದೇವೆ. ಈಗ ಅತ್ಯವಸರದ ಗಡಿಬಿಡಿ ಏಕೆ ಹಚ್ಚಿಕೊಳ್ಳುವುದು? ನಾಲ್ಕಾರು ಭವಗಳಲ್ಲಿ ಹೋದೇವು. ಅವಸರ ಪಡುವುದು ಎಂತಹ ಮಾತು?''

ಅವರು ಶಾಸ್ತ್ರ ಸ್ವಾಧ್ಯಾಯದ ಬಗ್ಗೆ ಬಹಳ ಸಾವಧಾನತೆ ವಹಿಸುತ್ತಿದ್ದರು. ಮತ್ತೇ ಹೇಳತೊಡಗಿದರು.

''ನಮಗೆ ಶಾಸ್ತ್ರದ ಬಗ್ಗೆಯೂ ಚಿಂತೆ ಇಲ್ಲ. ಶಾಸ್ತ್ರವನ್ನು ಓದುವುದು ಕೇಳುವುದು ಬಹಳ ಅಗತ್ಯವಿದೆ. ಆದ್ದರಿಂದ ಓದುತ್ತೇವೆ. ಕೇಳುತ್ತೇವೆ. ನಮಗೆ ಓದಲೇ ಬೇಕೆಂಬ ನಿರ್ವಾಹವಿಲ್ಲ'' ಈ ಬಗ್ಗೆ ಅವರು ಒಂದು ಮಾರ್ಮಿಕ ರಹಸ್ಯ ತಿಳಿಸಿದರು.

''ಶಾಸ್ತ್ರದ ಮುಖ್ಯ ರಹಸ್ಯ ಗೊತ್ತಾದ ಮೇಲೆ ಒಮ್ಮೆಯೋ, ಹತ್ತು ಬಾರಿಯೋ ಓದುವುದರಲ್ಲಿ ವ್ಯತ್ಯಾಸವೇನು?

ನಿರಂತರ ಸಾಧನೆಯಿಂದ ಅವರ ಚಿಂತೆಯಲ್ಲಾ ಆತ್ಮ ಚಿಂತೆಯೇ ಆಗಿತ್ತು. ಅವರ ಮಾತೆಲ್ಲಾ ಚಿನ್ಮಯವೇ ಆಗಿತ್ತು. ಅವರ ನಡೆನುಡಿಯಲ್ಲೆಲ್ಲಾ ಮೋಕ್ಷವೇ ತುಂಬಿತ್ತು. ತತ್ವಗಳ ಪರ್ವತವೇ ಆಗಿದ್ದ ಅವರಿಗೆ ಶಾಸ್ತ್ರದ ಅಭ್ಯಾಸವೇಕೆ? ಆತ್ಮ ಚಿಂತನೆಯೇ ಸಾಕು.

ಆತ್ಮ ಧ್ಯಾನದ ಸ್ಥಿತಿ

ನಮ್ಮ ಚರ್ಚೆ ಶಾಸ್ತ್ರಾಧ್ಯಯನದಿಂದ ಆತ್ಮಧ್ಯಾನದತ್ತ ಹೊರಳಿತು. ಅವರು ಸಾವಧಾನ ಪೂರ್ವಕ ತಮ್ಮ ಅಪೂರ್ವ ಅನುಭವ ಹೇಳತೊಡಗಿದರು.

''ಆತ್ಮಧ್ಯಾನದಲ್ಲಿ ಶರೀರದ ಅನುಭವವೇ ಆಗುವುದಿಲ್ಲ. ಆಗ ಬಾಹ್ಯದ ಅನ್ಯ ವಿಚಾರಗಳಾದರೂ ಹೇಗೆ ತಿಳಿದಾವು? ಆತ್ಮಧ್ಯಾನದಲ್ಲಿ ಇಂದ್ರಿಯಾನುಭವವಿಲ್ಲ. ಅಲ್ಲಿ ಆತ್ಮಾನುಭವ ಮಾತ್ರ ಇರುತ್ತದೆ.''

ಅವರು ಸ್ವಲ್ಪ ತಡೆದು ಇಂದ್ರಿಯ ಭೋಗಗಳ ನಿಕೃಷ್ಟತೆ ಬಗ್ಗೆ ಹೇಳತೊಡಗಿದರು.

''ಅದೊಂದು ಸುಖಾಭಾಸ; ಸುಖದ ಭ್ರಮೆ; ಸುಖದ ಒಂದು ಕನಸು.''

ಇಂದ್ರಿಯ ಸುಖ ಹುಚ್ಚರ ಕನಸು. ಏಕೆಂದರೆ ಅದು ಭ್ರಮೆಗೊಂಡ ಜೀವಿಗೆ ಒಂದು ಹುಚ್ಚನ್ನೇ ಹಿಡಿಸುತ್ತದೆ. ಈ ಹುಚ್ಚಿನಿಂದ ಅಶಾಂತಿ ಹುಟ್ಟುತ್ತದೆ. ಆದ್ದರಿಂದ ಇಂದ್ರಿಯ ಭೋಗಗಳನ್ನು ಸುಖದಂತೆ ತೋರುವ ಒಂದು ಭ್ರಮೆ ಎನ್ನುತ್ತಾರೆ.

ಆತ್ಮ ಧ್ಯಾನದ ಬಗ್ಗೆ ಅವರು ಮತ್ತ ತಮ್ಮ ವಿಚಾರ ತಿಳಿಸತೊಡಗಿದರು.

''ಆತ್ಮ ತನ್ನ ಸ್ವರೂಪದಲ್ಲಿ ತಲ್ಲೀನವಾದಾಗ ಹಿಂಸೆ ಅಹಿಂಸೆಗಳ ವಿಕಲ್ಪವೇ ಅಳಿದು ಹೋಗುತ್ತದೆ. ಅನ್ಯ ಜೀವಿಗಳನ್ನು ರಕ್ಷಿಸುವ ಶಿಕ್ಷಿಸುವ ಭಾವವೂ ನಾಶವಾಗುತ್ತದೆ. ಮೋಹದ ಗೋಡೆ ಕಿತ್ತು ಹಾಕಿದ ಮೇಲೆ ಆತ್ಮ ಒಳ ಬರುತ್ತಾನೆ. ಮತ್ತೆ ಹೊರಹೋಗುತ್ತಾನೆ. ಒಳ ಬಂದು ಸೇರಿದಾಗ ಹಿಂಸೆ-ಅಹಿಂಸೆಗಳ ವಿಕಲ್ಪ ಉಂಟಾಗುವುದಿಲ್ಲ.''

ನಿರ್ವಿಕಲ್ಪ ಧ್ಯಾನದಲ್ಲಿ ಸಂಕಲ್ಪ-ವಿಕಲ್ಪ: ಹಿಂಸೆ-ಅಹಿಂಸೆಗಳ ಕಲ್ಪನೆಯೇ ಇರುವುದಿಲ್ಲ. ಇದು ಸೂಕ್ಷ್ಮ ನಿಶ್ಚಯ ದೃಷ್ಟಿಯ ಕಥನ. ಅವರು ಮತ್ತೆ ಬಹಳ ಉತ್ಸಾಹಗೊಂಡು ಹೇಳತೊಡಗಿದರು.

''ಆತ್ಮಧ್ಯಾನದಲ್ಲಿ ಅಂತರ್ಜಲ್ಪವೂ ಇರುವುದಿಲ್ಲ. ಮನಸ್ಸು ಶರೀರದಿಂದ ಭಿನ್ನವಾದ ಆತ್ಮನಲ್ಲಿ ಲೀನವಾಗಿರುತ್ತದೆ. ಮೋಹದ ಬಂಧವನ್ನು ಕಿತ್ತೊಗೆಯದೆ ಅಂತರ್ಜಲ್ಪ ಹೇಗೆ ಬಂದ್ ಆದೀತು? ಆತ್ಮಧ್ಯಾನದಲ್ಲಿ ಇಂದ್ರಿಯ ಜನಿತ ಸುಖವೂ ಇಲ್ಲ, ದುಃಖವೂ ಇಲ್ಲ.''

ಅವರ ಮಾತುಗಳು ಅನುಭವದ ಮೂಸೆಯಿಂದ ಹೊರ ಬರುತ್ತಿದ್ದವು. ಅವರ ಮುಖದಲ್ಲಿ ಆತ್ಮನ ಅರುಣೋದಯದ ಕಿರಣಗಳು ಹೊರಸೂಸತೊಡಗಿದವು. ಅವರು ಮತ್ತೆ ಹೇಳತೊಡಗಿದರು.

'' ಅರೆ! ಯಾವಾಗ ಆರು ತಿಂಗಳ ಅಭ್ಯಾಸದಿಂದಲೇ ಆತ್ಮನ ಪರಿಚಯ ಆಗುವುದೆಂದ ಮೇಲೆ ಜೀವನ ಪೂರ್ಣ ಅಭ್ಯಾಸದಿಂದ ದೃಢತೆ ಬರಲಾರದೇನು?''

''ನಾವು ಧ್ಯಾನವನ್ನು ಪೇಟೆಯಲ್ಲೂ ಮಾಡಬಲ್ಲೆವು! ಧ್ಯಾನಕ್ಕೆ ಪೇಟೆ ಏನು ಮಾಡೀತು? ಧ್ಯಾನ ಮಾಡುವಾಗ ಸಮಯ ಎಣಿಸುವುದಾದರೆ ಅದೆಂತಹ ಧ್ಯಾನ?'' ಮತ್ತೆ ಅವರು ಇದನ್ನೂ ಹೇಳಿದರು ''ಮೊದಮೊದಲು ಧ್ಯಾನ ಕಠಿಣವೆನಿಸುತ್ತದೆ. ಕೊನೆಕೊನೆಗೆ ಅಷ್ಟೇ ಸುಲಭ ಎನಿಸುತ್ತದೆ.''

ಅವರು ಆಧ್ಯಾತ್ಮ ಲೋಕದ ನಿಗೂಢ ರಹಸ್ಯವನ್ನೇ ಹೊರಗೆಳೆಯುತ್ತಿದ್ದರು. ಅತ್ಯಂತ ಆತ್ಮನಿಷ್ಠ ವ್ಯಕ್ತಿಯ ಪ್ರಾಮಾಣಿಕ ವಿವೇಚನೆ ಅದು. ಧ್ಯಾನದಲ್ಲಿ ಏನಾಗುತ್ತದೆ ಎನ್ನುವ ವಿಚಾರದ ಬಗ್ಗೆ ಇನ್ನಷ್ಟು ಹೇಳಲಾರಂಭಿಸಿದರು.

''ಧ್ಯಾನಿಯು ಧ್ಯಾನದಲ್ಲಿ ಜ್ಞಾನವನ್ನು ಪೃಥಕ್ಕರಣ ಮಾಡುತ್ತಾನೆ. ಸ್ವಭಾವದಲ್ಲಿ ಒಂದಾಗುತ್ತಾನೆ. ಆತ್ಮನ ಪರಭಾವ ನಷ್ಟವಾಗುತ್ತದೆ. ಆತ್ಮನಲ್ಲಿ ಏಕತೆ ಮೂಡುತ್ತದೆ. ಆಗ ಚಂಚಲತೆ ಇರುವುದಿಲ್ಲ. ವಿಪರ್ಯಾಸ ಹುಟ್ಟುವುದಿಲ್ಲ. ಅಖಂಡಶಾಂತಿ ಸ್ಫುರಿಸುತ್ತದೆ. ಮೊದಮೊದಲು ಮನಸ್ಸು ಹೊರಹೊರಕ್ಕೇ ಓಡುತ್ತಿರುತ್ತದೆ. ಧ್ಯಾನದ ಮೂಲಕ ಒಳಒಳಕ್ಕೆ ಎಳೆಯುವ ಪ್ರಯತ್ನ ಸದಾ ನಡೆಯುತ್ತದೆ. ಮನಸ್ಸು ಆತ್ಮ ಸ್ವರೂಪ ಬಿಟ್ಟು ಎಲ್ಲಿಗೆ ಹೋದೀತು? ಮಾರ್ಗದಲ್ಲಿ

ಹೋದರೆ ಗುರಿ ಮುಟ್ಟಲು ತಡವಾಗುವುದಿಲ್ಲ. ಮಾರ್ಗ ಬದಲಿಸಿ ಪ್ರಾಣವನ್ನು ಪಣವಾಗಿಟ್ಟು ಹೋರಾಡಿದರೂ ಪಾರಮಾರ್ಥಿಕ ಪ್ರಾಪ್ತಿ ಆಗದು. ಕೇವಲ ಉಪವಾಸಗಳಿಂದಲೇ ಆತ್ಮ ಪ್ರಾಪ್ತಿ ಆಗುವುದಿಲ್ಲ. '' ಅವರು ಇನ್ನೊಂದು ಮಹತ್ಪೂರ್ಣ ಮಾತೂ ಹೇಳಿದರು.

''ಕೆಳಗೆ ದುಮ್ಮಿಕ್ಕುವ ನೀರಿನ ಪ್ರವಾಹದಲ್ಲೂ ಮೀನು ಮೇಲಕ್ಕೇರಬಲ್ಲದು ಅದೇ ರೀತಿ ಜ್ಞಾನಿಯು ತನ್ನ ಸ್ವರೂಪದಲ್ಲಿ ಮೇಲೇರಬಲ್ಲ''

ನಾನು ಕೇಳಿದೆ: ''ಮಹರಾಜ್! ಉಪವಾಸದಲ್ಲಿ ಆತ್ಮನಿಲ್ಲದಿದ್ದರೆ (ಆತ್ಮ ಸಿದ್ಧಿ ಪ್ರಾಪ್ತಿಯಾಗದಿದ್ದರೆ) ವ್ರತ ಉಪವಾಸಗಳು ವ್ಯರ್ಥವಲ್ಲವೆ? ನೀವೇಕೆ ಕಠೋರವಾದ ಉಪವಾಸ ತಪಾದಿಗಳನ್ನು ಮಾಡುತ್ತಿದ್ದೀರಿ?

ಉಪವಾಸದ ಬಗ್ಗೆ ಅನುಭವಪೂರ್ಣ ವಾಣಿ

ಮಹರಾಜ್:- ''ಅಲ್ಪ ಆಹಾರ ಅಥವಾ ಪೂರ್ಣ ಉಪವಾಸದಿಂದ ಪ್ರಮಾದ ಕಡಿಮೆಯಾಗಿ ವಿಚಾರಶಕ್ತಿ ಉದ್ದೀಪನವಾಗುತ್ತದೆ.''

ರಸಪೂರ್ಣ ಆಹಾರದಿಂದ ಇಂದ್ರಿಯಗಳು ಮತ್ತವಾಗಿ ಆಲಸ್ಯ ಉಂಟಾಗುತ್ತದೆ. ಮಾಡುವ ಕೆಲಸದಲ್ಲಿ ನಿರಾಸಕ್ತಿಯೂ ಮೂಡುತ್ತದೆ. ಆಗ ಪ್ರಮಾದ ಹುಟ್ಟುತ್ತದೆ. ಅಲ್ಪಾಹಾರ ಅಥವಾ ಉಪವಾಸದಿಂದ ಇಂದ್ರಿಯಗಳು ಲವಲವಿಕೆಯಿಂದಿರುತ್ತವೆ. ಧ್ಯಾನ ಸಿದ್ಧಿಗೆ ಯೋಗ್ಯ ಮನಸ್ಥಿತಿಯನ್ನು ಸಿದ್ಧಗೊಳಿಸುವುದಷ್ಟೇ ಉಪವಾಸ, ಅಲ್ಪಾಹಾರಗಳ ಕಾರ್ಯ. ಅಷ್ಟರಿಂದಲೇ ಆತ್ಮ (ಸಿದ್ಧಿ) ಪ್ರಾಪ್ತವಾದೀತೇ? ಆತ್ಮನಂತೂ ಧ್ಯಾನಗಮ್ಯ ಉಪವಾಸ ಧ್ಯಾನಕ್ಕೆ ಸುಗಮ ಸೋಪಾನವಷ್ಟೆ. ಇದು ಆಚಾರ್ಯಶ್ರೀಯವರ ಸ್ಪಷ್ಟ ನಿಷ್ಠ ವಿಚಾರವಾಗಿತ್ತು. ಪ್ರಮಾದಗಳು ಆತ್ಮ ಸಿದ್ಧಿಗೆ ಮೊದಲ ಅಡ್ಡಿ. ಈ ಪ್ರಮಾದಗಳು ಉಪವಾಸದಿಂದ ದೂರವಿರಿಸಲ್ಪಡುತ್ತವೆ. ಆಗ ಧ್ಯಾನದಲ್ಲಿ ಆತ್ಮ ಶುಭ್ರ ಆಕಾಶದಲ್ಲಿ ಪ್ರಜ್ವಲಿಸುವ ಸೂರ್ಯನಂತೆ ಗೋಚರಿಸುತ್ತಾನೆ.

ಶಾಂತಿಯ ಸಿಂಧು

ನಾನು ಕೇಳಿದೆ: ''ಮಹರಾಜ್! ಒಬ್ಬ ದೊಡ್ಡ ಆಧ್ಯಾತ್ಮವಾದಿ ಮತ್ತು ಸಮಾಜದ ಸುಪ್ರತಿಷ್ಠಿತ ವಿದ್ವಾಂಸನನ್ನು ನಾನು ಕೇಳಿದೆ; ಏನೆಂದರೆ ನಿಮ್ಮ ಆತ್ಮನಿಗೆ ಬಹಳ ಶಾಂತಿ ಉಂಟಾಗಿರಬಹುದು. ಆಗ ಅವರು ಹೇಳಿದ್ದೇನೆಂದರೆ ನನಗೆ ಸ್ವಲ್ಪವೂ ಶಾಂತಿಯೇ ಇಲ್ಲ. ಆತ್ಮನಲ್ಲಿ ಭಯಂಕರ ಅಶಾಂತಿ ಹುಟ್ಟುತ್ತದೆ'' ಈ ಬಗ್ಗೆ ನಿಮ್ಮ ಅನುಭವದ ಮಾತೇನು?''

ಅವರು ಹೇಳಿದರು- ''ನಮ್ಮಾತ್ಮನಲ್ಲಿ ಅಶಾಂತಿ ಉಂಟಾಗುವುದೇ ಇಲ್ಲ. ಯಾವುದೇ ಪರಿಸ್ಥಿತಿಯಲ್ಲೂ ನಮ್ಮಾತ್ಮನಲ್ಲಿ ಸದಾ ಶಾಂತಿ ತುಂಬಿರುತ್ತದೆ. ಏಕೆಂದರೆ ನಾವು ಅಶಾಂತಿಯ ಕಾರಣವನ್ನು ಓಡಿಸಿ ಬಿಟ್ಟಿದ್ದೇವೆ. ಅಶಾಂತಿಯ ಕಾರಣಗಳು ನಮ್ಮಲ್ಲಿ ಇಲ್ಲದಿರುವಾಗ ಅಶಾಂತಿ ಹೇಗಾದೀತು?''

ಅವರನ್ನು ಶಾಂತಿಸಾಗರ ಎಂದು ಕರೆದುದರ ಅರ್ಥ ಆಗ ನನ್ನ ಮನಸ್ಸಿಗೆ ಚೆನ್ನಾಗಿ ವೇದ್ಯವಾಯಿತು. ಮತ್ತೆ ಅವರು ಹೇಳಿದರು.

''ಇಂತಹ ಧ್ಯಾನ ಆಸನ್ನ ಭವ್ಯ ಜೀವಕ್ಕೆ ಮಾತ್ರ ಆಗುತ್ತದೆ.''

ಧ್ಯಾನ ಎಲ್ಲರಿಗೂ ರುಚಿಸದ ವಸ್ತು ಏಕೆ ಎನ್ನುವುದೂ ತಿಳಿದಂತಾಗಿತ್ತು. ಯಾರು ಆಸನ್ನಭವ್ಯರೋ ಅಂತವರಿಗೆ ಮನಸ್ಸು ಬಾಹ್ಯದಲ್ಲಿ ಮಿಡುಕದೆ ಏಕಾಗ್ರ ಚಿಂತಾ ನಿರೋಧ ಧ್ಯಾನ ಉಂಟಾಗುತ್ತದೆ. ಅಂತಹ ಮಹಾನ್ ತಪಸ್ವೀ ಜೀವಕ್ಕೆ ಶಾಂತಿಯ ಸಾಗರವೇ ಉಪಲಬ್ಧವಾಗುತ್ತದೆ.

ಸಮ್ಯಕ್ತ್ವ

ಯಾವದು ಪ್ರಾಪ್ತವಾಗುವುದರಿಂದ ಸಂಸಾರ ಬಂಧನ ನಷ್ಟವಾಗುವುದೋ ಅಂತಹ ಸಮ್ಯಕ್ತ್ವದ ಬಗ್ಗೆ ಚರ್ಚೆ ನಡೆಯಿತು. ಆಗ ಅವರು ತಮ್ಮ ಮಾತು ಹೇಳತೊಡಗಿದರು.

''ಶುದ್ಧಾತ್ಮಾನುಭವವೇ ನಿಜವಾದ ಸಮ್ಯಕ್ತ್ವ. ತತ್ವಾರ್ಥ ಶ್ರದ್ಧಾನವಂತೂ ಉಪಚಾರ ಸಮ್ಯಕ್ತ್ವವಾಗಿದೆ.'' ಅವರು ಇನ್ನೊಂದು ಮಹತ್ವದ ಮಾತೂ ಹೇಳಿದರು. ಸಮ್ಯಕ್ತ್ವ ಪ್ರಾಪ್ತವಾಗದಿದ್ದರೂ ವ್ರತಗಳನ್ನು ತೆಗೆದುಕೊಂಡು ದೇವಗತಿಗೆ ಹೋಗುವುದು ಉಚಿತ. ಅಲ್ಲಿಂದ ವಿದೇಹಸ್ಥ ತೀರ್ಥಂಕರ ಭಗವಾನರ ದರ್ಶನದಿಂದ ತತ್ವಜ್ಞಾನ ಹುಟ್ಟಿ ಸಮ್ಯಕ್ತ್ವ ಪ್ರಾಪ್ತವಾಗುತ್ತದೆ.''

ಆತ್ಮ ಪರಮಾತ್ಮರು ಬೇರೆ ಬೇರೆ ಅಲ್ಲ

ಅವರು ಹೇಳಿದರು: ''ಸಮ್ಯಕ್ತ್ವದ ಮಹಿಮೆಯಿಂದ ಮೋಕ್ಷ ಅವಶ್ಯವಾಗಿ ಪ್ರಾಪ್ತವಾದೀತೆಂದು ನಾವು ದೃಢವಾಗಿ ಹೇಳುತ್ತೇವೆ. ಆತ್ಮನಲ್ಲಿ ರುಚಿಯೇ ಸಮ್ಯಕ್ತ್ವ. ಆತ್ಮನನ್ನು ತಿಳಿಯದ ಮೇಲೆ ಶ್ರದ್ಧೆ ಯಾವುದರ ಮೇಲೆ? ಗುರು ಮತ್ತು ಶಾಸ್ತ್ರ ಮೂರ್ತಗಳಾಗಿವೆ. ಆತ್ಮ ಅಮೂರ್ತ. ಅದರಲ್ಲಿ ಶ್ರದ್ಧೆ ಹೇಗೆ ಇಡುವುದು? ವಸ್ತು ಸ್ಥಿತಿ ನಿಮಗೆ ತಿಳಿದೇ ಇಲ್ಲ. ಅರೆ! ಆತ್ಮ ಮತ್ತು ಪರಮಾತ್ಮ ಬೇರೆ ಬೇರೆ ಅಲ್ಲ. ಆತ್ಮನನ್ನು ನೋಡಿದರೆ ಪರಮಾತ್ಮನನ್ನು ನೋಡಿದಂತೆಯೇ''

ಸಂಸಾರಿ ಮತ್ತು ಆಗಸ

ಶರೀರ ಮತ್ತು ಆತ್ಮ ಇವರೆಡರ ಭಿನ್ನತೆಯ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಹೀಗೆ ಹೇಳಿದರು.

''ಈ ಮನೆ (ಶರೀರ) ನಮ್ಮದಲ್ಲ. ಈ ಮನೆ ಬೀಳತೊಡಗಿದರೆ (ವಯಸ್ಸಾದರೆ) ಇನ್ನೊಂದು ಮನೆಗೆ ಹೋಗಿ ವಾಸವಾಗುತ್ತೇವೆ.''

ಜಗತ್ತಿನಲ್ಲಿ ದೊಡ್ಡದೊಡ್ಡ ಪಂಡಿತರಿದ್ದಾರೆ. ವಾಚಾಳಿಗಳಿದ್ದಾರೆ. ಆತ್ಮಜ್ಞಾನವಿಲ್ಲದ ಅವರ ಪಾಂಡಿತ್ಯ ಶವದ ಶೃಂಗಾರವಿದ್ದಂತೆ! ಈ ವಿಚಾರವನ್ನು ತಮ್ಮ ಅನುಭವದಿಂದ ತಿಳಿಸಿದರು.

''ನಿನ್ನಲ್ಲಿ ಏನೂ ಇಲ್ಲದಿರುವಾಗ ಜಗತ್ತಿಗೆ ಏನು ಕೊಡಬಲ್ಲೆ? ಭವಭವದಲ್ಲೂ ನೀನು ಅಗಸನ ಕೆಲಸ ಮಾಡಿದ್ದೀಯಾ! ಅನ್ಯರ ಬಟ್ಟೆಯನ್ನು ಶುದ್ಧಿ ಮಾಡಿದ್ದೀಯೆ ಹೊರತು ನಿನ್ನ ಬಟ್ಟೆ ಶುದ್ಧಿ ಮಾಡಿಕೊಳ್ಳುವ ವಿಚಾರ ನೀನು ಮಾಡುತ್ತಿಲ್ಲ. ಅರೆತಮ್ಮಾ! ನಿನ್ನ ಆತ್ಮನಿಗೆ ನೀನು ಉಪದೇಶ ಮೊದಲು ಕೊಡು. ಅದು ಬಿಟ್ಟು ಕೇವಲ ಜಗತ್ತನ್ನು ಶುದ್ಧಿ ಮಾಡುತ್ತೇನೆಂದು ಹೊರಟರೆ ಆಗದು. ಸ್ವಲ್ಪವಾದರೂ ಸ್ವಕಲ್ಯಾಣ ಮಾಡಿಕೊಂಡರೆ ಅದೇ ದೊಡ್ಡದಾದೀತು''

ಆತ್ಮ ಕಲ್ಯಾಣದ ಮಾರ್ಗ

ಈಗ ಭಗವಾನರಿಲ್ಲ. ಶ್ರುತಕೇವಲಿಗಳೂ ಇಲ್ಲ. ಆತ್ಮ ಕಲ್ಯಾಣಮಾರ್ಗ ಹೇಗೆ ಸಿಕ್ಕೀತು? ಈ ಬಗ್ಗೆ ಅವರು ಸ್ಪಷ್ಟೀಕರಣ ಕೊಡತೊಡಗಿದರು.

''ಜಿನವಾಣಿಗೆ ಶರಣಾಗು. ಆ ವಾಣಿಯಲ್ಲಿ ಅದ್ಭುತ ಶಕ್ತಿ ತುಂಬಿದೆ. ಆ ವಾಣಿಯಂತೆ ನಡೆ. ನಿನ್ನ ಇಚ್ಛೆ ಕೈಗೂಡೀತು. ಈ ಮಾತನ್ನು ನಾವು ದೃಢ ವಿಶ್ವಾಸದಿಂದ ಹೇಳುತ್ತಿದ್ದೇವೆ. ಮಾರ್ಗದಲ್ಲಿ ನಡೆ. ಮೋಕ್ಷ ಸಿಕ್ಕೀತು.''

ಶಂಕೆ- ಸಮಾಧಾನ

ಒಮ್ಮೆ ಒಬ್ಬ ತತ್ವಜ್ಞಾನಿಗೆ ಒಂದು ಶಂಕೆ ಮೂಡಿತು. ಅವನು ಮಹರಾಜರಲ್ಲಿ ವಿನಂತಿಸಿದ.

''ಮಹರಾಜ್! ಇಂದ್ರಿಯ ಸುಖ ತ್ಯಜಿಸಿದ್ದೀರಿ. ನೀವು ಭಕ್ತಾದಿಗಳಿಗೆ ವ್ರತಾದಿಗಳ ಉಪದೇಶ ಕೊಟ್ಟು ಸ್ವರ್ಗಾದಿಭೋಗಗಳ ಕಡೆ ಗಮನ ಸೆಳೆಯುತ್ತಿದ್ದೀರಿ. ಇದರಿಂದ ನಿಮ್ಮ ಮಹಾವ್ರತಕ್ಕೆ ದೋಷ ಬರುವುದಿಲ್ಲವೇ? ಏಕೆಂದರೆ ನೀವು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ವಿಷಯ ಸುಖವನ್ನು

ಸಮರ್ಥಿಸಿಕೊಂಡಂತಾಗುತ್ತದೆ. ನೀವಂತೂ ವಿಷಯಕಷಾಯಗಳನ್ನು ಮನವಚನಕಾಯ ಕೃತಕಾರಿತ ಅನುಮೋದಗಳಿಂದಲೂ ತ್ಯಜಿಸಿದ್ದೀರಿ?''

ಇಂತಹ ಮಹತ್ಪೂರ್ಣ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಮರ್ಮಜ್ಞವಾಗಿತ್ತು. ಆ ವ್ಯಕ್ತಿಯ ಸಂದೇಹ ದೂರ ಮಾಡುತ್ತಾ ಹೀಗೆ ಹೇಳಿದರು.

''ನಿನಗೆ ಸ್ವರ್ಗಸುಖ ಸಿಗುವುದೋ ಬಿಡುವುದೋ; ಅಥವಾ ಸ್ವರ್ಗಾದಿ ಭೋಗಗಳನ್ನು ನೀನು ಚೆನ್ನಾಗಿ ಅನುಭವಿಸು, ಬಿಡು, ಆ ದೃಷ್ಟಿಯಿಂದ ನಾನು ನಿನಗೆ ಉಪದೇಶ ಕೊಡಲಿಲ್ಲ. ನನ್ನ ಉಪದೇಶದ ಉದ್ದೇಶವೇನೆಂದರೆ- ವ್ರತಾಚರಣೆಗಳಿಂದ ನೀನು ದೇವಗತಿಯಲ್ಲಿ ಜನಿಸಿ ಅಲ್ಲಿಂದ ವಿದೇಹ ಕ್ಷೇತ್ರಕ್ಕೆ ಹೋಗಿ ಕೇವಲಿ ಭಗವಾನರ ದರ್ಶನ ಮಾಡು. ಅವರ ಉಪದೇಶದಿಂದ ನಿನಗಲ್ಲಿ ಭವಾವಳಿಯ ಬೋಧೆಯಾಗುತ್ತದೆ. ಅದರಿಂದ ಸಮ್ಯಕ್ತ್ವ ಉತ್ಪತ್ತಿಯಾಗುತ್ತದೆ. ವ್ರತಾಚರಣೆಯನ್ನು ಈ ದೃಷ್ಟಿಯಿಂದ ಮಾಡಿದರೆ ಮಾತ್ರ ಮೋಕ್ಷಮಾರ್ಗಿಯಾಗುತ್ತೀಯೆ.''

ಎಷ್ಟು ಸುಂದರ ಮತ್ತು ಹೃದಯಂಗಮ ಸಮಾಧಾನ ಇದು. ಯಾರು ವ್ರತಾದಿಗಳು ಕೇವಲ ಶುಷ್ಕಕ್ರೀಯೆಗಳು ಎಂದು ಭಾವಿಸುತ್ತಾರೋ ಮತ್ತು ಅಜ್ಞಾನಿ ಜೀವಿಗಳನ್ನು ಅದರಿಂದ ವಿಮುಖಗೊಳಿಸುತ್ತಾರೋ ಅಂತವರು ಈ ಮಾತುಗಳನ್ನು ಚಿಂತಿಸಲಿ. ಅನಾದಿ ಸಂಸ್ಕಾರದಿಂದ ಜೀವ ಆಹಾರ ಭಯ ಮೈಥುನ ಪರಿಗ್ರಹ ಈ ನಾಲ್ಕು ಸಂಜ್ಞೆಯ ಕಡೆ ಓಡುತ್ತದೆ. ಸಂಯಮವೆಂದರೆ ಭಯ ಪಡುತ್ತವೆ. ಸಂಯಮವೆಂಬ ಸುವಾಸನಾಯುಕ್ತ ಸುಂದರ ಪುಷ್ಪ ಮನುಷ್ಯ ಭವದಲ್ಲೇ ಅರಳುತ್ತದೆ. ಅನ್ಯಭವದಲ್ಲಿ ಇಲ್ಲ. ಆದರೆ ಅಂತಹ ಅಮೃತ ತುಲ್ಯ ಸಂಯಮ ಧಾರಣೆ ಮಾಡುವ ಪಾತ್ರತೆ ಇರದಿದ್ದಾಗ, ಕನಿಷ್ಠ ವ್ರತಾಚರಣೆಗಳಿಂದಲಾದರೂ ಆತ್ಮನನ್ನು ಸುಧಾರಿಸಿಕೊಳ್ಳುವ. ಉಪದೇಶದ ಅಗತ್ಯವಿದೆ. ವ್ರತಾದಿಗಳಿಂದ ದೇವಾಯು ಆಸ್ರವವಾಗುವ ಸಂಭವವಿರುತ್ತದೆ. ಭೋಗಿಗೇ ಆಗಲಿ ಆತ್ಮಯೋಗಿಗೇ ಆಗಲಿ ವ್ರತಗಳು ಸದ್ಗತಿಗೆ ಕಾರಣಗಳಾಗಿವೆ. ಆದರೆ ಬೋಗಿ ತನ್ನ ವ್ರತಾದಿಗಳ ಪುಣ್ಯದಿಂದ ಆ ಭೋಗಗಳು ಪ್ರಾಪ್ತಿಯಾದಾಗ ಅವುಗಳಲ್ಲೇ ಮತ್ತೆ ಮತ್ತೆ ಮುಳುಗುತ್ತಾನೆ. ಅವನು ದೀರ್ಘ ಸಂಸಾರಿಯಾಗುತ್ತಾನೆ. ಅಂದರೆ ಭೋಗಿಯ ವ್ರತಾದಿಗಳು ದೀರ್ಘ ಸಂಸಾರಕ್ಕೆ ಕಾರಣಗಳಾಗಿವೆ. ಆತ್ಮಯೋಗಿ ವ್ರತಾದಿಗಳ ಪುಣ್ಯದಿಂದ ಭೋಗಗಳು ದೊರೆತರೂ ಆತ್ಮಯೋಗದ ಕಡೆಗೇ ತನ್ನ ಮನಸ್ಸನ್ನು ಕೇಂದ್ರೀಕರಿಸುವುದರಿಂದ (ನಿರ್ಲಿಪ್ತನಾಗಿರುವುದರಿಂದ) ಮೋಕ್ಷ ಮಾರ್ಗಿಯಾಗುತ್ತಾನೆ. ವ್ರತಾದಿಗಳು ಅವಶ್ಯ ದೇವಗತಿಗೆ ಕಾರಣಗಳಾಗಿರುವುದರಿಂದ, ಜಿನೇಂದ್ರ ಭಗವಾನರ ದರ್ಶನವನ್ನು ಆ ದೇವಗತಿಯ ಮಾಧ್ಯಮದ ಮೂಲಕ ಮಾಡಿಕೊಳ್ಳುವ ಉಪದೇಶವಿದೆ. ಇಲ್ಲಿ ವ್ರತಾದಿಗಳ ಧಾರಣೆ

ದೇವಗತಿಯ ಭೋಗಕ್ಕಾಗಿ ಅಲ್ಲ. ಸ್ವರ್ಗದ ಪ್ರಾಪ್ತಿಗಾಗಿಯೂ ಅಲ್ಲ. ಸ್ವರ್ಗದ ಮಾಧ್ಯಮದ ಮೂಲಕ ಭಗವಂತನ ದರ್ಶನ ದೃಢ ತತ್ವಶ್ರದ್ಧಾನ ಮತ್ತು ಮೋಕ್ಷ ಮಾರ್ಗದ ಪ್ರಾಪ್ತಿ ಮಾತ್ರ ಆಗಿರುತ್ತದೆ.

ಒಂದು ವೇಳೆ ಈ ಮಾರ್ಗದಲ್ಲಿ ಹೋಗುವಾಗ ಸ್ವರ್ಗದ ಸುಖಗಳನ್ನೇ ತೆಕ್ಕೆಯಾಗಿ ಹಿಡುದು ಕುಳಿತು ಬಿಟ್ಟರೆ ಕೆಟ್ಟಿತು. ಆಗ ಉಪದೇಶಕರ ತಪ್ಪೇನು? ವ್ರತಾದಿಗಳು ಭೋಗಕ್ಕೂ ಕಾರಣವಾಗುತ್ತವೆ. ಆತ್ಮಯೋಗಕ್ಕೂ ಕಾರಣವಾಗುತ್ತವೆ. ಆತ್ಮಯೋಗದ ಅಪೇಕ್ಷೆಯಿಂದ ಕೊಟ್ಟ ಉಪದೇಶವನ್ನು ಭೋಗಕ್ಕಾಗಿ ಉಪಯೋಗಿಸಿ ಕುಳಿತರೆ ಯಾರ ತಪ್ಪು? ಮೋಕ್ಷಕಾಂಕ್ಷಿಗೆ ಚತುರ್ಗತಿಗಳು ಸಮಾನವಾಗಿವೆ. ಎಲ್ಲೇ ಹುಟ್ಟಲಿ. ಆತ್ಮ ಜಾಗೃತಿ ಇದ್ದರೆ ತೀರಿತು. ಭೋಗ ಜಾಗೃತಿ ಇದ್ದರೆ ಕೆಟ್ಟಿತು. ಇದಿಷ್ಟೇ ಅವರ ವ್ರತಾದಿಗಳ ಉಪದೇಶದ ಸಾರವಾಗಿತ್ತು. ಮುಖ್ಯ ಮಾತೆಂದರೆ ಸಂಸಾರ ತಟ ಸಮೀಪವಿರುವ ಜೀವಗಳು ವ್ರತಾದಿ ಸಂಯಮಗಳ ಉಪದೇಶವನ್ನು ಆನಂದದಿಂದ ಸ್ವೀಕರಿಸುತ್ತವೆ. ಉಳಿದ ಜೀವಗಳು ಧಿಕ್ಕರಿಸುತ್ತವೆ. ಈ ಎಲ್ಲಾ ಸ್ಪಷ್ಟೀಕರಣ ಅಂತವರಿಗೆ ಅರಣ್ಯರೋಧನ. ಕಾಲಲಬ್ಧಿ ಬರದಿದ್ದಾಗ ವ್ರತಾಚರಣೆಗಳ ಮೂಲಕವಾದರೂ ನರಕಾದಿ ದುರ್ಗತಿಗಳಿಂದ ತಪ್ಪಿಸಿಕೊಂಡು ಹೋಗಿ ಸ್ವರ್ಗಾದಿ ಸದ್ಗತಿಗಳಲ್ಲಿ ಹುಟ್ಟಿ ಮಧ್ಯವರ್ತಿ ಕಾಲವನ್ನು ಕಳೆಯುವುದು ಒಳ್ಳೆಯದು. ಇಷ್ಟೋಪದೇಶದಲ್ಲಿ ಪೂಜ್ಯಪಾದ ಸ್ವಾಮಿಯವರು ಇದೇ ಮಾತನ್ನು ಪ್ರತಿಪಾದಿಸಿದ್ದಾರೆ.

''ಮೋಕ್ಷಕ್ಕೆ ಹೋಗುವ ಅರ್ಹತೆ ಇನ್ನೂ ಬರದಿದ್ದಾಗ ಮಧ್ಯವರ್ತಿ ಕಾಲವನ್ನು ವ್ರತಾಚರಣೆಗಳ ಮೂಲಕ ದೇವಪರ್ಯಾಯದಲ್ಲಿ ಕಳೆಯುವುದು ಒಳ್ಳೆಯದು. ಅಸಂಯಮದಿಂದ ನರಕಾದಿ ದುಃಖದಲ್ಲಿ ಕಳೆಯುವುದು ಒಳ್ಳೆಯದಲ್ಲ! ಯಾರು ನೆರಳಿನಲ್ಲಿ ಕುಳಿತು, ಬಿಸಲಿನಲ್ಲಿ ಕುಳಿತು ತಮ್ಮ ತಮ್ಮ ಇಷ್ಟ ಜನರನ್ನು ಪ್ರತೀಕ್ಷೆ ಮಾಡುತ್ತಾರೋ ಅವರಿಬ್ಬರಲ್ಲಿ ಬಹಳ ಅಂತರವಿದೆ.''

ಎಲ್ಲಿಯವರೆಗೆ ವಜ್ರವೃಷಭನಾರಚ ಸಂಹನನಾದಿ ನಿರ್ವಾಣೋಪಯೋಗಿ ಸಕಲ ಸಾಮಗ್ರಿ ಈ ಜೀವಕ್ಕೆ ಪ್ರಾಪ್ತವಾಗುವುದಿಲ್ಲವೋ ಅಲ್ಲಿವರೆಗೆ ಅವ್ರತ ಪ್ರಮಾದ ಕಷಾಯಗಳಿಂದ ನರಕಾದಿ ದುಃಖಗಳನ್ನು ಭೋಗಿಸುವುದಕ್ಕಿಂತ ವ್ರತ ಸಂಯಮಾದಿಗಳಿಂದ ಸ್ವರ್ಗಾದಿ ಸುಖಗಳನ್ನು ಪಡೆದುಕೊಂಡು ಮೋಕ್ಷ ಸಾಮಾಗ್ರಿಗಳನ್ನು ಸಂಪಾದಿಸಿಕೊಳ್ಳುವುದು ಒಳ್ಳೆಯದು. ಸಂಯಮ ಎಲ್ಲಾ ದೃಷ್ಟಿಯಿಂದ ಜೀವಕ್ಕೆ ಹಿತಕಾರಿಯಾಗಿದೆ. ಸಂಯಮ, ವ್ರತಾಚರಣೆ, ಜಿನೇಂದ್ರ ಪೂಜೆ, ಪಾತ್ರದಾನಾದಿ (ಸತ್ಕ್ರಿಯಗಳ) ಬಗ್ಗೆ ವಿದ್ವೇಷಭಾವ ಮೂಡಿಸುವುದು ಆತ್ಮನಿಗೆ ಕಾಲಾಂತರದಲ್ಲಿ ಮಹಾದುಃಖಕ್ಕೆ ಬೀಜವಾಗಿದೆ. ಆಚಾರ್ಯಶ್ರೀಯವರು ತಮ್ಮ ಉಪದೇಶದಲ್ಲಿ ಸದಾ ಪ್ರಾಣಿಸಂಯಮ, ಇಂದ್ರಿಯ ಸಂಯಮಗಳಿಗೇ ಒತ್ತು

ಕೊಟ್ಟು ಉಪದೇಶ ಕೊಡುತ್ತಿದ್ದರು. ಸಕಲ ಜೀವಿಗಳಿಗೆ ಕಲ್ಯಾಣಕಾರಿಣಿಯಾದುದು ಸಂಯಮ. ಸಂಯಮ ಎಂಬ ವೃಕ್ಷದಲ್ಲಿಯೇ ಸಕಲ ಜೀವಿಗಳ ಆನಂದದ ಪುಷ್ಪ ನಳನಳಿಸಿ ಅರಳುತ್ತದೆ. ಆದ್ದರಿಂದ ಅವರ ಉಪದೇಶ ಸರ್ವಕಾಲೀಕ. ಸಮಸ್ತ ಜೀವಿಗಳ ಕಲ್ಯಾಣಕಾರಿ.

ಜಿನೇಂದ್ರ ಭಗವಂತನ ವಾಣಿ ಗಣಧರ ಪರಮೇಷ್ಠಿಯ ಮೂಲಕ ದ್ವಾದಶಾಂಗ ಶೃತರೂಪದಲ್ಲಿ ನಿಬದ್ಧವಾಯಿತು. ಅದರಲ್ಲಿ ಪ್ರಥಮ ಅಂಗವೇ ಆಚಾರ (ಚಾರಿತ್ರ) ಪ್ರತಿಪಾದಕ ಆಚಾರಾಂಗ. ಆತ್ಮನನ್ನು ಪ್ರತಿಪಾದಿಸುವ ಅಂಗವನ್ನು ಹನ್ನೆರಡನೆಯದರಲ್ಲಿ ಇಡಲಾಗಿದೆ. ಇದನ್ನು ಆತ್ಮ ಪ್ರವಾದ ಪೂರ್ವ ಎಂದು ಕರೆದರು. ಆದ್ದರಿಂದ ಸರ್ವಪ್ರಥಮ ಚಾರಿತ್ರಕ್ಕೆ ಮಹತ್ವಕೊಡಲಾಗಿದೆ. ಮಹಾಪುರಾಣದಲ್ಲಿ ಭಗವಜ್ಜಿನಸೇನರು ಹೀಗೆ ಹೇಳಿದರು.

''ಗುರುವಿನ ಮೂಲಕ ಸರ್ವಪ್ರಥಮ ಶ್ರಾವಕಚಾರ ತಿಳಿದುಕೊಳ್ಳತಕ್ಕದ್ದು. ನಂತರವೇ ಆತ್ಮ ವಿಷಯಕವಾದ ಅನ್ಯಶಾಸ್ತ್ರಗಳನ್ನು ಅಧ್ಯಯನ ಮಾಡಲಿ. ಆ ಸೂತ್ರ ಹೀಗಿದೆ.

ಸೂತ್ರ ಮೌಪಾಸಿಕಂ ಚಾಸ್ಯ ಸ್ಯಾದಧ್ಯೇಯಂ ಗುರೋರ್ಮುಖಾತ್,

ವಿನಯೇನ ತತೋಽನ್ಯಚ ಶಾಸ್ತ್ರಮದಾತ್ಮ ಗೋಚರಮ್ (೪೮. ೧೧೮.)

ಸತ್ಯಮಹಾವ್ರತಿ ಋಷಿ ಪ್ರಣೀತಿವಾಣಿ ವಂದ್ಯನೀಯವಾಗಿರುತ್ತದೆ.

ಪರಮಾತ್ಮ ಪ್ರಕಾಶ ಟೀಕೆಯಲ್ಲಿ ಒಂದು ಮಾತು ಬಂದಿದೆ. ತೀರ್ಥಂಕರರ ಮುಖ್ಯ ಪ್ರಶ್ನೆ ಕರ್ತಾ (ಶ್ರೇಣಿಕ) ೬೦ ಸಾವಿರ ಪ್ರಶ್ನೆ ಹಾಕಿದನಂತೆ. ಅವುಗಳಲ್ಲಿ ಅಂತಿಮ ಪ್ರಶ್ನೆಗಳು ಆತ್ಮನ ಬಗ್ಗೆಯಾಗಿದ್ದವಂತೆ. ಇಂತಹ ಆತ್ಮನ ಬಗ್ಗೆ ಹಗುರವಾಗಿ ಚರ್ಚೆ ಮಾಡುವುದು ಬಾಲಕ್ರೀಡೆಯಲ್ಲ. ಪ್ರಕಾಶ ಟೀಕೆಯಲ್ಲಿ ಹೀಗೆ ಹೇಳಿದ್ದಾರೆ.

''ಸರ್ವಾಗಮ ಪ್ರಶ್ನಾನಂತರಂ ಸರ್ವಪ್ರಕಾರೋಪಾದೇಯಂ ಶುದ್ಧಾತ್ಮಾನಂ ಪೃಚ್ಛತೀತಿ'' (ಪೃ. ೨೦) ಈ ಬಗ್ಗೆ ಅವರು ಒಂದು ನಿರ್ಣಾಯಿಕ ಉತ್ತರ ಕೊಟ್ಟಿದ್ದರು.

''ಸಮ್ಯಕ್ತ್ವ ಮತ್ತು ಚಾರಿತ್ರಗಳಿಗೆ ದೊಡ್ಡ ಸಂಬಂಧವಿದೆ. ಮತ್ತೆ ಒಂದರದ್ದೇ ಪ್ರಶಂಸೆ ಯಾಕೆ ಮಾಡುತ್ತೀರಿ?''

ಕಾನಜಿ ಬಾಬಾನೊಡನೆ ಚರ್ಚೆ

ಒಮ್ಮೆ ಅವರು ನನಗೆ ಹೇಳಿದರು.

''ಗಿರಿನಾರ್ ಯಾತ್ರೆಯಿಂದ ವಾಪಾಸಾದಗ ಕಾನಜಿ ನಮ್ಮನ್ನು ಕರೆದುಕೊಂಡು ಹೋದರು. ನಾವು ಕಾನಜಿಗೆ ಒಂದು ಪ್ರಶ್ನೆ ಹಾಕಿದೆವು. ''ಈ ದಿಗಂಬರ ಪಂಥದಲ್ಲಿ ನಿಮಗೆ ಒಳ್ಳೆಯದೇನು ಕಂಡಿತು. ನಿಮ್ಮ ಪಂಥದಲ್ಲಿ ಕೆಟ್ಟದೇನು ಕಂಡಿತು'' ಈ ಪ್ರಶ್ನೆಗೆ ಅವರೇನೂ ಹೇಳಲಾರದೆ ಹೋದರು. ಅರ್ಧ ಗಂಟೆಯಾದರೂ ಅವರ ಬಾಯಿಂದ ಒಂದು ಶಬ್ದವೂ ಹೊರಡಲಿಲ್ಲ. ನಾವು ಮತ್ತೆ ಅವರಿಗೆ ಹೇಳಿದೆವು. ''ನಾವು ನಿಮ್ಮ ಉಪದೇಶ ಕೇಳಲು ಇಲ್ಲಿಗೆ ಬರಲಿಲ್ಲ. ನಿಮ್ಮ ಭಾವವೇನು ತಿಳಿಯಬೇಕಾಗಿತ್ತು''

ಇದಾದ ನಂತರ ಏನಾಯಿತು ಎಂದು ಮತ್ತೆ ಹೇಳತೊಡಗಿದರು. ಕಾನಜಿ ಒಂದು ಪ್ರಶ್ನೆ ಹಾಕಿದರು.

''ಮಹರಾಜ್! ಸಮಯಸಾರದ ಒಂದು ಗಾದೆ ನವಪದಾರ್ಥ ಭೂತಾರ್ಥ ಎಂದು ಹೇಳಿದೆ. ಈ ಗಾಥೆ ಪ್ರಕ್ಷಿಪ್ತ ಎಂದು ತೋರುತ್ತದೆ. ಏಕೆಂದರೆ ಜೀವ ಪದಾರ್ಥವೇ ಭೂತಾರ್ಥವಾಗುತ್ತದೆ.''

ಇದಾದನಂತರ ಸಾಮಾಯಿಕ ಸಮಯವಾಗಿತ್ತು. ಸಾಮಾಯಿಕಕ್ಕೆ ಅವರು ಎದ್ದರು. ಪ್ರಶ್ನೆಗೆ ಉತ್ತರ ಕಾದಿರಿಸಲ್ಪಟ್ಟಿತು. ಮತ್ತೆ ಅವರು ಹೇಳತೊಡಗಿದರು.

''ಸಾಮಾಯಿಕ ಸಮಯದಲ್ಲಿ ಮನಸ್ಸು ಸ್ಥಿರವಾಗಿರುತ್ತದೆ. ಆಗ ನಾವು ಗಹನ ವಿಚಾರಗಳನ್ನು ಚಿಂತಿಸುತ್ತೇವೆ. ಸಾಮಾಯಿಕವಾದ ನಂತರ ಗಾಥೆಗಳ ಪೂರ್ವಾಪರ ಪ್ರಸಂಗಗಳನ್ನು ಅಧ್ಯಯನ ಮಾಡಿ ಅವರಿಗೆ ಹೇಳಿದೆವು ''ಅಜ್ಞಾನಿ ರೈತನಿಗೂ ಸಮ್ಯಕ್ತ್ವ ಅನ್ವೇಷಣೆ ಮಾಡಬೇಕಾಗಿದೆ. ಅವನಿಗೆ ಸಮ್ಯಕ್ತ್ವ ಎಲ್ಲಿ ಸಿಗಬಲ್ಲದು? ಜೀವದಲ್ಲೇ ಸಿಗಬಲ್ಲದು ಎನ್ನುವುದೇ ಉತ್ತರ. ಜೀವ ಎಲ್ಲಿ ಸಿಗಬಲ್ಲದು ಎನ್ನುವ ಪ್ರಶ್ನೆ ಮತ್ತೆ ಆಗುತ್ತದೆ. ಜೀವ ನವ ಪದಾರ್ಥಗಳಲ್ಲಿ ಸಿಗುತ್ತದೆ ಎನ್ನುವುದೇ ಅದಕ್ಕೆ ಉತ್ತರ. ಜೀವದ ಸಂಬಂಧ ಆಸ್ರವ ಬಂಧ ಸಂವರಾದಿಗಳೊಡನೆ ಇದೆ. ಇಲ್ಲಿ ಜೀವ ಒಂದು ಅಂಕೆಯ ಸಮಾನ. ಉಳಿದವುಗಳು ಸೊನ್ನೆಕ್ಕೆ ಸಮಾನ. ಆದ್ದರಿಂದ ಸಮಯಸಾರದ ಈ ಸೂತ್ರ ಪ್ರಕ್ಷಿಪ್ತವಲ್ಲ.''

ಅದಕ್ಕೆ ಅವರು ಒಂದು ಉದಾಹರಣೆ ಕೊಟ್ಟರಂತೆ.

''ಜೋಳದ ರಾಶಿಯಲ್ಲೊಂದು ಮುತ್ತು ಬಿದ್ದು ಹೋಗಿದೆ. ಆಗ ಜೋಳದ ರಾಶಿಯನ್ನೇ ಹುಡುಕಬೇಕು. ಮುತ್ತು ಸಿಕ್ಕನಂತರ ಜೋಳದ ರಾಶಿ ಹುಡುಕುವ ಅಗತ್ಯವಿಲ್ಲ. ಇದೇ ಪ್ರಕಾರ ಜೀವ ದ್ರವ್ಯ, ಆಸ್ರವಾದಿಗಳಲ್ಲಿ ಕಳೆದುಹೋಗಿದೆ. ಅದನ್ನು ಗುಣಸ್ಥಾನ ಮಾರ್ಗಣಾಸ್ಥಾನಗಳಲ್ಲಿ ಹುಡುಕಬೇಕಾಗಿದೆ. ಆ ಆತ್ಮರಾಮ ದೊರಕಿದ ಕೂಡಲೇ ಹುಡುಕಾಟ ಬಂದ್ ಆಗುತ್ತದೆ. ಮತ್ತು ಸ್ವರೂಪದ ರಸಪಾನ ಆರಂಭಗೊಳ್ಳುತ್ತದೆ''

ಪೂಜ್ಯಶ್ರೀಯವರ ಈ ವಿವರಣೆ ಕೇಳಿ ಕಾನಜಿ ಸುಮ್ಮನಾಗಿಬಿಟ್ಟರು. ಈ ಪ್ರಬಲ ತರ್ಕದ ವಿರುದ್ಧ ಏನು ಹೇಳಲು ಸಾಧ್ಯವಾದೀತು. ಆಗ ಸ್ವ. ವರ್ಧಮಾನಸಾಗರ ಮುನಿಗಳೂ ಮತ್ತು ಬ್ರ. ಜಿನದಾಸ್‌ಜಿ ಸಮಡೋಳಿಕರ್‌ರವರುಗಳೂ ಉಪಸ್ಥಿತರಿದ್ದರು. ಪೂಜ್ಯಶ್ರೀಯವರು ಆಗ ಸೋನಾಗಡದಲ್ಲಿ ನಿಲ್ಲಲಿಲ್ಲ.

ವ್ಯವಹಾರ ನಿಶ್ಚಯದ ಸುಂದರ ಸಮನ್ವಯ

ಅನೇಕ ವಿದ್ವಾಂಸರುಗಳು ಪೂಜ್ಯಶ್ರೀಯವರಲ್ಲಿ ವಿನಮ್ರ ಪ್ರಾರ್ಥನೆಯನ್ನು ಮುಂದಿಟ್ಟರು.

''ಜನಗಳು ನಿಶ್ಚಯಧರ್ಮದ ಹೆಸರಿನಲ್ಲಿ, ವ್ಯವಹಾರ ಧರ್ಮ ಬಿಡತೊಡಗಿದ್ದಾರೆ. ಯಥಾರ್ಥ ಮಾರ್ಗ ಯಾವುದು?'' ಆಗ ಅವರು ಒಂದು ಸುಂದರ ಉದಾಹರಣೆಯೊಡನೆ ಸ್ಪಷ್ಟ ವಿಚಾರ ತಿಳಿಸಿದರು.

'ವ್ಯವಹಾರ ಪುಷ್ಪಸದೃಶ. ವೃಕ್ಷದಲ್ಲಿ ಸರ್ವಪ್ರಥಮ ಪುಷ್ಪ ಉತ್ಪತ್ತಿಯಾಗುತ್ತದೆ. ನಂತರ ಅದರೊಳಗೆ ಫಲದ ಅಂಕುರವಾಗುತ್ತದೆ. ಹೇಗೆ ಫಲ ವೃದ್ಧಿಯಾಗುತ್ತಾ ಹೋಗುತ್ತದೋ ಹಾಗೆ ಪುಷ್ಪ ಸಂಕುಚಿತವಾಗುತ್ತಾ ಹೋಗುತ್ತದೆ. ಹೇಗೆ ಫಲ ಒಳ ಒಳಗೇ ವೃದ್ಧಿಯಾಗುತ್ತಾ ಹೋಗುವುದೋ ಹಾಗೆ ಪುಷ್ಪ ಕ್ಷೀಣವಾಗುತ್ತಾ ಹೋಗುತ್ತದೆ. ಮತ್ತು ಫಲ ಪೂರ್ಣ ವೃದ್ಧಿಯಾದಾಗ ಪುಷ್ಪ ಕಳಚಿ ಬೇರೆಯಾಗಿ ಹೋಗುತ್ತದೆ. ಇದೇ ಪ್ರಕಾರ ಪ್ರಾರಂಭದಲ್ಲಿ ವ್ಯವಹಾರ ಧರ್ಮ ಆಗುತ್ತದೆ. ಅದರೊಳಗೆ ನಿಶ್ಚಯ ಧರ್ಮದ ಫಲ ನಿಹಿತವಾಗಿರುತ್ತದೆ. ಕ್ರಮಕ್ರಮೇಣ ಹೇಗೆ ನಿಶ್ಚಯ ಧರ್ಮ ಬೆಳೆಯುತ್ತಾ ಹೋಗುತ್ತದೋ ಹಾಗೆಯೇ ವ್ಯವಹಾರ ದೃಷ್ಟಿ ರೂಪಿ ಪುಷ್ಪ ಸ್ವಯಂ ಸಂಕುಚಿತವಾಗುತ್ತಾ ಹೋಗುತ್ತದೆ. ಅಂತ್ಯದಲ್ಲಿ ನಿಶ್ಚಯ ಪೂರ್ಣಗೊಂಡಾಗ ವ್ಯವಹಾರ ಸ್ವಯಂ ದೂರವಾಗಿ ಹೋಗುತ್ತದೆ''

ಇದು ಅತ್ಯಮೂಲ್ಯ ವಿವೇಚನೆ. ಸಿದ್ಧಾಂತದ ಅಪರ್ಯಾಪ್ತ ಅಧ್ಯಯನದಿಂದ ಹುಟ್ಟಿದ ಅಪಕ್ವ ವಾದಕ್ಕೆ ಈ ವಿವೇಚನೆ ಸುಸಂಬದ್ಧ ಉತ್ತರವಾಗಿತ್ತು. ಘನ ವಿದ್ವಾಂಸರು ಎಷ್ಟೋ ಜನ ತ್ಯಾಗಿಗಳು, ಶಾಸ್ತ್ರಿಗಳು ಸರಳವಾಗಿರುವ ವ್ಯವಹಾರ ನಿಶ್ಚಯನಯಗಳ ಸ್ವರೂಪವನ್ನು ವಿರೂಪಗೊಳಿಸಿದ್ದಾರೆ. ಯಾವುದು ಮೊದಲು, ಯಾವುದು ಅನಂತರ ಎನ್ನುವುದನ್ನು ಸ್ವಯಂ ತಿಳಿಯಲಾರದೆ ಅನುಮಾನದ ಅಮಲಿನಲ್ಲಿ ಇದು ಮೊದಲೋ, ಅದು ಮೊದಲೋ ಎನ್ನುವ ಸಂಶಯದ ಸುಳಿಯಲ್ಲಿ ಸಿಕ್ಕಿ ಪೇಚಾಡುತ್ತಿದ್ದಾರೆ. ಮಿಥ್ಯಾತ್ವದಿಂದ ಜೀವ ಸಮ್ಯಕ್ತ್ವಕ್ಕೆ ಸಮ್ಮುಖವಾದಾಗ ಸರ್ವಪ್ರಥಮ ವ್ಯವಹಾರ ಧರ್ಮದ ಅವಲಂಬನೆ ಉಂಟಾಗುತ್ತದೆ. ಆಗ ಆ ಜೀವ ಶ್ರಾವಕನೆನಿಸಿ ದೇವಪೂಜಾದಿ ಷಟ್ಕರ್ಮಾಚರಣೆಯಲ್ಲಿ ತೊಡಗುತ್ತದೆ. ಸ್ವಲ್ಪ ಸ್ವಲ್ಪವೇ ಭಾವ ಶುದ್ಧಿ ಬೆಳೆಯುತ್ತಾ

ಹೋದಂತೆ ಗುಣ ಸ್ಥಾನಗಳ ನಿಚ್ಚಣಿಗೆ ಏರತೊಡಗುತ್ತದೆ. ಈ ಆಂತರಿಕ ಉತ್ಕ್ರಾಂತಿಯಲ್ಲಿ ನಿಶ್ಚಯ ಧರ್ಮ ಅಭ್ಯಂತರದಲ್ಲಿ ಬೆಳೆಯುತ್ತಾ ವ್ಯವಹಾರ ಧರ್ಮ ಹ್ರಾಸವಾಗುತ್ತಾ ಹೋಗುತ್ತದೆ. ನಾಲ್ಕು ಮತ್ತು ಐದನೇ ಗುಣ ಸ್ಥಾನದಲ್ಲಿ ಜಿನೇಂದ್ರನನ್ನು ದ್ರವ್ಯಪೂಜೆಯಿಂದ ಆರಾಧಿಸುತ್ತಿದ್ದ ಜೀವ. ಆರನೇ ಗುಣ ಸ್ಥಾನದಲ್ಲಿ ಭಾವಪೂಜೆಯಿಂದ ಆರಾಧಿಸತೊಡಗುತ್ತದೆ. ನಾಲ್ಕು ಮತ್ತು ಐದನೇ ಗುಣಸ್ಥಾನಗಳಲ್ಲಿ ಕಂಡು ಬರುವ ವ್ಯವಹಾರ ಧರ್ಮದ ಸ್ವರೂಪ ಸ್ಪಷ್ಟವಾಗಿ ಆರನೆ ಗುಣ ಸ್ಥಾನದಲ್ಲಿ ಕುಗ್ಗಿರುವುದು ಕಂಡುಬರುತ್ತದೆ ಮತ್ತು ಭಾವ ಪೂಜೆಯ ದೃಷ್ಟಿಯಿಂದ ನಿಶ್ಚಯ ಧರ್ಮ ವೃದ್ಧಿಗೊಂಡಿರುವುದೂ ತಿಳಿಯುತ್ತದೆ. ನೀನೇ ನಾನೆಂಬ ಅರಿವಾದರೆ ಸಾಕು ಎನ್ನುವ ಭಾವ ಅಲ್ಲಿ ಮಡುಗಟ್ಟಿ ನಿಂತಿರುತ್ತದೆ. ಇನ್ನು ಮುಂದು ಮುಂದಿನ ಗುಣಸ್ಥಾನಗಳಲ್ಲಿ ಯೋಗಿಗಳು ನಿಶ್ಚಯ ಧರ್ಮದ ಪೋಷಕವಾಗಿಯೇ ಅವಶ್ಯಕ ಕ್ರಿಯೆಗಳನ್ನು ಮಾಡುತ್ತಾರೆ. ಪೊರೆ ಕಳಚುವಂತೆ ವ್ಯವಹಾರ ಧರ್ಮವಿರುತ್ತದೆ. ವ್ಯವಹಾರ ನಿಶ್ಚಯ ಧರ್ಮಗಳು ಮೊಸರು ಕಡೆಯುವಾಗ ಹಿಂದುಮುಂದು ಚಲಿಸುವ ಕೈಗಳಂತೆ ಆತ್ಮೋನ್ನತಿಗೆ ಪೂರಕವಾಗಿವೆಯೇ ಹೊರತು ಮಾರಕವಾಗಿಲ್ಲ. ಸಮ್ಯಕ್ತ್ವ ಎನ್ನುವ ಮಾತೂ ವಾಸ್ತವಿಕವಾಗಿ ವ್ಯವಹಾರ ದೃಷ್ಟಿ ಎನ್ನುತ್ತಾರೆ. ಏಕೆಂದರೆ ಸಮ್ಯಕ್ತ್ವ ಎನ್ನುವುದನ್ನು ಮಿಥ್ಯಾತ್ವದ ಅಪೇಕ್ಷೆಯಿಂದ ಹೇಳಲಾಗಿದೆ. ಆದರೆ ನಿಶ್ಚಯ ಧರ್ಮದಲ್ಲಿ ಸಂಕಲ್ಪ-ವಿಕಲ್ಪಗಳೇ ಇರುವುದಿಲ್ಲ. ಒಳ್ಳೆಯದು ಕೆಟ್ಟದ್ದು ಎನ್ನುವ ಹಿನಾಧಿಕ ಭಾವಗಳೂ ಇರುವುದಿಲ್ಲ ತನ್ನ ಸ್ವ-ಸ್ವರೂಪದಲ್ಲಿ ಸ್ವಯಂ ಅನುಭವ ಹೊಂದುವುದೇ ನಿಶ್ಚಯ. ಈ ಅನುಭವ ಕೇವಲ ಶಾಂತಿಸಾಗರರಂತಹ ಮಹಾಯೋಗಿಗಳಿಗೆ ಮಾತ್ರ ಸಾಧ್ಯ. ಗೃಹಸ್ಥರಿಗಾಗಲಿ ಶ್ರಾವಕರಿಗಾಗಲಿ ದುರ್ಲಭ. ಆದ್ದರಿಂದಲೇ ಮೊದಮೊದಲು ವ್ಯವಹಾರ ಧರ್ಮವನ್ನು ಎಷ್ಟೋ ಆಚಾರ್ಯರು ವಿಧಿಸಿದ್ದಾರೆ. ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಶ್ರಾವಕರಿಗೆಂದೇ ಗೋಮಟ ಸಾರದಂತಹ ಕೃತಿ ರಚಿಸಿದರು. ಜಿನಸೇನಾಚಾರ್ಯರೂ, ಗೃಹಸ್ಥರು ಸರ್ವ ಪ್ರಥಮ ವ್ಯವಹಾರ ಧರ್ಮ ತಿಳಿಯತಕ್ಕದೆಂದು ಹೇಳಿದರು. ಹೀಗಿರುವಾಗ ವ್ಯವಹಾರದಲ್ಲಿದ್ದು ನಿಶ್ಚಯವನ್ನು ಪ್ರಧಾನ ಮಾಡಿ ಹೇಳುವುದು, ವ್ಯವಹಾರವನ್ನೇ ಸಂಪೂರ್ಣ ತ್ಯಜಿಸಿ ನಿಶ್ಚಯವನ್ನು ಅವಲಂಬಿಸಹೋಗುವುದು, ವ್ಯವಹಾರ ಧರ್ಮವನ್ನೇ ಚೆನ್ನಾಗಿ ತಿಳಿಯದೆ, ಆಚರಿಸದೆ ನಿಶ್ಚಯವನ್ನು ಆಚರಿಸಲು ಪ್ರಯತ್ನಿಸುವುದು ಮೋಕ್ಷ ಮಾರ್ಗವಾಗುವುದಿಲ್ಲ. ಮೊದ ಮೊದಲ ಗುಣಸ್ಥಾನಗಳು ವ್ಯವಹಾರ ಧರ್ಮವನ್ನೂ ನಂತರ ನಂತರದ ಗುಣ ಸ್ಥಾನಗಳು ನಿಶ್ಚಯ ಧರ್ಮವನ್ನೂ ಸಂಕೇತಮಾಡುತ್ತವೆ. ಅಂತಹ ನಿರ್ವಿಕಲ್ಪ ಧ್ಯಾನಕ್ಕೆ ಮಹಾ ಮುನೀಶ್ವರರು ಸ್ವಾಮಿಗಳಾಗುತ್ತಾರೆ. ಗೃಹಸ್ಥರು ಎಂದೂ ನಿಶ್ಚಯ ಧರ್ಮದ ಸ್ವಾಮಿಗಳಾಗರು.

ಅವರು ಈ ಬಗ್ಗೆ ಇನ್ನೊಂದು ಮಹತ್ವದ ವಿಚಾರ ತಿಳಿಸಿದರು. ''ದ್ರವ್ಯಾನುಯೋಗ ಮಾರ್ಗವನ್ನು ತೋರಿಸುತ್ತದೆ. ಚರಣಾನುಯೋಗ ಕಾಲಿನಂತೆ! ಮಾರ್ಗವನ್ನು ನಿಶ್ಚಿತ ಮಾಡಿಕೊಂಡು ಕಾಲುಗಳನ್ನು ಎತ್ತಿ ಇಡದಿದ್ದರೆ (ನಡೆದು ಹೋಗದಿದ್ದರೆ) ಲಕ್ಷ್ಯವನ್ನು ಯಾರು ತಲ್ಪಬಲ್ಲರು?''

ಜಗತ್ತು ಬದಲಾಗಿದೆ

ಒಂದು ದಿನ ಚರ್ಚೆ ಆಧುನಿಕ ಜಗತ್ತಿನತ್ತ ಹೊರಳಿತು. ಜಗತ್ತು ಬದಲಾಗಿ ಹೋಗಿದೆ. ಜನಗಳು ಶಿಥಿಲಾಚಾರಿಗಳಾಗಿದ್ದಾರೆ. ಹಿಂದಿನ ರಂಗು-ರೂಪ ಈಗಿಲ್ಲ. ಮಹರಾಜರೂ ಉಪದೇಶವನ್ನು ಹೊಸ ವಾತಾವರಣಕ್ಕೆ ತಕ್ಕಂತೆ ಬಣ್ಣ ಬಳಿದು ಹೇಳಬೇಕು ಎನ್ನುವ ವಿಚಾರ ಹುಟ್ಟಿತು. ಆಗ ಪೂಜ್ಯಶ್ರೀಯವರು ಖಡಾಖಂಡಿತ ಉತ್ತರ ಕೊಟ್ಟರು.

''ಯಾರು ಹೇಳುತ್ತಾರೆ ಜಗತ್ತು ಕೆಟ್ಟದೆಯೆಂದು? ಕೆಟ್ಟಿದೆ ಎಂದು ಹೇಳುವ ನಿಮ್ಮ ಬುದ್ಧಿ ಕೆಟ್ಟದೆ. ಜಗತ್ತು ಸರಿಯಾಗಿಯೇ ಇದೆ. ಸೂರ್ಯ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುತ್ತಿದ್ದ. ಈಗಲೂ ಅದೇ ಮಾತಿದೆ. ಅಗ್ನಿ ಉಷ್ಣವಾಗಿತ್ತು. ಈಗಲೂ ಉಷ್ಣವಾಗಿಯೇ ಇದೆ. ಪುತ್ರೋತ್ಪತ್ತಿ ಸ್ತ್ರೀಯರಿಂದ ನಡೆಯುತ್ತಿತ್ತು. ಈಗಲೂ ಹಾಗೆಯೇ ನಡೆದಿದೆ. ಈ ಪ್ರಕೃತಿಯ ಪರಿಸ್ಥಿತಿಯಲ್ಲಿ ಯಾವ ಅಂತರವೂ ಉಂಟಾಗಿಲ್ಲ. ಹೀಗಿರುವಾಗ ಜಗತ್ತು ಬದಲಾಗಿದೆ ಎಂದು ಹೇಗೆ ಹೇಳುತ್ತೀರಿ. ಜಗತ್ತು ಸರಿಯಾಗಿಯೇ ಇದೆ. ಮನುಷ್ಯನ ಬುದ್ಧಿಯಲ್ಲಿ ಭ್ರಷ್ಟತೆ ಉಂಟಾಗಿದೆ. ಅದನ್ನು ದೂರಮಾಡಲು ಮತ್ತು ಸ್ವಚ್ಛ ಮಾಡಲು ಪಾಪಾಚರಣೆ ಬಿಡಿಸುವ ಉಪದೇಶದ ಅಗತ್ಯವಿದೆ''

ಅವರು ಪರಿಸ್ಥಿತಿಯ ಪರಿವರ್ತನೆಯನ್ನು ಹೀಗೆ ವಿಮರ್ಶಿಸಿದ್ದರು. ಅವರ ದೃಷ್ಟಿಯಲ್ಲಿ ಜಗತ್ತಿನ ಬದಲಾವಣೆ, ಎಂದರೆ ಜನಗಳ ಬದಲಾವಣೆ, ಆಚಾರ-ವಿಚಾರಗಳ ಬದಲಾವಣೆ ಸತ್ಯ ಸಾದಾಚಾರಗಳ ಬದಲಾವಣೆ, ಸ್ವೇಚ್ಛಾಚಾರ-ಸ್ವಚ್ಛಂದ ವೃತ್ತಿಗಳ ಆಚರಣೆ ಎಂದರ್ಥ.

ವೃತ್ತಿ ಪರಿಸಂಖ್ಯಾನ ತಪಸ್ಸಿನ ಅನುಭವ

ಮೊದಲು ಪೂಜ್ಯ ಶ್ರೀಯವರು ವೃತ್ತಿ ಪರಿಸಂಖ್ಯಾನ ತಪದಲ್ಲಿ ಕಠಿಣ ಪ್ರತಿಜ್ಞೆ ಕೈಗೊಳ್ಳುತ್ತಿದ್ದರು. ಮತ್ತು ಅವರ ಪುಣ್ಯೋದಯದಿಂದ ಪ್ರತಿಜ್ಞೆ ಪೂರ್ತಿಯಾಗುತ್ತಿತ್ತು. ಒಂದು ದಿನ ಅವರು ವಿಶಿಷ್ಟ ಪ್ರತಿಜ್ಞೆ ಕೈಗೊಂಡಿದ್ದರು. ತತ್ಕಾಲ ಜನಿಸಿದ ಕರುವಿನೊಂದಿಗಿರುವ ಹಸುವನ್ನು ನೋಡಿದರೆ ಮಾತ್ರ ಆಹಾರ ಸ್ವೀಕರಿಸುವೆ ಎನ್ನುವುದು ಅಂದಿನ ಅವರ ಪ್ರತಿಜ್ಞೆಯಾಗಿತ್ತು. ಆ ಮಹಾಮುನಿ ಚರ್ಯೆಗಾಗಿ

ಹೊರಟೇಬಿಟ್ಟರು. ಇಂತಹ ವಿಧಿ ಸಿಗುವುದು ಬಹಳ ಅಸಂಭವವೇ ಇತ್ತು. ಆದರೆ ಅವರ ಅಂತರಾಯ ಕರ್ಮದ ಕ್ಷಯವಾಗಿತ್ತು. ಆದ್ದರಿಂದ ವಿಧಿ ಸಿಕ್ಕಿ ನಿರಂತರಾಯ ಪೂರ್ವಕ ಆಹಾರ ವಾಯಿತು. ಇದು ಅವರ ಮಹಾನ್ ಪುಣ್ಯದ ಕಥೆಯಾಗಿತ್ತು! ಇಂತಹದ್ದೇ ಇನ್ನೊಂದು ಕಠಿಣ ನಿಯಮವಿಟ್ಟುಕೊಂಡು ಅವರು ಒಮ್ಮೆ ಹೊರಟಿದ್ದರಂತೆ. ಅದೊಂದು ವಿಚಿತ್ರ ಘಟನೆ. ಯಾರೂ ಊಹಿಸಲಾರದ ವಿಧಿಯಾಗಿತ್ತು. ಸುಮಾರು ೧೯೩೦ರ ಶೀತಕಾಲವದು. ಆಗ ಅವರು ಗ್ವಾಲಿಯರ್‌ನಲ್ಲಿದ್ದರು. ಭಯಂಕರ ಕೊರೆಯುವ ಛಳಿ ಎಲ್ಲರ ಎದೆ ನಡುಗಿಸುತ್ತಿತ್ತು. ನೇಸರು ಮೇಲೇರಿ ಬಂದರೂ ಛಳಿಯ ಆರ್ಭಟ ತಗ್ಗುತ್ತಿರಲಿಲ್ಲ. ಅಂತಹ ಸ್ಥಿತಿಯಲ್ಲಿ ಒಂದು ವಿಚಿತ್ರ ವಿಧಿ ಹಿಡಿದು ಆ ಮಹಾಯೋಗಿ ಚರಿಗೆಗೆ ಹೊರಟರು. ಲೆಕ್ಕವಿಲ್ಲದಷ್ಟು, ಚೌಕಿ ಹಾಕಿ ಕಲಶ ಹಿಡಿದು ಆ ಜನ ಗಲ್ಲಿ ಗಲ್ಲಿಗಳಲ್ಲೂ ಚಾತಕ ಪಕ್ಷಿಗಳಂತೆ ಕಾದಿದ್ದರು. ಜಲರಾಶಿಯ ಮೇಲೆ ಜಾರಿ ಬರುವ ಭಾರಿ ಹಿಮಗಡ್ಡೆಯಂತೆ ಮಂದ ಮಂದ ಹೆಜ್ಜೆ ಇಡುತ್ತಾ ಆ ಯೋಗಿ ಪುಂಗವ ನಡೆದು ಬರುತ್ತಿದ್ದರು. ಉತ್ಸಾಹಿ ತರುಣ ವೃಂದ ಅವರ ಮಾರ್ಗದಲ್ಲಿ ಬರುವ ಅಡ್ಡಿಗಳನ್ನು ನಿವಾರಿಸುತ್ತಾ ಮುಂದೆ ಮುಂದೆ ಕರೆದೊಯ್ಯುತ್ತಿತ್ತು. ಒಂದೆರಡು ಬಾರಿ ಸುತ್ತಾಡಿದರೂ ವಿಧಿ ಸಿಗಲಿಲ್ಲ. ಜನ ನಿರಾಶರಾದರು. ತಮ್ಮ ತಮ್ಮ ವಿಧಿಯನ್ನು ಹಳಿಯತೊಡಗಿದರು. ನೂಕುನುಗ್ಗಲು ಹೆಚ್ಚಿತು. ಜನಗಳ ಆತಂಕವೂ ಹೆಚ್ಚಿತು. ಈ ಗಡಿಬಿಡಿಯಲ್ಲಿ ಯಾರೋ ಒಬ್ಬ ಅಮಾಯಕ ವ್ಯಕ್ತಿ ಮಡಿ ಉಟ್ಟುನಿಂತ ಶ್ರಾವಕನನ್ನು ತಳ್ಳಿಕೊಂಡು ಅತ್ತ ನಡೆದ. ಆಚಾರ್ಯಶ್ರೀಯವರು ಸಮೀಪಕ್ಕೆ ಬಂದೇ ಬಿಟ್ಟಿದ್ದರು. ಅಶುದ್ಧಿಯಾಗಿತ್ತು. ಯೋಚಿಸಲು ಸಮಯವೆಲ್ಲಿತ್ತು? ಆತ ತಟ್ಟನೆ ಓಡಿ ಕೈಗೆ ಸಿಕ್ಕತಣ್ಣೀರ ಕೊಡದಿಂದಲೇ ತನ್ನ ಮೈಯ್ಯನ್ನು ದಂಡ ಸ್ನಾನಮಾಡಿಸಿ ಹೊರ ಓಡಿಬಂದ. ಪೂಜ್ಯಶ್ರೀಯವರು ಅವನೆದುರು ಬಂದು ನಿಂತರು. ಒದ್ದೆ ವಸ್ತ್ರ ಸುತ್ತಿ ಯಾರಾದರೂ ತಡೆದರೆ ಆಹಾರ ಸ್ವೀಕರಿಸುವೆ ಎನ್ನುವುದು ಅಂದಿನ ಅವರ ವಿಚಿತ್ರ ನಿಯಮವಾಗಿತ್ತು. ಅವರ ಪುಣ್ಯ ಪ್ರಭಾವ ಕಲ್ಪನಾತೀತವಾಗಿತ್ತು!. ಅಂತಹ ಅಪರೂಪದ ವಿಧಿಯೂ ನಿರಾಯಾಸ ಅವರ ತಪಃ ಪ್ರಭಾವದಿಂದ ಸಿಕ್ಕಿತ್ತು! ಜನಗಳ ಆಶ್ಚರ್ಯಕ್ಕೆ ಎಲ್ಲೆಯೇ ಇರಲಿಲ್ಲ. ಮಹಾಪುಣ್ಯಮೂರ್ತಿ ಪೂಜ್ಯ ಶ್ರೀಯವರು ಇದ್ದ ನಾಡು ಜನಗಳಿಗೆ ಕಲ್ಪವೃಕ್ಷದಂತಾದೀತೆಂದು ಜನ ಹೊಗಳತೊಡಗಿದರು.

ಮತ್ತೊಂದು ಘಟನೆ ಕೊಲ್ಹಾಪುರದಲ್ಲಿ ನಡೆದಿತ್ತು. ಅಂದಿನ ಅವರ ನಿಯಮ ಇವೆಲ್ಲಕ್ಕಿಂತಾ ತೀರಾ ಭಿನ್ನವಾಗಿತ್ತು. ಆದರೂ ಕೌತುಕಕಾರಿಯೇ ಆಗಿತ್ತು. ಯಾರಾದರೂ ತಟ್ಟೆಯಲ್ಲಿ ಮುತ್ತು ರತ್ನಗಳನಿಟ್ಟು ತಡೆದರೆ ಆಹಾರ ಸ್ವೀಕರಿಸುವೆ. ಅನ್ಯಥಾ ಇಲ್ಲ ಎಂದು ಪ್ರತಿಜ್ಞೆ ಮಾಡಿ ಚರ್ಯೆಗೆ ಹೊರಟರು. ಅದೇನೋ ಆ ದಿನ ನಗರದ ಧನಿಕ ಶ್ರೇಷ್ಠಿಗೆ ಮುತ್ತು ರತ್ನಗಳನ್ನು ತಟ್ಟೆಯಲ್ಲಿಟ್ಟು ಆ ಮಹಾತಪಸ್ವಿಯನ್ನು ತಡೆಯಬೇಕೆಂಬ ಭಾವ ಹುಟ್ಟಿತಂತೆ! ಎಂತಹ ವಿಚಿತ್ರ ಸಂಯೋಗ! ಅವರ

ವಿಧಿನಿಯಮಕ್ಕೆ ತಕ್ಕಂತೆ ಶ್ರೇಷ್ಠಿಗೆ ಆ ಭಾವ ಹುಟ್ಟುವುದೆಂದರೇನು? ಆದರೆ ಹುಟ್ಟಿತ್ತು. ವಿಧಿಸಿಕ್ಕಿ ಆಹಾರ ಮೊದಲುಗೊಂಡಿತ್ತು. ಆ ಶ್ರೇಷ್ಠಿ ಧನ್ಯನಾಗಿದ್ದ. ಉತ್ತಮ ಪಾತ್ರಕ್ಕೆ ಆಹಾರ ಕೊಡುವ ಅಹೋಭಾಗ್ಯದಿಂದ ಉಬ್ಬಿಹೋಗಿದ್ದ. ನನ್ನ ನರಜನ್ಮವೇ ನರರತ್ನ ಆಚಾರ್ಯಶಾಂತಿಸಾಗರರಿಗೆ ಆಹಾರ ದಾನ ಮಾಡುವ ಪುಣ್ಯಾವಸರದಿಂದ ಸಾರ್ಥಕವಾಗಿ ಹೋಯಿತೆಂದು ಕ್ಷಣಕ್ಷಣಕ್ಕೂ ರೋಮಾಂಚನಗೊಳ್ಳುತ್ತಿದ್ದ. ಈ ಆನಂದ ಸಂತೋಷ ಉನ್ಮಾದಗಳಲ್ಲೇ ಮೈ ಮರೆತಿದ್ದ ಅವನಿಗೆ ಇದ್ದಕ್ಕಿದ್ದಂತೆ ಥಟ್ಟನೆ ವಿಟಿನಂತಹ ಒಂದು ನೆನಪು ಸುಳಿದು ಎದೆ ಹೊಡೆದುಕೊಳ್ಳಲಾರಂಭಿಸಿತು. ಮುಖದಲ್ಲಿ ಬೆವರು ಹನಿ ಕಾಣಿಸಿದವು. ಕ್ಷಣಕ್ಷಣವೂ ಹೊರಕ್ಕೆ ಹೊರಳಿ ನೋಡಲಾರಂಭಿಸಿದ. ಆಹಾರ ದಾನದ ಅವನ ಶ್ರದ್ಧೆಗೆ ಯಾವುದೋ ಚಿಂತೆ ಭಂಗ ತರುತ್ತಿತ್ತು. ಅವನ ಈ ಚಿತ್ತ ಭ್ರಮಣೆಯನ್ನು ಚಾಣಾಕ್ಷ ಸಾಧು ಆಚಾರ್ಯ ಶಾಂತಿಸಾಗರರು ಗುರ್ತಿಸಿಬಿಟ್ಟರು. ಅವರ ಮನಸ್ಸಿನಲ್ಲಿ ಸೂಕ್ಷ್ಮ ಸಂಕಲ್ಪವೊಂದು ಮೂಡಿ ಮಾಯವಾಯಿತು. ಇನ್ನೆಂದೂ ಇಂತಹ ಸಂಕಲ್ಪ ಮಾಡುವುದು ಉಚಿತವಲ್ಲ ಎಂದು ಭಾವಿಸಿದರು. ಆಗಿದ್ದು ಇಷ್ಟೇ ಆ ಶ್ರೇಷ್ಠಿ ಸಂತೋಷದ ಭರದಲ್ಲಿ ಮುತ್ತು ರತ್ನಗಳ ಬೆಲೆಬಾಳುವ ತಟ್ಟೆಯನ್ನೇ ಹೊರಗಡೆ ಇಟ್ಟು ಮರೆತಿದ್ದ. ಅದರ ಸ್ಮರಣೆ ಬರುತ್ತಲೇ ಚಿತ್ತ ಚಂಚಲವಾಗಿತ್ತು. ಇತ್ತ ಉತ್ತಮ ಪಾತ್ರಕ್ಕೆ ಆಹಾರ ದಾನ ಮಾಡುವ ಯೋಗ ಸಿಕ್ಕಿತಲ್ಲ ಎನ್ನುವ ಸಂತೋಷ, ಅತ್ತ ಬಹಳ ಬೆಲೆಬಾಳುವ ಕಷ್ಟಾರ್ಜಿತ ಮುತ್ತುರತ್ನಗಳು ನಷ್ಟವಾಗಿ ಹೋಗಿ ಬಿಡುವವಲ್ಲಾ ಎನ್ನುವ ಕಳವಳ! ಅದೃಷ್ಟವಶಾತ್ ಒಬ್ಬ ಉಪಾಧ್ಯಾಯ ಅದನ್ನುಎತ್ತಿ ಸುರಕ್ಷಿತವಾಗಿಟ್ಟಿದ್ದ. ಅಂದಿನಿಂದ ಅವರು ಅಮೂಲ್ಯ ವಸ್ತುಗಳ ನೇಮ ಹಿಡಿಯುವುದನ್ನು ಕೈಬಿಟ್ಟರು.

ಅವರ ಜೀವನಚರಿತ್ರೆಯ ಪುಟಪುಟಗಳೂ ರೋಮಾಂಚಕಾರೀ ಘಟನೆಗಳಿಂದ ತುಂಬಿ ಹೋಗಿವೆ. ಅವರು ಜೀವನದ ಒಂದೊಂದು ದಿನವನ್ನೂ ಸಾಹಸ ಸಿಂಹನಂತೆ ಭರತನಾಡಿನಲ್ಲಿ ವಿಹರಿಸುತ್ತಾ ಕಳೆಯುತ್ತಿದ್ದರು. ಅವರ ಬದುಕು ಶತಮಾನ ಶತಮಾನಗಳ ಅದ್ಭುತ ಘಟನೆಗಳ ಸರಮಾಲೆಯಂತಿತ್ತು. ಅವರು ಕೇವಲ ಒಬ್ಬ ವ್ಯಕ್ತಿಯಾಗಿರದೆ ಭಾರತ ದೇಶದ ಆಧ್ಯಾತ್ಮ ಪರಂಪರೆಯ ಮಹಾಶಕ್ತಿಯಾಗಿದ್ದರು.

ಅನ್ಯರ ದುಃಖವನ್ನು ಕಂಡ ಕೂಡಲೇ ಅವರ ಅಂತಃಕರಣ ಕರಗಿ ಹೋಗುತ್ತಿತ್ತು. ಕರುಣೆ ಒತ್ತರಿಸಿ ಬರುತ್ತಿತ್ತು. ಅವರು ಒಮ್ಮೆ ಮನ ಕರುಗುವ ಹೃದಯದಿಂದ ಹೀಗೆ ಹೇಳಿದರು.

''ಜನಗಳ ಅಸಂಯಮ ವೃತ್ತಿ ನೋಡಿ ನಮಗೆ ಬಹಳ ಮರುಕ ಹುಟ್ಟುತ್ತದೆ. ಈ ಕಾರಣದಿಂದ ವ್ರತಾದಿಗಳನ್ನು ತೆಗೆದುಕೊಳ್ಳಲು ಹೇಳುತ್ತೇವೆ'' ಯಾರು ಮಿಥ್ಯಾತ್ವ

ತ್ಯಾಗದ ನಿಯಮ ತೆಗೆದುಕೊಳ್ಳುತ್ತಿದ್ದರೋ ಅಂತವರ ಮನೆಯಲ್ಲಿ ಮಾತ್ರ ಆಹಾರ ತೆಗೆದುಕೊಳ್ಳುತ್ತಿದ್ದರು.

ಉತ್ತರ ಪ್ರಾಂತ್ಯದಲ್ಲಿ ಮಿಥ್ಯಾತ್ವ ಸುಧಾರಣೆಯ ಪ್ರತಿಜ್ಞೆ

ಸಂಯಮದ ಸೂರ್ಯ ಪೂಜ್ಯಶ್ರೀಯವರು ದಕ್ಷಿಣಾಯನವನ್ನು ಬದಲಾಯಿಸಿ ಉತ್ತರಾಯಣವನ್ನು ಪ್ರಾರಂಭಿಸಿದರು. ಉತ್ತರದಲ್ಲಿರುವ ಶಿಥಿಲಾಚಾರ ಸುಧಾರಿಸುವ ಭಾವ ಅವರಲ್ಲಿ ಮೂಡಿತು. ಪ್ರತಿಯೊಬ್ಬರ ಮನೆಯಲ್ಲೂ ಮಾಂಸಾಹಾರಿ ಸೇವಕರು ನೀರು ತುಂಬುತ್ತಿದ್ದರು. ಶೂದ್ರಜಲ ತ್ಯಾಗ ಮಾಡಿದ ಜೈನರಿಂದ ಮಾತ್ರ ಆಹಾರ ಸ್ವೀಕರಿಸುತ್ತೇನೆ ಎಂದು ಪ್ರತಿಜ್ಞೆ ಮಾಡಿದರು.

ಆಹಾರ ದಾತೃವಿಗೆ ಸಪ್ತಗುಣ ನವದಾಭಕ್ತಿ ಇರಬೇಕೆಂದು ಹೇಳಿದೆ. ತಮಗಾಗಿ ತಯಾರಿಸಿದ ಶುದ್ಧ ನಿರ್ದೋಷ ಆಹಾರವನ್ನು ಮುನಿಗಳಿಗೆ ಕೊಡಬೇಕು. ಅಮೃತ ಚಂದ್ರ ಸೂರಿಯವರು ಪುರುಷಾರ್ಥ ಸಿದ್ಧ್ಯುಪಾಯದಲ್ಲಿ ಈ ಮಾತು ಹೇಳಿದ್ದಾರೆ.

''ಕೃತಮಾತ್ಮಾರ್ಥ ಮುನಯೆದದಾತಿ (ಪ್ರ. ೧೬೪) ತನಗೆಂದು ತಯಾರಿಸಿದ ಆಹಾರವನ್ನು ಮುನಿಗೆ ಕೊಡಬೇಕು. ಆದ್ದರಿಂದ ಆಹಾರ ದಾತೃ ಶುದ್ಧಾಹಾರ ಭೋಜಿ ಆಗಬೇಕಾದುದು ಅತ್ಯವಶ್ಯಕ. ಶ್ರಾವಕರು ತಮಗೆಂದು ತಯಾರಿಸಿದ ಅಶುದ್ಧ ಆಹಾರ (ಕಂದ ಮೂಲಾದಿಗಳನ್ನು ಬೇಯಿಸಿದ) ಮತ್ತು ಮುನಿಗೆಂದೇ ತಯಾರಿಸಿದ ಆಹಾರ ಇವೆರಡೂ ಮುನಿಗಳಿಗೆ ಕೊಡಲು ಯೋಗ್ಯ ಆಹಾರಗಳಲ್ಲ. ಆಹಾರದ ಪರಿಣಾಮ ನೇರವಾಗಿ ಶರೀರ ಮತ್ತು ಮನಸ್ಸುಗಳ ಮೇಲಾಗುತ್ತದೆ. ಆಹಾರದಲ್ಲಿ ಮೂರು ವಿಧಗಳಿವೆ. ತಾಮಸ, ರಾಜಸ ಮತ್ತು ಸಾತ್ವಿಕ. ತಾಮಸ ಆಹಾರ ಮಂದ ಬುದ್ಧಿ, ಜಡತ್ವವನ್ನುಂಟುಮಾಡುತ್ತದೆ. ರಾಜಸಾಹಾರ ಕ್ರೋಧಾದಿ ಕಷಾಯಗಳನ್ನು ಉದ್ದೀಪನಗೊಳಿಸುತ್ತದೆ. ಬುದ್ಧಿಯನ್ನು ಭ್ರಷ್ಟಗೊಳಿಸುತ್ತದೆ. ಸಾತ್ವಿಕ ಆಹಾರ ಶಾಂತಿ, ಸಂಯಮಕ್ಕೆ ಕಾರಣವಾಗಿದೆ. ಆದ್ದರಿಂದ ಮುನಿಗಳಿಗೆ ಸಾತ್ವಿಕ ಆಹಾರವನ್ನೇ ಕೊಡತಕ್ಕದ್ದು. ಒಬ್ಬ ತನ್ನ ಸಂಶೋಧನೆಯ ನಿಮಿತ್ತ ಒಂದು ನಾಯಿಗೆ ಕೇವಲ ಮಾಂಸಾಹಾರವನ್ನೂ, ಇನ್ನೊಂದು ನಾಯಿಗೆ ಕೇವಲ ಶುದ್ಧ ಶಾಖಾಹಾರವನ್ನು ಕೊಡತೊಡಗಿದ. ಮಾಂಸಾಹಾರಿ ನಾಯಿ ಸದಾ ಮೌನವಾಗಿರುತ್ತಿತ್ತು. ನಿದ್ರೆ ಜಡತ್ವದಲ್ಲಿ ಮುಳುಗಿರುತ್ತಿತ್ತು. ಕ್ರಮೇಣ ಕಾಯಿಲೆ ಬಿದ್ದು ಸತ್ತುಹೋಯಿತು. ಸಸ್ಯಾಹಾರ ಸೇವಿಸುತ್ತಿದ್ದ ನಾಯಿ ಬಹಳ ಚುರುಕಾಗಿದ್ದು ಬಹಳ ಕಾಲ ಬದುಕಿತ್ತು. ಆಹಾರದ ಪರಿಣಾಮ ದೇಹ ಮತ್ತು ಮನಸ್ಸಿನ ಮೇಲೂ ಬೀರುವುದೆಂದು ವೈಜ್ಞಾನಿಕವಾಗಿಯೂ ಸಿದ್ಧವಾಗಿದೆ. ಸಪ್ತಗುಣ ನವದಾಭಕ್ತಿಯಿಂದ ಶ್ರೇಷ್ಠ ಶ್ರಾವಕರ ಮನೆಯಲ್ಲಿ ತೆಗೆದುಕೊಂಡ ಶುದ್ಧ ಆಹಾರವು ಮುನಿಗಳಿಗೆ ಹೆಚ್ಚು ಹೊತ್ತು ಸಾಮಾಯಿಕ ಮಾಡುವ ಚಿತ್ತಶುದ್ಧಿ ಕೊಡಬಲ್ಲದು. ಆಹಾರ ಎಷ್ಟೆಷ್ಟು

ದೂಷಿತವಾಗುತ್ತಾ ಹೋಗುತ್ತದೋ ತ್ಯಾಗಿಗಳ ಮನಸ್ಸು ಅಷ್ಟೇ ಚಂಚಲವಾಗುತ್ತಾ ಹೋಗುತ್ತದೆ. ಅಂತಹ ದೂಷಿತ ಆಹಾರದಿಂದ ತ್ಯಾಗಿಗಳ ಮನಸ್ಸಿನಲ್ಲಿ ತತ್ಕಾಲ ಭ್ರಮೆ ಚಂಚಲತೆ, ಆಲಸ್ಯ ಉಂಟಾಗುತ್ತದೆ. ಒಂದುಪಕ್ಷ ಅಜಾಗರೂಕತೆಯಿಂದ ಅಶುದ್ಧ, ಅಪ್ರಾಸುಕ ಆಹಾರವನ್ನು ಮುನಿಗೆ ಕೊಟ್ಟರೆ ದಾತೃವಿಗೆ ಪುಣ್ಯಬಂಧದ ಬದಲು ಪಾಪಬಂಧವೇ ಆಗುತ್ತದೆ. ಆಹಾರ ದಾತೃವಿಗೆ ಬರುವ ಪುಣ್ಯ ಏನನ್ನು ಅವಲಂಬಿಸಿರುತ್ತದೆ?

ದಾತೃಭಕ್ತಿ, ಪಾತ್ರಶುದ್ಧಿ ಮತ್ತು ಆಹಾರಶುದ್ಧಿ ಇವು ಮೂರನ್ನು ಅವಲಂಬಿಸಿರುತ್ತದೆ. ಇವು ಮೂರರಲ್ಲಿ ಯಾವುದು ಅಶುದ್ಧವಾಗಿದ್ದರೂ ಪಾಪ ಬಂಧ ನಿಶ್ಚಿತ. ಒಂದು ವೇಳೆ ಮೂರು ಕೆಟ್ಟಿದ್ದರೆ ಕೇಳುವಂತೆಯೇ ಇಲ್ಲ. ತೀಕ್ಷ್ಣ ಅಶುದ್ಧ ಆಹಾರ ಕೊಟ್ಟು ಮುನಿಯ ಮನಸ್ಸಿನಲ್ಲಿ ವಿಕಾರಭಾವಗಳ ಸಂತಾಪ ಹುಟ್ಟಿಸುವಂತೆ ಮಾಡಿದರೆ ಅಂತಹ ಆಹಾರ ದಾತೃವಿಗೆ ಭಯಂಕರ ಅನಿಷ್ಟ ಉಂಟಾಗುತ್ತದೆ. ಆದ್ದರಿಂದ ಆಹಾರಕೊಡುವಾಗ ಶರೀರ ಶುದ್ಧಿ, ಆಹಾರ ಶುದ್ಧಿಯ ಕಡೆ ಅತ್ಯಂತ ಗಮನ ಹರಿಸಬೇಕಾದ್ದು ಅತ್ಯಗತ್ಯ. ಅವರಿವರೇನೆಂದಾರು ಎನ್ನುವ ಭಯದಿಂದಾಗಲಿ, ಮುನಿಗಳಿಗೆ ಆಹಾರದಾನ ಎಂದರೆ ಮೃಷ್ಟಾನ್ನ ಭೋಜನ ಎನ್ನುವ ಕಲ್ಪನೆಯಿಂದಾಗಲಿ, ರಸವಸ್ತುಗಳು ಹೊಟ್ಟೆಗೆ ಬೀಳದಿದ್ದರೆ ಶರೀರ ಬಾಳೀತೆ ಎನ್ನುವ ಭ್ರಮೆಯಿಂದಾಗಲಿ, ಮುನಿಯ ಶರೀರ ಸ್ಥಿತಿ ತಿಳಿಯದೆ, ರೋಗಿಯೇ, ಯುವಕನೆ, ಮುಪ್ಪಿನವನೆ ಎನ್ನುವುದನ್ನು ಕಂಡುಕೊಳ್ಳದೆ ಮತ್ತು ಅಪ್ರಾಸುಕ, ಶೂದ್ರದೂಷಿತ, ಮರ್ಯಾದೆ ಮೀರಿದ ಅಶುದ್ಧ ಆಹಾರವನ್ನು ಎಂದೂ ತ್ಯಾಗಿಗಳಿಗೆ ಕೊಡಬಾರದು. ಕೊಡುವವರು ತೀಕ್ಷ್ಣ ಹಾನಿಗೆ ಒಳಗಾಗುತ್ತಾರೆ. ದಾತೃ ಮತ್ತು ಪಾತ್ರಶುದ್ಧಿ, ಆಹಾರ ಶುದ್ಧಿಯಿಂದ ಕೊಟ್ಟ ಆಹಾರ ಆ ಕೂಡಲೇ ಮಹಾಭ್ಯುದಯಕ್ಕೆ ನಾಂದಿಯಾಗುತ್ತದೆ. ಅತಿಶಯ ಭಕ್ತಿಯುಕ್ತ ಆಹಾರ ದಾನದ ಫಲ ಆಗಲೇ ಕಾಣಿಸಿಕೊಳ್ಳುತ್ತದೆ. ಈ ಕಾಲದಲ್ಲಿ ಆಹಾರ ದಾನ ಮಾಡಿದರೂ ದೌರ್ಭಾಗ್ಯಶಾಲಿಗಳಾಗಿ ಉಳಿಯುತ್ತಾರೆ ಎನ್ನುವುದಾದರೆ ಆಹಾರ ಶುದ್ಧಿ, ದಾತೃ ಶುದ್ಧಿ ಇಲ್ಲವೆಂದೇ ಹೇಳಬೇಕು. ಶುದ್ಧ ಆಹಾರವೇನನ್ನೂ ಕೊಡಲು ಸಾಧ್ಯವಾಗದವರು ಪ್ರಾಸುಕವಾದ ಒಂದು ಬೊಗಸೆ ಬಿಸಿ ನೀರನ್ನಾದರೂ ಭಕ್ತಿ ಭರಿತರಾಗಿ ಮುನಿಯ ಪಾಣಿಪಾತ್ರಕ್ಕೆ ಸುರಿದರೆ ಸಾಕು. ಅದೇ ಕಲ್ಪವೃಕ್ಷವಾಗಿ ಫಲ ನೀಡೀತು. ಲಾಭ-ಅಲಾಭದಲ್ಲಿ ಸ್ಥಿತ ಪ್ರಜ್ಞರಾದ ಮುನಿಗಳು ಅಷ್ಟನ್ನೇ ಸಾವಧಾನ ಪೂರ್ವಕ ಸ್ವೀಕರಿಸಿ ಪಾರಣೆ ಮುಗಿಸಿ ಧ್ಯಾನಾಧ್ಯಯನದಲ್ಲಿ ಲೀನರಾಗುತ್ತಾರೆ. ಆದರೆ ಹಲವಾರು ಬಗೆಯ ಷಡ್ರಸೋಪೇತ ಅಶುದ್ಧ ಆಹಾರ ಕೊಡುವುದರಿಂದ ಉಭಯ ಹಾನಿಯಾಗುತ್ತದೆ. ಮುನಿಗಳಾದರೋ ಅಂದಿನ ದೋಷವನ್ನು ಅಂದೇ ಪ್ರಾಯಶ್ಚಿತ್ತ ಪ್ರತಿಕ್ರಮಣಾದಿಗಳಿಂದ ಕೊಡವಿ ಹಾಕುತ್ತಾರೆ. ಆದರೆ ಅಶುದ್ಧ ಆಹಾರ ಕೊಟ್ಟ ಪಾಪವನ್ನು ಶ್ರಾವಕ ಎಷ್ಟು ಭವಗಳಲ್ಲಿ ಅನುಭವಿಸಬೇಕಾಗುತ್ತದೆ. ?

ಶುದ್ಧ ಆಹಾರವನ್ನು ಅಪಾತ್ರರಿಗೆ ಗುರುಭಕ್ತಿಯಿಂದ ಅರ್ಪಿಸು ಕ್ರಮ ಎಷ್ಟು ಹಾನಿಕರವೋ, ಅಶುದ್ಧ ಆಹಾರವನ್ನು ಅಶ್ರದ್ಧೆಯಿಂದ ಸುಪಾತ್ರಕ್ಕೆ ಕೊಡುವುದು ಅಷ್ಟೇ ಹಾನಿಕರ! ಇದನ್ನೆಲ್ಲಾ ಚೆನ್ನಾಗಿ ತಿಳಿದ ಅವರು ಶುದ್ಧಾಹಾರದ ಮಹತ್ವವನ್ನು ಜನಗಳ ಮುಂದಿಟ್ಟರು. ಉತ್ತಮ ಸಂಸ್ಕಾರವನ್ನು ನಿರೂಪಿಸುವುದಕ್ಕಾಗಿಯೇ ಯಜ್ಞೋಪವೀತ ಧಾರಣೆಯ ಬಗ್ಗೆಯೂ ಒತ್ತಿ ಹೇಳಿದರು. ಸಜ್ಜನ ಪುರುಷರು ಆ ಮಹಾಪುರುಷನ ಸಿಂಹವಾಣಿಗೆ ತಲೆಬಾಗಿ ಕಲ್ಯಾಣ ಮಾರ್ಗದಲ್ಲಿ ನಡೆದರು.

ಆಚಾರ್ಯ ಶಾಂತಿಸಾಗರರು ಆಗಮ ಪ್ರಾಣರಾಗಿದ್ದರು. ಆಗಮ ತೀರ್ಥಂಕರ ಭಗವಾನರವಾಣಿ. ತೀರ್ಥಂಕರರು ಬೋಧಿಸಿದ ನಿರ್ದೋಷ ಆಜ್ಞೆಯಂತೆಯೇ ಅವರು ಆಚರಣೆ ಮಾಡುತ್ತಿದ್ದರು. ಆದರೆ ಕೆಲವು ಆಗದ ಜನ ಅವರ ಆಚಾರ-ವಿಚಾರಗಳ ಬಗ್ಗೆ ಒಡಕು ಮಾತು ಆಡತೊಡಗಿದರು. ಸರ್ವಸಮಾನತೆ ಘೋಷಿಸುವ ಇಂದಿನ ಸಾಮಾಜಿಕ ಪರಿಸರದಲ್ಲಿ ಶೂದ್ರಜಲ ಕುಡಿಯಬೇಡಿ, ಶೂದ್ರರಿಂದ ತಯಾರಿಸಿದ ಆಹಾರ ಸ್ವೀಕರಿಸಬೇಡಿ ಎನ್ನುವುದು ಶೂದ್ರರ ವಿರುದ್ಧ ಪಿತೂರಿ ಎಂದು ಭಾವಿಸತೊಡಗಿದರು. ಅವರ ಮಹಾನ್ ತತ್ವಗಳಿಗೆ ರಾಜಕೀಯ ಬಣ್ಣ ಬಳಿಯತೊಡಗಿದರು. ವಿಕೃತ ಸಾಮಾಜಿಕ ಸಿದ್ಧಾಂತಗಳನ್ನು ಹೊಸೆಯತೊಡಗಿದರು. ಇಂತಹ ಭ್ರಮೆಯನ್ನೂ ದೂರಮಾಡಲು ಮತ್ತು ಶೂದ್ರರ ನಿಜವಾದ ಹಿತ ಚಿಂತಕರು ಯಾರು ಎನ್ನುವುದನ್ನು ಜಗತ್ತಿಗೆ ತೋರಿಸಿಕೊಡಲು ಪೂಜ್ಯಶ್ರೀಯವರು ಶೂದ್ರರ ಬಗ್ಗೆ ಹೊಂದಿರುವ ಕರುಣಾಮಯ ಭಾವಗಳನ್ನು ನಾನು ಅವರಿಂದ ಕೇಳಿ ಜಗತ್ತಿಗೆ ತೋರಿಸಿಕೊಡಬೇಕಾಗಿತ್ತು. ಆದ್ದರಿಂದ ಒಂದು ಒಳ್ಳೆಯ ಸಮಯ ನೋಡಿ ಈ ಬಗ್ಗೆ ಅವರಲ್ಲಿ ಚರ್ಚಿಸತೊಡಗಿದೆ.

ಹರಿಜನರ ಬಗ್ಗೆ ಪ್ರೇಮ ದೃಷ್ಟಿ

ಅವರಲ್ಲಿ ನನ್ನ ಮೊದಲ ಪ್ರಶ್ನೆ ಹೀಗಿತ್ತು.

''ಮಹರಾಜ್! ಹರಿಜನರ ಉದ್ಧಾರದ ಬಗ್ಗೆ ನಿಮ್ಮ ನಿಲುವೇನು?'' ಆಗ ಅವರ ಮುಖದಲ್ಲಿ ಅಪಾರ ಕರುಣಾರಸ ಉಕ್ಕತೊಡಗಿತು. ಆ ದೀನ ದಲಿತ ಜೀವಿಗಳನ್ನು ನೆನೆದು ಅವರ ಹೃದಯ ಕರಗಿ ನೀರಾಗಿತ್ತು.

''ನಮಗೆ ಹರಿಜನರನ್ನು ನೋಡಿ ಮನಸ್ಸಿನಲ್ಲಿ ಮರುಕ ಹುಟ್ಟುತ್ತದೆ. ನಮಗೆ ಆ ಬಡಪಾಯಿಗಳ ಬಗ್ಗೆ ಸ್ವಲ್ಪವೂ ದ್ವೇಷವಿಲ್ಲ. ಬಡನತದ ದೆಶೆಯಿಂದ ಆ ಬಡಪಾಯಿಗಳು ಅಪಾರ ಕಷ್ಟ ಅನುಭವಿಸುತ್ತಿವೆ. ಈಗ ನಾವು ಹೇಳುವುದಿಷ್ಟೆ. ಆ ದೀನ ಜೀವಿಗಳ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಿ. ಅವರ ಹಸಿವಿಗೆ ರೊಟ್ಟಿ ಕೊಡಿ. ನೀವು ಅವರೊಡನೆ ಪಂಕ್ತಿ ಭೋಜನ ಮಾಡಿದ ಮಾತ್ರಕ್ಕೆ ಅವರ ಕಷ್ಟಗಳು ದೂರಾಗುವವೇನು?''

ಮತ್ತೆ ಹೀಗೆ ಹೇಳತೊಡಗಿದರು.

ಭಂಗಿ, ಮೋಚಿ ಮುಂತಾದವರೆಲ್ಲಾ ನಮ್ಮ ಸಹೋದರರು. ಸರ್ವರಲ್ಲೂ ದಯೆ ತೋರುವುದು ಜೈನ ಧರ್ಮದ ಮೂಲಸಿದ್ಧಾಂತ. ಅನ್ಯಮತೀಯ ಸರ್ವಸಾಧುಗಳೂ ನಮ್ಮ ಸಹೋದರರು. ನಾವು ಪೂರ್ವದಲ್ಲಿ ಅನೇಕ ಭವಗಳಲ್ಲಿ ನೀಚ ಪರ್ಯಾಯದಲ್ಲಿ ಹುಟ್ಟಿದ್ದೇವೆ. ನಿಂದ್ಯ ಕುಲದಲ್ಲಿ ಹುಟ್ಟಿ ಅಪಾರ ವೇದನೆ ಉಂಡಿದ್ದೇವೆ. ಹರಿಜನರ ಬಗ್ಗೆ ನಮಗೆ ಯಾವ ದ್ವೇಷ ಭಾವವೂ ಇಲ್ಲ''

ಹರಿಜನೋದ್ಧಾರದ ಬಗ್ಗೆ ಉದ್ದ ಭಾಷಣ ಮಾಡುತ್ತಾ ಅವರ ಶೋಷಣೆಯಲ್ಲಿ ತೊಡಗಿರುವವರ ಬಗ್ಗೆ ಕಿವಿ ಮಾತು ಹೇಳಿದರು.

''ನೀವು ಸುಂದರವಾದ ಭವನದಲ್ಲಿ ವಾಸವಾಗಿದ್ದೀರಿ. ಅವರು ಹರುಕು ಮುರುಕು ಜೋಪಡಿಯಲ್ಲಿ ಬಿದ್ದಿದ್ದಾರೆ. ಅವರು ಅನ್ನ ವಸ್ತ್ರಾದಿಗಳಿಲ್ಲದೆ ಕಂಗೆಟ್ಟಿದ್ದಾರೆ. ಅದನ್ನು ಕಡೆಗಣಿಸಿ ನೀವು ಅವರನ್ನು ಪಂಕ್ತಿ ಭೋಜನಕ್ಕೆ ಕರೆಯುತ್ತಿದ್ದೀರಿ. ಅವರೊಡನೆ ನೀವು ಒಮ್ಮೆ ಊಟ ಮಾಡಿದ ಮಾತ್ರಕ್ಕೆ ಅವರ ನಿಜವಾದ ಉದ್ಧಾರ ಆಗುವುದೇನು? ಯಾರೊಡನೆಯೂ ಊಟ ಮಾಡುವುದರಿಂದ ಆತ್ಮೋದ್ಧಾರವಾಗುವುದಿಲ್ಲ. ಪಾಪ ತ್ಯಾಗದಿಂದ ಜೀವಿಯ ಉದ್ಧಾರವಾಗುತ್ತದೆ. ಆದ್ದರಿಂದ ನೀವು ಅವರಿಂದ ಮಧು, ಮದ್ಯ, ಮಾಂಸ ತ್ಯಾಗ ಮಾಡಿಸಿರಿ. ನಿರಾಪರಾಧಿ ಜೀವ ಹಿಂಸೆ ತ್ಯಾಗ ಮಾಡಿಸಿರಿ. ಅವರ ಬಡತನ ದೂರ ಮಾಡಿರಿ. ಪ್ರತ್ಯೇಕ ಬಡವನಿಗೂ ಉಚಿತ ಭೂಮಿ ಕಾಣಿಕೆ ಕೊಡಿ. ಕೊಡುವಾಗ ಒಂದು ನಿಬಂಧನೆ ವಿಧಿಸಿ. ಪ್ರತಿಯೊಬ್ಬರೂ ಮಧು, ಮದ್ಯ, ಮಾಂಸ ತ್ಯಾಗ ಮಾಡತಕ್ಕದ್ದು. ನಿರಾಪರಾಧಿ ಜೀವಿಗಳನ್ನು ಕೊಲ್ಲಕೂಡದು. ಹೀಗೆ ಮಾಡಿದರೆ ಆ ಜೀವಿಗಳ ಸುಧಾರಣೆ ಆದೀತು''

ನೀಚಗೋತ್ರ ಕರ್ಮದಿಂದ ಕೀಳ್ಗತಿಯಲ್ಲಿ ಹುಟ್ಟಿ ಅಸಾತಾವೇದನೀಯ ಕರ್ಮದಿಂದ ಬಡತನ ರೋಗರುಜಿನಗಳನ್ನು ಎಡಬಿಡದೆ ಅನುಭವಿಸುವ ಅವುಗಳ ಸುಧಾರಣೆ ಎಂದರೆ ಅವುಗಳಿಂದ ಪಾಪ ತ್ಯಾಗ ಮಾಡಿಸುವುದು. ಅವರ ಹಸಿವಿಗೆ ಒಮ್ಮೆ ಹಿಟ್ಟು ಹಾಕಿದರೆ ಅವರ ಹಸಿವು ಶಾಶ್ವತವಾಗಿ ಹಿಂಗಲಾರದು. ಒಮ್ಮೆ ಅವರೊಡನೆ ಪಂಕ್ತಿಯೂಟ ಮಾಡಿದರೆ ಅವರೇನೂ ಮೇಲ್ದರ್ಜೆಯವರಾಗಲಾರರು. ಅವರ ಬಡನತ ಶಾಶ್ವತವಾಗಿ ನಿವಾರಣೆಯಾಗುವ ಮಾರ್ಗೋಪಾಯಗಳೊಡನೆ ಆತ್ಮನಲ್ಲಿ ಶುಭ ಸಂಸ್ಕಾರದ ಬೀಜವನ್ನೂ ಬಿತ್ತಬೇಕು. ಇದು ಆತ್ಮಗತ್ಯ. ಆಚಾರ್ಯ ಶ್ರೀಯವರ ಅನುಭವಿ ವಾಣಿಯಲ್ಲಿ ಸರ್ವಕಾಲೀನ, ಸರ್ವಯೋಗ್ಯ ಸಾಮಾಜಿಕ ಸೂತ್ರವಿದೆ. ಧಾರ್ಮಿಕ ದೃಷ್ಟಿಕೋನ, ಸಾಮಾಜಿಕ ದೃಷ್ಟಿಕೋನ ಭಿನ್ನಭಿನ್ನ ದಿಕ್ಕುಗಳಲ್ಲಿ ಹರಿದರೂ ಅವೆರಡರ ಸಮನ್ವಯದಿಂದಲೇ ನಿಜವಾದ ಸಮಾಜದ ಏಳಿಗೆ ಎನ್ನುವುದು ಎಲ್ಲರಿಗೂ ಗೊತ್ತಿಲ್ಲ.

ಶೂದ್ರರ ನಿಜವಾದ ಉದ್ಧಾರ

ಅವರು ಇದನ್ನೂ ಹೇಳಿದರು.

"ಬಡಪಾಯಿ ಶೂದ್ರರು ಮತ್ತು ಬಡವರ ಉದ್ಧಾರವನ್ನು ಶಾಸನ ಮಾಡಬಲ್ಲದು. ನಮ್ಮನ್ನು ಕೇಳಿದರೆ ಅದರ ನಿಜವಾದ ಮಾರ್ಗ ನಾವು ತೋರಿಸಿಕೊಡಬಲ್ಲೆವು. ಯಾವಾಗ ನಾವು ನಿರಂತರ ಏಕೇಂದ್ರಿಯ ಸೂಕ್ಷ್ಮ ಜೀವಿಗಳನ್ನೂ ರಕ್ಷಿಸುವಲ್ಲಿ ತತ್ಪರರಾಗಿರುವೆವೋ ಆಗ ಈ ಬಡಪಾಯಿ ಪಂಚೇಂದ್ರಿಯ ಮಾನವ ಪರ್ಯಾಯ ಧಾರಿ ಸಹೋದರರ ಹಿತದ ಧ್ಯಾನ ನಮ್ಮ ಮನಸ್ಸಿಗೆ ಸದಾ ಬರುತ್ತದೆ. ಅವರ ನಿಜವಾದ ಉದ್ಧಾರವೆಂದರೆ ಅವರನ್ನು ಸದಾಚಾರದಲ್ಲಿ ತೊಡಗಿಸುವುದು ಮತ್ತು ಅವರಿಗೆ ಅನ್ನ-ವಸತಿ ವಸ್ತ್ರಾದಿಗಳನ್ನು ಒದಗಿಸಿಕೊಡುವುದು."

ಪಾಪ ಪ್ರವೃತ್ತಿ ತ್ಯಾಗ ಮಾಡುವುದೇ ಆತ್ಮೋದ್ಧಾರದ ಪ್ರಥಮ ಸೂತ್ರ ಅಂತರಂಗ ಶುದ್ಧಿ ಆಯಿತೆಂದರೆ ಬಹಿರಂಗದಲ್ಲಿ ಒಳ್ಳೆಯದಾಗಲು ಹೆಚ್ಚು ಕಾಲ ಹಿಡಿಯುವುದಿಲ್ಲ. ಯಾರೇ ಶೂದ್ರರು ಪೂಜ್ಯಶ್ರೀಯವರನ್ನು ದರ್ಶನ ಮಾಡಿದಾಗಲೆಲ್ಲಾ ಅವರಲ್ಲಿ ಮೊದಲು ಆತ್ಮ ಜಾಗೃತಿಯ ಬೆಳಕನ್ನು ಕೊಡುತ್ತಿದ್ದರು. ಇದೇ ಅಲ್ಲವೇ ಮಹಾತ್ಮರ ಲಕ್ಷಣ.

ಶುಭಭಾವದಿಂದ ಜೀವನ ಶುದ್ಧಿ

ನನಗೆ ಶೇಡಬಾಳದಲ್ಲಿ ಆಚಾರ್ಯಶ್ರೀಯವರ ಒಬ್ಬ ಶೂದ್ರ ಶಿಷ್ಯ ಭೇಟಿಯಾದ. ಅವನು ಅಷ್ಟಮೂಲಗುಣಧಾರಿ ಮತ್ತು ರಾತ್ರಿ ಭೋಜನ ತ್ಯಾಗಿಯಾಗಿದ್ದ. ಉತ್ತಮ ಕುಲದಲ್ಲಿ ಹುಟ್ಟಿದವರೆಷ್ಟೋ ಪಾಪಾಚರಣೆಯಲ್ಲಿ ನಿಸ್ಸಂಕೋಚವಾಗಿ ತೊಡಗಿರುತ್ತಾರೆ. ಆದರೆ ಆ ಶುದ್ರನಲ್ಲಿ ಪೂಜ್ಯಶ್ರೀಯವರು ಉನ್ನತ ಚಾರಿತ್ರವನ್ನು ತುಂಬಿದ್ದರು. ಆ ಹರಿಜನ ಸಹೋದರನ ಚರ್ಯೆಯೂ ಚಕಿತಗೊಳಿಸಿತು. ನಾನು ಅಷ್ಟಮಿ-ಚತುರ್ದಶಿ ದಿನ ವ್ರತಪಾಲನೆ ಮಾಡುತ್ತೇನೆ ಎಂದು ಹೇಳಿದ. ಹರಿಜನ ಎಲ್ಲಿ? ಶುದ್ಧಾಚರಣೆ ಎಲ್ಲಿ? ಪೂಜ್ಯಶ್ರೀಯವರ ಪ್ರಭಾವ ಅದೆಷ್ಟಿರಬೇಡ? ಗ್ವಾಲಿಯರಲ್ಲಿ ಬೆಲಗಚ್ಚಿಯಾ ಜಿನ ಮಂದಿರದಲ್ಲಿ ಮದ್ಯ, ಮಧು, ಮಾಂಸ ತ್ಯಾಗ ಮಾಡಿದ ಇನ್ನೊಬ್ಬ ಹರಿಜನ ಭಕ್ತ ಸಿಕ್ಕಿದ್ದ: ಮತ್ತೊಬ್ಬ ಹರಿಜನ ವ್ಯಕ್ತಿ ಗ್ವಾಲಿಯರಲ್ಲಿ ಸಿಕ್ಕಿದ್ದ. ಅವನು ಸ್ವ. ಆಚಾರ್ಯ ಪಾಯಸಾಗರರಿಂದ ವ್ರತ ತೆಗೆದುಕೊಂಡಿದ್ದನಂತೆ. ಅವನಿಗೆ ಕ್ಷಯರೋಗವಿತ್ತು. ಆದರೂ ಇಂಜೆಕ್ಷನ್ ಔಷಧಿ ತ್ಯಾಗ ಮಾಡಿದ್ದ. ವ್ರತ ಶಕ್ತಿಯಿಂದ ಕ್ಷಯರೋಗವೇ ಕ್ಷಯವಾಗಿ ಹೋಯಿತು ಎಂದು ಬಹಳ ವಿಶ್ವಾಸದಿಂದ ಹೇಳಿದ.

ಸಹ ಭೋಜನದಿಂದ ಆತ್ಮೋದ್ಧಾರವಿಲ್ಲ.

ಯಾರು ಸಹ ಪಂಕ್ತಿಭೋಜನ ಮತ್ತು ವೈವಾಹಿಕ ಸಂಬಂಧಗಳಿಂದಲೇ ಆತ್ಮೋದ್ಧಾರವೆಂದು ತಿಳಿದಿದ್ದಾರೋ ಅಂತವರು ಸಂಸಾರ ಸಂಪುಟದಲ್ಲಿ ಗಾಢವಾಗಿ ಮುಳುಗಿ ಹೋಗುತ್ತಾರೆ. ಆಚಾರ್ಯ ಅಮೃತಚಂದ್ರಚಾರ್ಯರು ಈ ಬಗ್ಗೆ ಹೀಗೆ ಹೇಳಿದ್ದಾರೆ. ಯಾರು ಭೋಗ ಮತ್ತು ವಿಷಯಸೇವನೆಯ ಮೂಲಕ ಆತ್ಮೋದ್ಧಾರ ಭಾವಿಸುತ್ತಾರೋ ಅಂತವರು ನರಕ ನಿಗೋದ ದುಃಖದಲ್ಲಿ ಮುಳುಗುತ್ತಾರೆ.

ಅನಾದಿಕಾಲದಿಂದಲೂ ಗತಾನುಗತಿಕವಾಗಿ ನಡೆದುಕೊಂಡು ಬಂದಿರುವ ಸಿದ್ಧಾಂತವೆಂದರೆ ಭೋಗಗಳು ಭವರೋಗಕ್ಕೆ ಕಾರಣಗಳಾಗಿವೆ. ಅದೆಷ್ಟೋ ಋಷಿ ಮುನಿಗಳು ಭೋಗವಾಸನೆಯಿಂದ ಮುಕ್ತಿ ಪಡೆದು ಆತ್ಮಸಿದ್ಧಿ ಸಾಧಿಸಲು ಗೃಹ ತ್ಯಾಗ ಮಾಡಿದರು. ಸಹ ಪಂಕ್ತಿಭೋಜನ ವೈವಾಹಿಕ ಸಂಬಂಧಗಳಂತಹ ಯಾವುದೇ ಸಾಮಾಜಿಕ ಪದ್ಧತಿಗಳು ಆಯಾ ಸಾಮಾಜಿಕ ಚೌಕಟ್ಟಿಗೆ ಸೀಮಿತವಾಗಿವೆ. ಆತ್ಮ ಕಲ್ಯಾಣ ಮಾರ್ಗ ನಿವೃತ್ತಿ ಮಾರ್ಗ. ವಿಷಯ ಕಷಾಯ ಮತ್ತು ಸಾಮಾಜಿಕ ನೀತಿ ನಿರೂಪಣೆಗಳು ಅಲ್ಲಿ ಕೆಲಸಕ್ಕೆ ಬಾರವು. ಸಹ ಪಂಕ್ತಿ ಭೋಜನ ಆತ್ಮಕಲ್ಯಾಣ ಇವೆರಡಕ್ಕೂ ಏನೂ ಸಂಬಂಧವಿಲ್ಲ. ಸಹ ಭೋಜನದಿಂದ ಯಾರನ್ನೂ ಉದ್ಧರಿಸದಂತಾಗುವುದಿಲ್ಲ. ಸಹಭೋಜನ ಮಾಡಿದ ಮಾತ್ರಕ್ಕೆ ಬಡವರ ಬಡತನವೂ ಹರಿಯುವುದಿಲ್ಲ. ಬಡವರೇನೂ ಅದರಿಂದ ಸಮಾಜದ ಗಣ್ಯ ವ್ಯಕ್ತಿಗಳಾಗಿ ಮೇಲೇರುವುದಿಲ್ಲ. ಆರ್ಥಿಕ ಸಹಕಾರದಿಂದ ಬಡವರ ಜೀವನಮಟ್ಟ ಸುಧಾರಿಸಬಹುದಾದರೆ, ಸಾದಾಚಾರದಿಂದ ಆತ್ಮನ ಸುಧಾರಣೆ ಆಗುತ್ತದೆ. ಈ ಬಗ್ಗೆ ಒಂದು ಘಟನೆ ಇಲ್ಲಿ ಹೇಳಬೇಕಾಗಿದೆ.

ಶೇಡ ಬಾಳದ ಒಬ್ಬ ಧರ್ಮಪ್ರೇಮಿ ಹರಿಜನ ಈಗ ಸ್ವರ್ಗವಾಸಿಯಾಗಿದ್ದಾನೆ. ಅವನ ಹೇಳಿಕೆ ಈ ಬಗ್ಗೆ ಬೆಳಕು ಬೀರಬಲ್ಲದು. ಅವನು ಹೇಳಿದ "ಆಚಾರ್ಯ ಮಹರಾಜರು ನನ್ನ ನಿಜವಾದ ಉದ್ಧಾರ ಮಾಡಿದ್ದಾರೆ. ಅವರ ಉಪಕಾರವನ್ನು ನಾನು ಜನ್ಮಜನ್ಮದಲ್ಲೂ ಮರೆಯಲಾರೆ. ನನ್ನ ಅಸಲಿ ಉದ್ಧಾರವನ್ನು ವ್ರತ ಕೊಡುವುದರ ಮೂಲಕ ಮಾಡಿದ್ದಾರೆ. ದೊಡ್ಡದೊಡ್ಡವರೊಡನೆ ನಾನು ಊಟ ಮಾಡಬೇಕು. ಅಥವಾ ದೊಡ್ಡವರು ನನ್ನ ಜೊತೆಯಲ್ಲಿ ಊಟ ಮಾಡಬೇಕು ಎನ್ನುವ ಲಾಲಸೆ ನನ್ನಲ್ಲಿ ಇಲ್ಲ ಇದರಿಂದ ಆತ್ಮೋದ್ಧಾರ ಹೇಗಾದೀತು?"

ಜಪಾನಿಯುವನ ಅನುಭವ

ಈ ಸಂದರ್ಭದಲ್ಲಿ ಒಬ್ಬ ಜಪಾನ್ ಯುವಕನ ಬಗ್ಗೆ ಬರೆಯುವುದು ಉಚಿತ ಅನ್ನಿಸುತ್ತದೆ. ಒಬ್ಬ ಭಾರತೀಯ ವ್ಯಕ್ತಿ ತನ್ನ ಸೇವಕನ ನಿರೀಕ್ಷೆಯಲ್ಲಿದ್ದ. ಆ ಕೆಲಸ

ತಾನೇ ಮಾಡಿಕೊಳ್ಳಬಹುದಿತ್ತು. ಆದರೂ ಕೆಲಸದ ಆಳಿನ ನಿರೀಕ್ಷೆ ಮಾಡುತ್ತಿದ್ದ. ಪಕ್ಕದಲ್ಲಿ [illegible]ಸವಾಗಿದ್ದ ಜಪಾನ್ ಯುವಕ ಇದನ್ನೆಲ್ಲಾ ಗಮನಿಸುತ್ತಿದ್ದ. ಆವನ [illegible] ಸಣ್ಣ ಕೆಲಸ [illegible]ನೇ ಮಾಡಿಕೊಟ್ಟು ಹೀಗೆ ಹೇಳಿದ.

''ಮಹಾಶಯ! ಕಳ್ಳತನ ದುರಾಚಾರ ಮುಂತಾದ ಕೆಲಸ ಮಾಡಿದರೆ ನಾಚಿಕೆ ಪಟ್ಟುಕೊಳ್ಳಬೇಕು. ಆದರೆ ನಮ್ಮ ಕೆಲಸ ನಾವೇ ಮಾಡಿಕೊಳ್ಳುವುದು ಅವಮಾನದ ಮಾತೇ?'' ಅಮೇರಿಕಾದ ಅಧ್ಯಕ್ಷ ಅಬ್ರಹಾಂ ಲಿಂಕನ್ ಒಮ್ಮೆ ಹೀಗೆ ಹೇಳಿದ್ದ.

''ನಾನು ದಾಸನಾಗಲೂ ಇಚ್ಛಿಸುವುದಿಲ್ಲ. ಆದ್ದರಿಂದ ಯಾರನ್ನೂ ದಾಸ್ಯದಲ್ಲಿಡಲೂ ಬಯಸುವುದಿಲ್ಲ'' ಸ್ವಾವಲಂಬನೆ ಎನ್ನುವುದು ಕೇವಲ ಸಾಮಾಜಿಕ ಜೀವನಕಷ್ಟೇ ಅಲ್ಲ, ಆಧ್ಯಾತ್ಮ ಸಾಧನೆಗೂ ಬೇಕು. ಪರಾವಲಂಬಿ ಎಂದೆಂದೂ ಆಧ್ಯಾತ್ಮ ಸಾಧನೆಯಲ್ಲಿ ಒಂದು ಹೆಜ್ಜೆಯೂ ಇಡಲಾರ. ಆಧ್ಯಾತ್ಮ ಸಾಧನೆಯೆಂದರೆ ಮಹಾ ಸ್ವಾವಲಂಬನೆಯ ಸಂಗ್ರಾಮ ಭೂಮಿ. ಅಲ್ಲಿ ಪರಾವಲಂಬನೆಗೆ ಅಣುಮಾತ್ರವೂ ಅವಕಾಶವಿಲ್ಲ. ಜಡತ್ವಕ್ಕೆ ಸ್ಥಳವೇ ಇಲ್ಲ. ಮುನಿಗಳು ಜೀವನದ ಸರ್ವ ಪರಾವಲಂಬನೆ ಕಿತ್ತೊಗೆಯಲು ನಗ್ನತ್ವದವರೆಗೂ ಹೋಗಬೇಕಾಯಿತು. ಸ್ವಯಂ ವಿಹರಿಸುತ್ತಾ ಸಂಚರಿಸುತ್ತಾ ಪಾಣಿ ಪಾತ್ರದಿಂದಲೇ ಆಹಾರ ಸ್ವೀಕರಿಸುತ್ತಾರೆ. ಉಪಸರ್ಗ ಬಂದಾಗಲೂ ಸಹಿಸಬಲ್ಲರೇ ಹೊರತು ರಕ್ಷಣೆಗಾಗಿ ಅನ್ಯರನ್ನು ಅವಲಂಬಿಸುವುದಿಲ್ಲ. ಇಂತಹ ಸಿಂಹವೃತ್ತಿಯನ್ನು ಸ್ವೀಕರಿಸಲು ಶ್ರಾವಕಾವಸ್ಥೆಯಲ್ಲಿಯೇ ಸ್ವಾವಲಂಬನೆ ಕಲಿಯಬೇಕಾಗುತ್ತದೆ. ಆಚಾರ್ಯಶ್ರೀಯವರ ಆದರ್ಶಗಳು ಸಾಮಾಜಿಕ ಮತ್ತು ಆಧ್ಯಾತ್ಮಗಳನ್ನು ಬೆಸೆಯುವ ಕೊಂಡಿಗಳಾಗಿದ್ದವು. ಅವರ ಉಪದೇಶದಿಂದ ಮೂಲಭೂತ ಆಂತರಿಕ ಪರಿವರ್ತನೆ ಆಗತೊಡಗಿತು. ಮಹಾರಾಜರು ಇಂತಹ ಲೋಕೋತ್ತರ ಜ್ಞಾನವನ್ನು ಎಲ್ಲಿಂದ ಓದಿ ಕಲಿತರು ಶಾಸ್ತ್ರದಲ್ಲಿ ಎಲ್ಲಿಯೂ ಇಂತಹ ವಿಚಾರ ಹೇಳಿಲ್ಲ ಎಂದು ಜನಗಳು ಆಶ್ಚರ್ಯದಿಂದ ಮಾತನಾಡಿಕೊಳ್ಳುತ್ತಿದ್ದರು.

ಅಪೂರ್ವ ಶಕ್ತಿಯ ಕೇಂದ್ರ- ಸಂಯಮ ಮತ್ತು ಜಿನಭಕ್ತಿ

ಸಂಯಮ ಮತ್ತು ಜಿನೇಂದ್ರಭಕ್ತಿ ಅದ್ಭುತ ಶಕ್ತಿಯ ಕೇಂದ್ರಗಳಾಗಿವೆ. ಸಂಯಮ ಜೀವನದ ಪ್ರಶಾಂತ ಕ್ಷಣಗಳಲ್ಲಿ ಮಹತ್ಪೂರ್ಣ ವಿಚಾರಗಳು ಹೊಳೆಯುತ್ತವೆ. ಅಂತಹದ್ದನ್ನು ದೊಡ್ಡದೊಡ್ಡ ಶಾಸ್ತ್ರಜ್ಞರೂ ತಿಳಿಯಲಾರರು. ಶುದ್ಧ ದರ್ಪಣದಲ್ಲಿ ಸ್ಪಷ್ಟ ಪ್ರತಿಬಿಂಬ ಗೋಚರಿಸುವಂತೆ ಮಹಾಸಂಯಮಿಗೆ ತತ್ವವಿಚಾರ ಸ್ವಯಮೇವ ಗೋಚರಿಸುತ್ತದೆ. ಮಹಾನ್ ತಪಶ್ಚರ್ಯೆಗೆ ಅನಾದಿ ಸಂಚಿತ ಪಾಪರಾಶಿ ಉರಿದು ಹೋಗುತ್ತದೆ. ಆಗ ಆತ್ಮನಿಗೆ ಅನಂತ ಗುಣ ಅಭಿವ್ಯಕ್ತಿ ಮೂಡುತ್ತದೆ ಮತ್ತು ವಿಶೇಷ

ಪದಾರ್ಥಗಳ ಬೋಧೆಯೂ ಹುಟ್ಟುತ್ತದೆ. ಪೂಜ್ಯಶ್ರೀಯವರ ಉಗ್ರತಪಶ್ಚರ್ಯೆ ಅವರಿಗೆ ಪರಿಪಕ್ವ ಜ್ಞಾನ ತಂದುಕೊಟ್ಟಿತ್ತು.

ಒಮ್ಮೆ ಜೇಷ್ಠ ಮಾಸದ ಭೀಷಣ ಬೇಗೆಯಲ್ಲಿ ಮಧ್ಯಾನ್ಹದ ಸಾಮಾಯಿಕ ಮುಗಿಸಿ ಬಡವಾಣಿಯತ್ತ ಚೆನ್ನಾಗಿ ಕಾದಿದ್ದ ಡಾಂಬರ್ ರಸ್ತೆಯಲ್ಲಿ ನಡೆದುಹೋಗುತ್ತಿದ್ದರು ಭೂಮಿಯು ಸೂರ್ಯನ ಪ್ರಚಂಡ ತಾಪಕ್ಕೆ ಬೆಂಕಿಯ ಕೆಂಡದಂತೆ ಕಾದಿತ್ತು. ಸೂರ್ಯ ನೆತ್ತಿಯ ಮೇಲೆ ನಿಗಿನಿಗಿಸುತ್ತಿದ್ದ. ಪಕ್ಷಿಗಳು ತಾಪಕ್ಕೆ ಗೂಡು ಸೇರಿದ್ದವು. ಬೀಸುವ ಬಿಸಿಗಾಳಿ ಮೈಯ್ಯಿಗೆ ಚುರುಕು ಮುಟ್ಟಿಸುತ್ತಿತ್ತು. ಆ ಭಯಂಕರ ಝಳಕ್ಕೆ ಗಂಟಲು ಒಣಗಿ ನಾಲಿಗೆ ಕಿತ್ತು ಬರುತ್ತಿತ್ತು. ಇಂತಹ ಭಯಂಕರದ ದಿನಗಳಲ್ಲಿ ಶ್ರಾವಕರು ಬಳಲಿ ಬೆಂಡಾಗಿ ದಾಪುಗಾಲು ಹಾಕುತ್ತಾ ಆಚಾರ್ಯ ಶ್ರೀಯವರನ್ನು ಹಿಂಬಾಲಿಸುತ್ತಿದ್ದರು. ಪರಿಸ್ಥಿತಿ ವಿಕಟವಾದಷ್ಟೂ ಜ್ಞಾನಿಗಳ ಭಾವನೆ ಶುದ್ಧವಾಗುತ್ತಾ ಹೋಗುತ್ತದೆ. ಆಗ ಆ ಮಹಾಯೋಗಿ ಹೀಗೆ ಚಿಂತಿಸುತ್ತಿದ್ದರು. ನರಕದ ವರ್ಣನಾತೀತ ಉಷ್ಣವೇದನೆ ಎದುರು ಇದು ಎಷ್ಟರದ್ದು? ಮಹಾಭಯಂಕರ ತಾಪದಿಂದ ಬಳಲಿದ ನಾರಕಿ ಜೀವಿಗಳಿಗೆ ಒಂದು ಸಮುದ್ರದಷ್ಟು ನೀರನ್ನೂ ಹೀರಿಬಿಡುವೆನೆನ್ನುವಷ್ಟು ಬಾಯಾರಿಕೆ ಆದರೂ ನೀರಿನ ಒಂದು ಬಿಂದುವೂ ಸಿಗುವುದಿಲ್ಲ. ಆ ಮಹಾ ಭಯಂಕರ ಉಷ್ಣ, ತಾಪದೆದುರು ಇದು ಎಷ್ಟು ದೊಡ್ಡದು? ನರಕದ ಆ ವೇದನೆಯನ್ನು ನಾನು ಎಷ್ಟು ಭಾರಿ ಅನುಭವಿಸಿ ಬಂದಿಲ್ಲ? ಪಶುಗತಿಯಲ್ಲಿಯೂ ಹಸಿವು ಬಾಯಾರಿಕೆಯಿಂದ ಬಳಲಿ ಬಿದ್ದರೂ ಕರುಣೆ ತೋರದೆ ಚರ್ಮ ಸುಲಿಯುವಂತೆ ಹೊಡೆದು ದುಡಿಸಿಕೊಳ್ಳುತ್ತಾರೆ. ಇಂತಹ ಅಸಹ್ಯ ವೇದನೆಯನ್ನು ಅದೆಷ್ಟು ಬಾರಿ ತಿರ್ಯಂಚ ಗತಿಗಳಲ್ಲಿ ಅನುಭವಿಸಿಲ್ಲ? ಅನಂತ ಭವಗಳಲ್ಲಿ ನಾನು ಅನುಭವಿಸಿರುವ ನಾನಾ ವೇದನೆಗಳ ಮುಂದೆ ಇದನ್ನು ಹೋಲಿಸಿದರೆ ಇದು ಮಹಾ ಮೇರುವಿನೆದುರು ಒಂದು ಸಣ್ಣ ಮರಳು ಕಣದಂತಾದೀತು! ಹೀಗೆ ತತ್ವ ಸಮಾರಾಧನೆಯಲ್ಲಿ ತಲ್ಲೀನರಾಗಿ ಆ ಧೈರ್ಯ ಮೇರು ಸಾಮಾನ್ಯರಿಗೆ ಅಸಾಧ್ಯವಾದ ಉಗ್ರ ತಾಪವನ್ನು ತಣ್ಣನೆ ಸಹಿಸುತ್ತಾ ನಡೆದು ಹೋದರು. ಧನ್ಯ. ಧನ್ಯ ಪರಮ ಮುನೀಂದ್ರಾ! ಧನ್ಯಧನ್ಯ ವೀತರಾಗ ಮುನಿಪುಂಗವಾ!!

ಈ ಭೀಕರ ಉಷ್ಣತೆ ಅವರ ಚಿರ ನಿರೋಗಿ ಬಲಿಷ್ಠ ಶರೀರವನ್ನು ಸ್ವಲ್ಪವೂ ವಿಚಲಿತಗೊಳಿಸಲಿಲ್ಲ. ಆದರೆ ನೇತ್ರ ರೋಗವನ್ನು ಉತ್ಪನ್ನ ಮಾಡಲು ಸಮರ್ಥವಾಗಿ ಬಿಟ್ಟಿತು. ಆಧರೆ ನೇತ್ರಕ್ಕೆ ಅಂಟಿದ ವ್ಯಾಧಿಗಿಂತಲೂ ಆತ್ಮನಿಗೆ ಅಂಟಿದ ಅನಾದಿ ಬದ್ಧ ವ್ಯಾಧಿಯತ್ತವೇ ಅವರು ಹೆಚ್ಚು ಗಮನ ಹರಿಸಿದರು. ಆತ್ಮನನ್ನು ನಿರೋಗಿಯನ್ನಾಗಿ ಮಾಡಲು ಜಿನವಾಣಿ ರಸಾಯನದ ಔಷಧವನ್ನಷ್ಟೇ ಪಾನಮಾಡುತ್ತಿದ್ದರು. ಅವರು ಸದಾ ಆತ್ಮ ಪೋಷಣೆಯಲ್ಲೇ ಹೆಚ್ಚು

ತತ್ಪರರಾಗಿರುತ್ತಿದ್ದರು. ಯಾವುದೇ ಕಾರಣದಿಂದ ಆತ್ಮನ ಮೌಲ್ಯಗಳನ್ನು ಅಪಮೌಲ್ಯಗೊಳಿಸಲು ಬಿಡುತ್ತಿರಲಿಲ್ಲ. ರೋಗ ಮುಪ್ಪು ಮುಂತಾದವುಗಳು ಶರೀರದ ಸ್ವಭಾವ. ಎಷ್ಟೇ ಉಪಚಾರ ಮಾಡಿದರೂ ಕಾಲ ಬಂದ ಕೂಡಲೇ ಹಣ್ಣೆಲೆಯಂತೆ ಈ ಶರೀರ ಕಳಚಿ ಬಿದ್ದು ಹೋಗದೆ ಇರದು. ಈ ಹುಟ್ಟು ಸಾವುಗಳ ರೋಗಕ್ಕೆ ಕಾರಣವನ್ನು ಆತ್ಮನಿಂದಲೇ ಕಿತ್ತುಹಾಕಿದಾಗ ಆ ದುಃಖಕ್ಕೆ ಪೂರ್ಣವಿರಾಮ. ಆದ್ದರಿಂದ ಚಿಕಿತ್ಸೆಯ ಮೂಲ ಆತ್ಮ. ಚಿಕಿತ್ಸೆ ನಡೆಯಬೇಕಾದ್ದು ಆತ್ಮನಿಗೆ. ಈ ರೀತಿ ಅವರು ಹೆಚ್ಚುಹೆಚ್ಚು ಆತ್ಮ ಸ್ವರೂಪ ಚಿಂತನೆಯಲ್ಲಿ ಒಂದಾಗಿ ಬೆರೆತುಹೋಗುತ್ತಿದ್ದರು. ಶರೀರವನ್ನು ಒಂದು ಬದುಕುವ ಸಾಧನದಂತೆ ಭಾವಿಸಿದ್ದರು. ಕುರುಡನ ಕೈಯ್ಯಲ್ಲಿರುವ ಕೋಲಿನಂತೆ ಆತ್ಮಕಲ್ಯಾಣದ ಊರುಗೋಲನ್ನಾಗಿ ತಿಳಿದರು. ಇಂತಹ ಉನ್ನತ ಭಾವನೆಗಳಿಂದ ಉತ್ತರ ಪ್ರಾಂತ್ಯಗಳ ಭಯಂಕರ ಶೀತೋಷ್ಣಗಳ ಜಂಝಾವಾತವನ್ನೂ ಸಮತಾಭಾವದಿಂದ ಸಹಿಸಿದರು. ಅವರೊಬ್ಬ ಉಷ್ಣ-ಶೀತ ಪರೀಷಹಜಯಿ ಮಹಾಮುನಿ!

ಪ್ರತಾಪ್‌ಗಡ್‌ದಲ್ಲಿ ಪೂಜ್ಯಶ್ರೀಯವರ ವರ್ಷಾಯೋಗ ನಡೆದಿತ್ತು. ಅವರ ಶರೀರದಲ್ಲಿ ಒಂದು ಚರ್ಮರೋಗ ಕಾಣಿಸಿತು. ''ಶರೀರ ವ್ಯಾದಿ ಮಂದಿರಮ್'' ಎನ್ನುವಂತೆ ಈ ಶರೀರದ ಅಂಗುಲ ಅಂಗುಲವೂ ವಿಚಿತ್ರ ರೋಗಗಳ ಉಗಮಸ್ಥಾನ. ಕೇವಲ ಕಣ್ಣುಗಳಲ್ಲೇ ೯೬ ಸಾವಿರ ರೋಗಗಳು ಹುಟ್ಟುವ ಸಂಭವವಿದೆಯಂತೆ! ಇನ್ನು ಇಡೀ ಶರೀರದ ಪರಿಸ್ಥಿತಿ ಇನ್ನೆಷ್ಟು ಕೆಟ್ಟದ್ದಿರಬೇಡ? ರೋಗದ ಹುಟ್ಟಿಗೆ ಸಮಯ ಸಂದರ್ಭದ ಕಟ್ಟುಪಾಡೇನೂ ಇಲ್ಲ. ಅವರಿವರೆನ್ನುವ ಭೇದ ಭಾವವೂ ಇಲ್ಲ. ಭೋಗಿಯಾದರೇನು? ಯೋಗಿಯಾದರೇನು? ರೋಗಕ್ಕೆ ವ್ಯತ್ಯಾಸವೇ ಇಲ್ಲ. ಸನತ್ಕುಮಾರ ಮುನಿಯ ಶರೀರದಲ್ಲಿ ಏಳುನೂರು ಬಗೆಯ ರೋಗಗಳು ಏಕ ಕಾಲದಲ್ಲಿ ಹುಟ್ಟಿದವಂತೆ. ಅದರ ವೇದನೆ ಅದೆಷ್ಟು ಉಘ್ರವಾಗಿತ್ತೋ? ವಾದಿರಾಜ ಮುನಿಯೂ ಕುಷ್ಟ ರೋಗ ಪೀಡಿತರಾಗಿದ್ದರು. ಮಹಾತಾರ್ಕಿಕರಾದ ಸಮಂತ ಭದ್ರಾಚಾರ್ಯರು ಭಸ್ಮಕ ರೋಗದಿಂದ ನರಳುವಂತಾಗಲಿಲ್ಲವೇ? ಪೂರ್ವ ಜನ್ಮ ಕೃತಂ ಪಾಪಂ ವ್ಯಾದಿರೂಪೇಣ ಪೀಡಿತಃ ಎನ್ನುವಂತೆ ಕರ್ಮೋದಯದಿಂದ ನಾನಾರೋಗಗಳು ಸಮಯಾಸಮಯದ ಪರಿವೇ ಇಲ್ಲದೆ ಹುಟ್ಟುತ್ತವೆ. ಉಘ್ರ ತಪಸ್ವಿಗಳಿಗೆ ಮುಂದೆಂದೋ ಉದಯಕ್ಕೆ ಬರುವ ಕರ್ಮಗಳು ಇಂದೇ ಫಲ ಕೊಟ್ಟುಬಿಡುತ್ತವೆ. ಯೋಗಿಗೆ ರೋಗಗಳು ಕರ್ಮ ನಿರ್ಜರೆಗಾಗಿ ಬರುತ್ತದೆ. ಭೋಗಿಗೆ ಆಳುವುದಕ್ಕಾಗಿ (ಬಂಧಕ್ಕಾಗಿ) ಬರುತ್ತವೆ. ಭೋಗಿಗಳು ರೋಗಕ್ಕೆ ತುತ್ತಾದಾಗ ಆರ್ತ ರೌದ್ರ ಧ್ಯಾನ ವಶರಾಗುತ್ತಾರೆ. ಆದರೆ ಯೋಗಿಗಳು ಧರ್ಮ ಧ್ಯಾನ ನಿರತರಾಗಿ ಸಂವರ ನಿರ್ಜರೆ ಮಾಡಿಕೊಳ್ಳುತ್ತಾರೆ. ಪೂಜ್ಯಶ್ರೀಯವರ ತಪ ಅತ್ಯುಘ್ರವಾಗಿತ್ತು. ಆದ್ದರಿಂದ ಕರ್ಮ ಬೇಗನೆ ವಿಪಾಕಗೊಂಡು ಚರ್ಮ ರೋಗ ಹುಟ್ಟಿಕೊಂಡಿತ್ತು! ಒಬ್ಬ ಗೃಹಸ್ಥ ಅವರಿಗೆ ಬಾಷ್ಪ ಚಿಕಿತ್ಸೆ (Steam treatment)

ಕೊಡತೊಡಗಿದ. ತೀಕ್ಷ್ಣ ಉಷ್ಣತೆಯ ನೀರಾವಿಯ ವೇಗ ಮಸ್ತಕವನ್ನು ಸ್ಪರ್ಶಿಸಿ ತತ್ಕಾಲ ಅವರು ನಿಶ್ಚೇಷ್ಟಿತರಾಗಿ ಒರಗಿದರು. ಜನರು ಜೀವವೇ ಹೋಯಿತೇನೋ ಎಂದು ಭಾವಿಸಿದರು. ಕಣ್ಣುಗಳು ಕೀಲಿಸಿಬಿಟ್ಟವು. ಜನ ಭಯದಿಂದ ಬೆಚ್ಚಿಬಿದ್ದರು. ಸೂಕ್ತ ಉಪಚಾರದಿಂದ ಸ್ವಲ್ಪಸ್ವಲ್ಪವೇ ಕಣ್ಣು ಬಿಟ್ಟರು. ನಂತರ ಎದ್ದು ಕುಳಿತರು. ಅವರ ಮುಖದಲ್ಲಿ ಸ್ವಲ್ಪವೂ ವಿಷಾದದ ಗೆರೆ ಮೂಡಲಿಲ್ಲ. ಇದೇ ವೀತರಾಗ ಪರಮಹಂಸ ಭಾವ. ಸುಖ-ದುಃಖ ಶತ್ರು-ಮಿತ್ರ ಜೀವನ-ಮರಣ ಇವುಗಳಲ್ಲಿ ಸಮರಸ ಭಾವ ತೋರುವವರೇ ವೀತರಾಗಿ ಮುನಿ. ವೀತರಾಗಿ ಪರಮಹಂಸ ಭಾವಕ್ಕೆ ಶಾಂತಿಸಾಗರರದು ಒಂದು ದೊಡ್ಡ ಹೆಸರು!

ಆಚಾರ್ಯ ಶ್ರೀಯವರ ಸಂಘ ಮುಂದೊತ್ತುತ್ತಿತ್ತು. ಅತಿಶಯಕ್ಷೇತ್ರ ದಹಿಗಾಂ ಹಾಗೂ ನಾತೆಪುತೆ ಮೂಲಕ ಪಲ್‌ಟನ್ ಸೇರಿತು. ಅಲ್ಲಿಯ ಭವ್ಯ ಜಿನಾಲಯ ದರ್ಶನದಿಂದ ಪುಳಕಿತವಾಯಿತು. ಪಲಟನ್ ರಾಜ ತನ್ನ ಪರಿವಾರ ಸಹಿತ ಸಂಘದರ್ಶನ ಮಾಡಿ ಕೃತಾರ್ಥನಾದ.

ನಂತರ ಸಂಘದ ಸುಭಾಗಮನ ಅತಿಶಯಕ್ಷೇತ್ರ ಬಡಗಾಂನತ್ತ ಆಯಿತು. ಅಲ್ಲಿಂದ ಮುಂದೆ ಬಾರಾಮತಿ ಸೇರಿತು. ಆಗ ಅಲ್ಲಿ ಪಂಚಕಲ್ಯಾಣ ಮಹೋತ್ಸವ ನಡೆದಿತ್ತು. ಅವರ ನೇತೃತ್ವದಲ್ಲಿ ಅದು ಚಿರಸ್ಮರಣೀಯವಾಗಿ ನೆರವೇರಿತು. ನಂತರ ಕೊಲ್ಹಾಪುರ ಸಾಂಗ್ಲಿಯ ಮೂಲಕ ಬಾಹುಬಲಿ ಸೇರಿತು. ಅಲ್ಲಿಯೇ ಅವರು ವರ್ಷಯೋಗ ಕಳೆಯಲು ನಿರ್ಧರಿಸಿದರು. ಬಹು ಸಂಖ್ಯೆಯ ಶ್ರಾವಕ ಶ್ರಾವಿಕೆಯರು ಅವರ ಪುಣ್ಯ ಸಂದರ್ಶನ ಪಡೆದು ಧನ್ಯರಾದರು.

ತೀರ್ಥ ಯಾತ್ರೆ ೭

ಸಮ್ಮೇದಶಿಖರಿ ವಿಹಾರ

ಈ ಸಂದರ್ಭದಲ್ಲಿ ಬೊಂಬಾಯಿಯ ಧರ್ಮಾತ್ಮ ಹಾಗೂ ಉದೀಯಮಾನ ಪುಣ್ಯಾತ್ಮ ಪೂನಮ್ ಚಂದ್ ಘಾಸಿಲಾಲ್ ಜೌಹರಿ ಈ ಮಹಾಶಯನ ಮನದಲ್ಲಿ ಆಚಾರ್ಯ ಶ್ರೀಯವರ ಸಂಘವನ್ನು ಪೂರ್ಣ ವೈಭವದೊಡನೆ ಸಮ್ಮೇದ ಶಿಖರಿಯ ವಂದನಾರ್ಥ ಕರೆದುಕೊಂಡು ಹೋಗುವ ಮಂಗಲಮಯ ಭಾವ ಉತ್ಪನ್ನವಾಯಿತು. ಅವರು ಗುರುಚರಣಗಳಲ್ಲಿ ತಮ್ಮ ಪವಿತ್ರ ಭಾವನೆ ವ್ಯಕ್ತ ಮಾಡಿದರು. ಆಚಾರ್ಯ ಶ್ರೀಯವರು ತಮ್ಮ ಸ್ವೀಕೃತಿ ಕೊಟ್ಟುಬಿಟ್ಟರು. ಅಂತಹದ್ದೇ ಪ್ರಾರ್ಥನೆ ಈ ಮೊದಲು ಅನ್ಯರಿಂದ ಮಾಡಲ್ಪಟ್ಟಿತು. ಕಾಲಲಬ್ಧಿ ಕೂಡಿ ಬಂದಿರಲಿಲ್ಲ. ಆ ಸೌಭಾಗ್ಯ ಪೂನಮ್ ಚಂದ್‌ರಿಗೆ ಪ್ರಾಪ್ತಿಯಾಗಿತ್ತು.

ಸಮ್ಮೇದಶಿಖರಿ ಅನಾದಿ ಕಾಲೀನ ನಿರ್ವಾಣ ಭೂಮಿ. ವರ್ತಮಾನದ ೨೦ ಜನ ತೀರ್ಥಂಕರರು ಇಲ್ಲಿ ಮೋಕ್ಷಕ್ಕೆ ಹೋಗಿದ್ದಾರೆ. ಎಷ್ಟೋ ಜನ ಅನ್ಯ ಕೇವಲಿಗಳೂ ಇಲ್ಲಿಂದ ಮೋಕ್ಷಕ್ಕೆ ಹೋಗಿದ್ದಾರೆ. ಸಮ್ಮೇದಶಿಖರಿಯ ಅಂಗುಲ ಅಂಗುಲ ಜಾಗವೂ ಮಹಾ ತಪಸ್ವಿಗಳಿಂದ ಪವಿತ್ರಗೊಂಡಿದೆ. ಅಲ್ಲಿ ಹುಟ್ಟುವ ಜೀವಿಗಳೆಲ್ಲಾ ಭವ್ಯ ಜೀವಿಗಳೇ! ಅನಾದಿಕಾಲದಿಂದಲೂ ತ್ರಿಕಾಲ ವರ್ತಿ ತೀರ್ಥಂಕರರುಗಳ ಮೋಕ್ಷಸ್ಥಾನ. ಅದು ಕಾಲದೋಷದಿಂದ ವರ್ತಮಾನಕಾಲದಲ್ಲಿ ೨೦ ಜನ ತೀರ್ಥಂಕರರು ಮಾತ್ರ ಅಲ್ಲಿಂದ ನಿರ್ವಾಣ ಹೊಂದಿದರು. ವೃಷಭನಾಥರು ಕೈಲಾಸ ಪರ್ವತದಿಂದಲೂ, ವಾಸುಪೂಜ್ಯರು ಚಂಪಾಪುರಿಯಿಂದಲೂ, ನೇಮಿನಾಥರು ಊರ್ಜಯಂತ ಗಿರಿಯಿಂದಲೂ, ವರ್ಧಮಾನರು ಪಾವಾಪುರಿಯಿಂದಲೂ ಮೋಕ್ಷ ಹೊಂದಿದರು. ಇದು ಹುಂಡಾವಸರ್ಪಿಣಿ ಕಾಲದ ಪ್ರಭಾವವಾಗಿದೆ.

ಭವಿಷತ್ಕಾಲದ ಎಲ್ಲಾ ತೀರ್ಥಂಕರರೂ ಇಲ್ಲಿಂದಲೇ ಮುಕ್ತಿಗೆ ಹೋಗುತ್ತಾರೆ. ಭಗವಾನ್ ವೃಷಭನಾಥರು ಹಿಂದೂ ಪುರಾಣಗಳಲ್ಲಿ ಬರುವ ಕೈಲಾಸವಾಸಿ ಶಂಭೂಮಹಾದೇವನಾಗಿದ್ದಾನೆಂದು ನನಗೆ ಅನ್ನಿಸುತ್ತದೆ.

ನಿರ್ವಾಣ ಕ್ಷೇತ್ರ ಪೂಜಾ ಪಾಠದಲ್ಲಿ ಹೀಗೆ ಹೇಳಿವೆ.

''ಬಿ ಸೋಂ ಸಿದ್ಧ ಭೂಮಿಜಾ ಉಪರ್ ಶಿಖರ್ ಸಮ್ಮೇದ್ ಮಹಾಗಿರಿ ಉಪರ್ ಏಕ್‌ಬಾರ್ ವಂದ್ ಜೋಕೋಯಿ ನರಕ್ ಪಶುಗತಿ ನಹಿ ಹೋಯಿ''

ಸಮ್ಮೇದ ಶಿಖರಿಯ ವಂದನೆ ಯಾರು ಬೇಕಾದರೂ ಮಾಡಬಹುದು. ಅದಕ್ಕೆ ಯಾವ ಮಹತ್ವವಿದೆ? ಭಾವಸಹಿತ ಮಾಡಿದರೆ ಮಾತ್ರ ಅದರ ಫಲ. ಅದು ಕೇವಲ ಸಮ್ಯಗ್ದೃಷ್ಟಿಗೆ ಮಾತ್ರ ಸಾಧ್ಯ. ನೋಡಿದೆ, ದರ್ಶನ ಮಾಡಿದೆ ಇವೆರಡರಲ್ಲಿಯೂ ಎಷ್ಟು ಅಂತರವಿದೆ. ಸೇವಕನನ್ನು ನೋಡುತ್ತೇವೆ. ಭಗವಂತನ ದರ್ಶನ ಮಾಡುತ್ತೇವೆ. ಇವೆರಡೂ ಒಂದೇ ಕ್ರೀಯೆಗಳಾದರೂ ಭಾವದ ಅಂತರವಿದೆ. ಆದ್ದರಿಂದ ನಾವು ದರ್ಶನವನ್ನು ಭಾವ ಸಹಿತ ಅಂದರೆ ತ್ರಿಕರಣ ಶುದ್ಧಿ ಪೂರ್ವಕ ಮಾಡಿದಾಗಲೇ ನಿಜವಾದ ಫಲ. ಭಗವಾನ್ ಬಾಹುಬಲಿ ಮೂರ್ತಿಯನ್ನು ಸಾವಿರಾರು ಜನ ನೋಡುತ್ತಾರೆ. ಆದರೆ ದರ್ಶನ ಮಾಡುವವರು ಕ್ವಚಿತ್, ಕ್ವಚಿತ್ ! ಎಷ್ಟೋ ಜನ ಸುಂದರವಾದ ಕಲೆ, ಶಿಲೆ ಎಂದೆಲ್ಲಾ ಹೊಗಳುತ್ತಾರೆ. ಆದರೆ ಆ ಸಾಕಾರ ಮೂರ್ತಿಯ ಹಿನ್ನೆಲೆಯಲ್ಲಿ ನಿರಾಕಾರ ಪರಮಾತ್ಮನ ಸ್ವರೂಪ ಅಡಗಿದೆ ಎಂದು ಎಷ್ಟು ಜನ ತಿಳಿದಾರು?

ಸಮ್ಮೇದಶಿಖರ ಎಲ್ಲಾ ಪರ್ವತಗಳಂತೆ ಇದೂ ಒಂದು ಪರ್ವತ. ಇದಕ್ಕೇಕಿಷ್ಟು ಮಹತ್ವವೆಂದು ಯಾರಾದರೂ ಕೇಳಬಹುದು. ಅಸಂಖ್ಯಾತ ಜೀವಗಳು ಇಲ್ಲಿ ಮೋಕ್ಷ ಪಡೆದಿರುವುದರಿಂದ ಅದರ ಸ್ಮರಣೆ ಶುಭಭಾವವನ್ನು ಉತ್ಪನ್ನ ಮಾಡುತ್ತದೆ. ಸಮ್ಮೇದ ಶಿಖರಿ ಆತ್ಮನಲ್ಲಿ ವಿಶೇಷ ಪ್ರಭಾವವನ್ನು ಬೀರುವುದರಿಂದ ಅದರ ದರ್ಶನ ಅನ್ಯ ಪರ್ವತಗಳಿಗಿಂತಲೂ ಮಹತ್ವಪೂರ್ಣವಾಗಿದೆ. ಪರಮಾತ್ಮ ಪ್ರಕಾಶದಲ್ಲಿ ಒಂದು ಮಾತು ಬಂದಿದೆ.

''ಹೇ ಆತ್ಮನ್! ನೀನು ಬಾಹ್ಯದಲ್ಲಿ ತೀರ್ಥವಂದನಾರ್ಥ ಅಲ್ಲಿ ಏಕೆ ಹೋಗುವೆ? ನೀನೇ ನಿಜವಾದ ತೀರ್ಥ''ಯಾರು ತನ್ನಾತ್ಮನನ್ನು ತಿಳಿಯುತ್ತಾ ಹೋಗುತ್ತಾನೆ ಆಗ ಅವನ ಸ್ವಸ್ವರೂಪ ಸಂವೇದನೆಯೇ ಒಂದು ತೀರ್ಥವಾಗಿ ಪರಿಣಮಿಸುತ್ತದೆ. ಆಗಿ ಹೋದ ಮಹಾಪುರುಷರ ಸ್ಮರಣೆಯು ಮುಕ್ತಿಯ ಪ್ರತೀತಿ ಹುಟ್ಟಿಸಿ ಭಾವಶುದ್ಧಿಗೆ ತೀರ್ಥಕ್ಷೇತ್ರ ನಿಮಿತ್ತ ಕಾರಣವಾಗುವುದರಿಂದ ಪವಿತ್ರ ಎಂದು ಹೇಳಲಾಗಿದೆ. ಸಮ್ಮೇದ ಶಿಖರಿಯಲ್ಲಿ ಆಗಿ ಹೋದ ಅಸಂಖ್ಯಾತ ತೀರ್ಥಂಕರ ಮತ್ತು ಅನ್ಯ ಕೇವಲಿಗಳ ದಿವ್ಯ ಪರಮೌಧಾರಿಕ ದೇಹದಿಂದ ವಿನಿರ್ಗತ ಪುಣ್ಯ ಪರಮಾಣುಗಳಿಂದ ನೂರು ನೂರು ಯೋಜನಗಳವರೆಗೆ ಸುಬಿಕ್ಷ ನೆಲೆಸಿತ್ತು. ವೃಕ್ಷಗಳು ಫಲ ಭಾರದಿಂದ ತೂಗುತ್ತಿದ್ದವು. ಅತಿವೃಷ್ಟಿ ಅನಾವೃಷ್ಟಿಗಳಿರಲಿಲ್ಲ. ಭೂಮಿ ಹಸಿರುಟ್ಟು ಮದವಣಗಿತ್ತಿಯಂತೆ ಶೋಭಾಯಮಾನವಾಗಿತ್ತು. ಮಂದ ಸಂಗುದ ಮಾರುತ ಬೀಸುತ್ತಿತ್ತು. ಹಕ್ಕಿಗಳು ಚಿಲಿಪಿಲಿ ನಾದದಿಂದ ಸಂಭ್ರಮಗೊಂಡು ಬಾನ ಅಂಗಳದಲ್ಲಿ ಹಾರುತ್ತಿದ್ದವು. ಜನಗಳಿಗೆ ಅತೀವ ಆನಂದ ಗರಿಗೆದರಿ ಕುಣಿಯುತ್ತಿತ್ತು. ತೀರ್ಥಂಕರ ಕೇವಲಿಗಳ ಸಾನಿಧ್ಯದ ಮಹಿಮೆ ಇದು. ಆಧುನಿಕ ವಿಜ್ಞಾನಿ ತನ್ನೆಲ್ಲಾ ಕುಶಲತೆಯಿಂದ ನಿರ್ಮಾಣ ಮಾಡಿದ ಅಪೂರ್ವ

ವಾತಾವರಣವನ್ನು ಕೇವಲಿ ಸಾನಿಧ್ಯ ತಂದುಕೊಡುತ್ತದೆ. ವೈಜ್ಞಾನಿಕ ಸಂಶೋಧನೆಯ ಯಾವ ಪ್ರಯತ್ನವೂ, ಎಂತಹ ರಸಗೊಬ್ಬರಗಳೂ ಇಂತಹ ಚಮತ್ಕಾರ ಮಾಡಲಾರವು.

ನಿರ್ವಾಣ ಮುನಿ- ನಿರ್ವಾಣ ಕ್ಷೇತ್ರ- ನಿರ್ವಾಣ

ಮುನಿಗಳ ಕಠಿಣ ಸಾಧನೆಯ ಏಕಮಾತ್ರ ಲಕ್ಷ್ಯವೆಂದರೆ ನಿರ್ವಾಣ ಪ್ರಾಪ್ತಿ. ನಿರ್ವಾಣ ಮುನಿಗಳೂ, ನಿರ್ವಾಣ ಕ್ಷೇತ್ರ ದರ್ಶನಕ್ಕೆ ನಿರ್ವಾಣ ಪ್ರಾಪ್ತಿಗಾಗಿ ಹೋಗುತ್ತಾರೆ. ಯಾವ ಭೂಮಿಯ ಮೇಲೆ ನಿರಂತರ ಹಿಮ ಪಾತದಿಂದ ವೃಕ್ಷ ಸಂಪತ್ತು ನಷ್ಟವಾಗಿ ಹೋಗುತ್ತದೋ ಅದೇ ರೀತಿ ವೀತರಾಗ ಭಾವರೂಪಿ ಹಿಮಪಾತದಿಂದ ಮುನಿಯ ಕರ್ಮವೆಂಬ ಬೀಜ ನಷ್ಟವಾಗಿ ಹೋಗುತ್ತದೆ. ಆ ಕಾರಣದಿಂದ ನಿರ್ವಾಣ ಭೂಮಿಯ ದರ್ಶನ ಮಾಡುವುದು ಮುನಿಗಳ ಕರ್ತವ್ಯ. ಅದನ್ನು ಪಾರಮಾರ್ಥಿಕ ವೀರ ಭೂಮಿ ಎಂದು ಕರೆಯಲಾಗಿದೆ. ಗೃಹಸ್ಥರೂ ಅವಶ್ಯ ತೀರ್ಥಾಟನೆ ಮಾಡಬೇಕೆಂದು ಸಾಗರ ಧರ್ಮಾಮೃತದಲ್ಲಿ ಹೇಳಿದೆ. ನಿರ್ವಾಣ ಕ್ಷೇತ್ರದ ದರ್ಶನದಿಂದ ಮೋಕ್ಷದ ಪ್ರತೀತಿ ಹುಟ್ಟುತ್ತದೆ.

ಪೂರ್ವಾಪರ ಸಂಪೂರ್ಣವಾಗಿ ವಿಚಾರಿಸಿ ಶಾಂತಿಸಾಗರ ಮಹಾರಾಜರು ಶಿಖರಿಜಿ ದರ್ಶನಕ್ಕೆ ಒಪ್ಪಿಗೆ ಕೊಟ್ಟಿದ್ದರು. ಈ ಹರ್ಷಪ್ರದ ಸಮಾಚಾರ ಕಾರ್ತೀಕ ಕೃಷ್ಣ ಪ್ರತಿಪದೆ ೧೯೨೭ ರಲ್ಲಿ ಈ ರೀತಿ ಅಖಿಲ ಭಾರತ ಜೈನ ಬಾಂಧವರಿಗೆ ಪ್ರಕಟಿಸಲಾಯಿತು. ಅದನ್ನು ಹಾಗೆಯೇ ಇಲ್ಲಿ ಉದ್ಧರಿಸಲಾಗಿದೆ.

"ಸಂಘವಿಹಾರ- ಶಿಖರಿಜಿ ಯಾತ್ರೆ"

ಸಂಪೂರ್ಣ ದಿಗಂಬರ ಜೈನ ಸಮಾಜಕ್ಕೆ ತಿಳಿಸಲು ಸಂತೋಷವಾಗುತ್ತದೆ. ಏನೆಂದರೆ ನಾವು ಕಾರ್ತೀಕ ಅಷ್ಟಾಹ್ನಿಕ ಸಂಘದೊಡನೆ ಪಾವನ ಕರ್ಮಕ್ಷಯ ಕ್ಷೇತ್ರ ಸಮ್ಮೇದಶಿಖರಜಿಯ ವಂದನಾರ್ಥ ಪ್ರಸ್ಥಾನ ಮಾಡಲಿದ್ದೇವೆ. ಈ ಸಂಘವು ದಕ್ಷಿಣದ ಬಾಹುಬಲಿ ಕ್ಷೇತ್ರದಿಂದ ಹೊರಡಲಿದೆ. ರತ್ನತ್ರಯ ವಿಭೂಷಿತ ಪರಮಶಾಂತ ದಶಲಾಕ್ಷಣಿಕ ಧರ್ಮ ದುರಂಧರ ೧೦೮ ಆಚಾರ್ಯಶ್ರೀ ಶಾಂತಿಸಾಗರ ಮುನಿ ಮಹರಾಜರು ಸಂಘಸಮೇತ ವಿಹಾರ ಮಾಡಲಿದ್ದಾರೆ. ಈ ಸಂಘದಲ್ಲಿ ಮೂರು ನಾಲ್ಕು ಮುನಿಗಳು, ಮೂವರು ಐಲಕರು, ಹಾಗೂ ಒಬ್ಬರು ಕ್ಷುಲ್ಲಕರು ಸುಮಾರು ಐದಾರು ಬ್ರಹ್ಮಚಾರಿಗಳು ಮತ್ತು ಇಬ್ಬರು ಮೂವರು ಆರ್ಯಿಕೆಯರು ವಿಹಾರ ಮಾಡಲು ನಿಶ್ಚಯಗೊಳಿಸಲಾಗಿದೆ. ಇವರಲ್ಲದೆ ಇನ್ನೂ ಕೆಲವು ಮುನಿ ಐಲಕ ಅರ್ಜಿಕೆಯರುಗಳು ಹೊರಡುವ ಸಂಭವವಿದೆ. ಚತುರ್ಥಕಾಲದ ಮುನಿಗಳ ಸ್ವರೂಪ ಹೇಗಿತ್ತೋ ಹಾಗೆಯೇ ಪರಮಶಾಂತ ೧೦೮

ಆಚಾರ್ಯಶ್ರೀ ಶಾಂತಿಸಾಗರರ ಸ್ವರೂಪವಿದೆ. ಇಲ್ಲಿಯವರೆಗೆ ಈ ಸಂಘ ದಕ್ಷಿಣ ಪ್ರಾಂತ್ಯಗಳಲ್ಲಿ ವಿಹರಿಸುತ್ತಿತ್ತು. ಭವ್ಯರ ಪುಣ್ಯೋದಯದಿಂದ ಈಗ ಉತ್ತರ ಪ್ರಾಂತ್ಯದಲ್ಲಿ ವಿಹಾರ ಕೈಗೊಳ್ಳಲಿದೆ. ಆದ್ದರಿಂದ ಎಲ್ಲಾ ಸಮಾಜಕ್ಕೂ ಧರ್ಮಲಾಭ ಆಗಲಿದೆ.

(೧) ಈ ಸಂಘ ದಕ್ಷಿಣದ ಮಹರಾಷ್ಟ್ರದಿಂದ ಶಿಖರಿಜಿ ವರೆಗೆ ನಡೆದುಕೊಂಡು ಹೋಗಲಿದೆ.

(೨) ಸಂಘದೊಡನೆ ಬರುವ ಧರ್ಮ ಬಂಧುಗಳ ಎಲ್ಲಾ ವ್ಯವಸ್ಥೆ ಮಾಡಲಾಗುವುದು. ಯಾರಿಗೂ ಕಷ್ಟವಾಗದಂತೆ ನೋಡಿಕೊಳ್ಳಲಾಗುವುದು.

(೩) ಸಂಘ ರಕ್ಷಣಾರ್ಥ ಪೋಲೀಸ್ ಪೇದೆಗಳನ್ನು ನೇಮಿಸಲಾಗಿದೆ.

(೪) ಸಂಘದೊಡನೆ ಜಿನೇಂದ್ರ ಭಗವಾನರ ಪ್ರತಿಮೆಯ ಸಮವಸರಣ ಇರುತ್ತದೆ.

(೫) ಸಂಘದಲ್ಲಿ ಧರ್ಮಚರ್ಚೆ ಮತ್ತು ಧರ್ಮೋಪದೇಶ ನಿಮಿತ್ತ ವಿದ್ವಾನ್ ಪಂಡಿತರನ್ನು ಕೂಡಿಕೊಂಡು ಹೊರಡಲಾಗಿದೆ.

(೬) ಸಂಘದಲ್ಲಿ ಚಿಕಿತ್ಸಾ ವ್ಯವಸ್ಥೆ ಮಾಡಲಾಗಿದೆ.

(೭) ಸಂಘದಲ್ಲಿ ಅತಿಥಿಗಳಿಗಾಗಿ ಭೋಜನಾದಿಗಳ ವ್ಯವಸ್ಥೆ ಇದೆ.

(೮) ಸಂಘದೊಡನೆ ಯಾರು ಎಷ್ಟು ದಿನ ಇರುವರೋ ಅಥವಾ ಪೂರ್ಣ ಯಾತ್ರೆ ಮಾಡುವರೋ ಅದರ ಎಲ್ಲಾ ಜವಾಬ್ದಾರಿ ತೆಗೆದುಕೊಳ್ಳಲಾಗುವುದು.

ಪ್ರತಿಯೊಬ್ಬ ಸಮಾಜ ಬಾಂಧವರಿಗೂ ಲಾಭವಾಗಲೆಂದು ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಬಡವರು ಸಂಘದೊಡನೆ ಸೇರಿಕೊಳ್ಳಲು ಸ್ವಾಗತವಿದೆ. ಸಂಘದೊಡನಿರುವ ಶ್ರಾವಕರಿಗೆ ಧರ್ಮೋಪದೇಶ ಸುಪಾತ್ರದಾನ ತೀರ್ಥವಂದನೆ ಆದಿ ಅಪೂರ್ವ ಲಾಭ ಆಗಲಿದೆ. ತ್ಯಾಗಿ, ಬ್ರಹ್ಮಚಾರಿಯಾದಿಗಳಿಗೆ ವಿಶೇಷವಾಗಿ ವಿನಂತಿಸುವುದೇನೆಂದರೆ ಸಂಘದೊಡನೆ ಸೇರಿ ಶೋಭೆಯನ್ನು ಹೆಚ್ಚಿಸುವುದು. ಇದೇ ನಮ್ಮ ಪ್ರಾರ್ಥನೆಯಾಗಿದೆ.

ಇತೀ ಸಮಾಜ ಸೇವಕ
ಪೂನಮ್ ಚಂದ್ ಘಾಸಿಲಾಲ್. ಜೋಹರಿ
ಜೋಹರಿ ಬಜಾರ್
ಬಾಂಬೆ ನಂ. 2

ಸರ್ವ ಸಂಘ ಪರಿತ್ಯಾಗಿ ಮುನಿ ಸಂಘದೊಡನೆ ಹೋಗುವುದು ಉಚಿತವೇ ಎಂದು ಯಾರಾದರೂ ಕೇಳಬಹುದು. ಈ ಸಂಶಯವೂ ಸರಿಯಲ್ಲ. ಸಂಘದೊಡನಿದ್ದೂ ತಮ್ಮ ಮೂಲಗುಣಗಳನ್ನು ಸರಿಯಾಗಿ ಪಾಲಿಸುತ್ತಾರೆ.

ಸಾಧರ್ಮಿ ಸಾಧುಗಳೊಡನೆ ವಿಹರಿಸುವುದರಿಂದ ರತ್ನತ್ರಯ ಧರ್ಮದ ಪಾಲನೆಯಾಗುತ್ತದೆ. ಜಿನಧರ್ಮದ ಪ್ರಭಾವನೆ ಆಗುತ್ತದೆ. ಅನೇಕ ಜೀವಗಳ ಆತ್ಮ ಹಿತ ಆಗುತ್ತದೆ. ಆದ್ದರಿಂದ ಸಂಘದೊಡನೆ ವಿಹಾರ ಮಾಡುವುದರಿಂದ ಯಾವ ಬಾಧೆಯೂ ಆಗುವುದಿಲ್ಲ. ಮುನಿಗಳ ಪ್ರವೃತ್ತಿ ಶ್ರಾವಕರ ಆದೀನವಿರುವುದಿಲ್ಲ. ಶ್ರಾವಕರು ತಮ್ಮ ಇಚ್ಛಾನುಸಾರ ಸೇವಕರಂತೆ ಸಂಘ ವ್ಯವಸ್ಥೆ ಮಾಡುತ್ತಾರೆ. ಶ್ರಾವಕರು ಸಂಘ ಸಂಚಾಲನೆಯಿಂದ ಕೃತಾರ್ಥರಾಗುತ್ತಾರೆ. ಮುನಿ ಸಂಘದ ಸೇವೆ ಮಾಡುವವರ ಸೇವೆಯನ್ನು ಮೂರು ಲೋಕವೇ ಮಾಡುತ್ತದೆ. ಅಂತಹ ಮಹಾನ್ ಪುಣ್ಯ ಬಂಧವಾಗುತ್ತದೆ.

ತೀರ್ಥ ಯಾತ್ರಾ ಸಂಘ

ಚತುಃಸಂಘದ ನಿರ್ಮಾಣ ನವೀನ ಪದ್ಧತಿಯೇನೂ ಅಲ್ಲ. ಶಾಸ್ತ್ರದಲ್ಲಿ ಚತುಃಸಂಘದ ನಿರ್ಮಾಣ ಅಲ್ಲಲ್ಲಿ ಸಿಗುತ್ತದೆ. ಪಾರ್ಶ್ವನಾಥ ಚರಿತ್ರೆಯಲ್ಲಿ ಸಂಘ ವ್ಯವಸ್ಥೆಯ ಉಲ್ಲೇಖವಿದೆ. ಅರವಿಂದ ರಾಜ ರಾಜ್ಯ ತ್ಯಜಿಸಿ ಮುನಿಪದ ಧಾರಣೆ ಮಾಡಿ ಅನೇಕ ಶ್ರೀಮಂತ ಯಾತ್ರಾರ್ಥಿಗಳ ಸಂಘದೊಡನೆ ಸಮ್ಮೇದಶಿಖರ ದರ್ಶನಾರ್ಥ ಹೋಗಿದ್ದ.

ಇಂದಿನ ಕಾಲದಲ್ಲಿ ನೈತಿಕತೆ ಶಿಥಿಲಗೊಳ್ಳುತ್ತಿದೆ. ಜನಗಳು ಆತ್ಮ ಶೋಧನೆಯನ್ನು ತೊರೆದು ಶರೀರ ಪೋಷಣೆಗೆ ಕೈಹಾಕಿದ್ದಾರೆ. ಆ ಸ್ಥಿತಿಯಲ್ಲಿ ಒಂದು ವಿಶಾಲ ಸಂಘವನ್ನು ಒರ್ವ ವ್ಯಕ್ತಿಯೇ ತೀರ್ಥಯಾತ್ರಾ ನಿಮಿತ್ತ ತೆಗೆದುಕೊಂಡು ಹೋಗುವುದು ಬಹಳ ಆಶ್ಚರ್ಯಕರ ಸಂಗತಿ. ಸಂಘದ ಸಂಚಾಲಕ ಗೇಂದನ್‌ಮಲ್‌ಜಿ ಜಿನಧರ್ಮದಲ್ಲಿ ಕಟ್ಟಾ ಶ್ರದ್ಧಾಳು ಮತ್ತು ಪರಮ ಮುನಿಚರಣಭಕ್ತ. ದೇವ ಪೂಜಾದಿ ಷಟ್ಕರ್ಮಾಚರಣೆಯಲ್ಲಿ ಸದಾ ನಿಷ್ಠೆ ಇಟ್ಟುಕೊಂಡಿದ್ದರು. ಆದ್ದರಿಂದ ಅವರ ಐಶ್ವರ್ಯ ದಿನೆ ದಿನೇ ಬೆಳೆಯತೊಡಗಿತ್ತು. ಲಕ್ಷ್ಮಿ (ಹಣ) ತನ್ನನ್ನು ತಿಜೋರಿಯಲ್ಲಿ ಬಂಧಿಸಿಡುವ ಕೃಪಣನ ದಾಸಿಯಲ್ಲ. ದಾನಧರ್ಮ ಪರೋಪಕಾರಗಳಲ್ಲಿ ಮುಕ್ತಹಸ್ತವುಳ್ಳ ಮತ್ತು ಸದಾಚಾರ ಸಂಪನ್ನ ವ್ಯಕ್ತಿಯ ದಾಸಿ. ಐಶ್ವರ್ಯಸಂಪನ್ನರಾದ ಕೃಪಣರು, ಒಂದು ಚಿಕ್ಕಾಸನ್ನೂ ದಾನಧರ್ಮಾದಿಗಳಲ್ಲಿ ಉಪಯೋಗಿಸದ ಮೂರ್ಖರು. ಪೂರ್ವದಲ್ಲಿ ಗಳಿಸಿದ ಪುಣ್ಯ ಫಲವನ್ನು ಸಂಪೂರ್ಣ ನೆಕ್ಕಿ ತಿಂದು ಹಾಕಿಬಿಡುತ್ತಾರೆ. ಅಂತಹ ಹೀನ ಮಾನವರು ಪುನರ್ಜನ್ಮದಲ್ಲಿ ದರಿದ್ರರೂ, ದುಃಖಿಗಳೂ ಹೀನಕುಲೋತ್ಪನ್ನರೂ ಆಗಿ ಹುಟ್ಟಿ ಮಹಾದುಃಖವನ್ನು ಭೋಗಿಸುತ್ತಾರೆ. ಗೇಂದನ್‌ಮಲ್‌ರಂತಹ ಪುಣ್ಯ ಪುರುಷರು ಪುಣ್ಯದ ಫಲವನ್ನು ಇಲ್ಲಿಯೂ ಭೋಗಿಸುತ್ತಾರೆ. ಮತ್ತು ಸುಪಾತ್ರದಾನದ ಫಲದಿಂದ ಮುಂದೆಯೂ ಭೋಗಿಸುತ್ತಾರೆ. ಇಂತಹ ಮಹಾನ್

ಚಾರಿತ್ರಧಾರಿ ವ್ಯಕ್ತಿಯ ಸೇವಾಭಾಗ್ಯ ವಿಷ್ಟು ಜನ್ಮದಲ್ಲಿ ಸಿಕ್ಕೀತೆಂದು ಚಿಂತಿಸುತ್ತಿದ್ದರು. ಸಂಘದ ವಿಹಾರ ಹೊರಡುತ್ತಲೇ ಪೆಟ್ಟಿಗೆಯಲ್ಲಿ ನೋಟಿನ ಕಂತೆಗಳನ್ನು ಇಟ್ಟು ವ್ಯವಸ್ಥಾಪಕ ಶ್ರಾವಕರ ಕೈಗೆ ಇಟ್ಟರು ನೋಟುಗಳನ್ನು ಎಣಿಸುತ್ತಿರಲೂ ಇಲ್ಲ, ಬಿಲ್ಲುಗಳನ್ನು ಕೇಳುತ್ತಿರಲೂ ಇಲ್ಲ. ಅವರು ಅಷ್ಟು ನಿಸ್ಪೃಹರಾಗಿದ್ದರು. ಅಂತಹ ಪುಣ್ಯ ಮೂರ್ತಿಯೊಬ್ಬರು ಸಂಘದ ಪ್ರಮುಖ ಸೇವಕರಾಗಿದ್ದರು. ಜನಗಳು ಅವರನ್ನು ಸಂಘಪತಿ ಎಂದು ಕರೆಯುತ್ತಿದ್ದರು. ಆದರೆ ಅವರು ತಮ್ಮನ್ನು ಸಂಘದ ಸೇವಕರೆಂದೇ ತಿಳಿಯುತ್ತಿದ್ದರು.

ಚಾತುರ್ಮಾಸ ಮುಗಿಯುತ್ತಿದ್ದಂತೆಯೇ ಸಂಘವು ಬಹಳ ಉತ್ಸಾಹದಿಂದ ಪಂಚ ಪರಮೇಷ್ಠಿಗಳ ಧ್ಯಾನ ಮಾಡುತ್ತಾ ಪ್ರಸ್ಥಾನ ಮಾಡಿತು. ಸಂಘ ವಿಹಾರ ನೋಡಲು ಜನ ದೂರದೂರದಿಂದ ಬರುತ್ತಿದ್ದರು. ಭಕ್ತರ ಜಯಘೋಷ ಕೋಲಾಹಲದೊಡನೆ ಶುಭ ಮುಹೂರ್ತದಲ್ಲಿ ಚತುಃಸಂಘದ ಯಾತ್ರ ವಿಹಾರ ಕರ್ಮಶತ್ರುವನ್ನು ಗೆಲ್ಲುವ ದಂಡಯಾತ್ರೆಯಂತೆ ಹೊರಟಿತು. ಪೂಜ್ಯಶ್ರೀಯವರು ಅಕಾರಣ ಬಂಧುವಾಗಿದ್ದರು. ಆ ಪುಣ್ಯ ಮೂರ್ತಿಯ ದರ್ಶನ ಮತ್ತೆ ಇನ್ನೆಂದೋ ಎಂದು ಜನ ವಿಷಾದದ ನಿಟ್ಟುಸಿರು ಬಿಡುತ್ತಿದ್ದರು. ಆತ್ಮೀಯ ಬಂಧುಗಳನ್ನೇ ಅಗಲಿದಂತೆ ಮನಸ್ಸು ಛಡಪಡಿಸತೊಡಗಿತು. ಎಲ್ಲರ ಮುಖಗಳು ಮ್ಲಾನವಾದವು. ಆ ಮಹಾಪುರುಷನ ವಿಜಯಯಾತ್ರೆ ನಿರ್ವಿಘ್ನವಾಗಿ ನಡೆದು ಬೇಗನೇ ದಕ್ಷಿಣದತ್ತ ಅವರ ವಿಹಾರ ಆಗಲಿ ಎಂದು ಹರಕೆ ಹೊತ್ತು ಹಿಂದಕ್ಕೆ ಹೋದರು.

ವೃದ್ಧ ಪಂಡಿತನ ವಿಚಿತ್ರ ಸಲಹೆ

ಒಬ್ಬ ವೃದ್ಧ ಪಂಡಿತ ಆಚಾರ್ಯಶ್ರೀಯವರ ಸನ್ನಿದಿಗೆ ಬಂದು ವಂದಿಸಿ ಕುಳಿತ. ಅವನ ಮುಖದಲ್ಲಿ ಅವ್ಯಕ್ತ ಭೀತಿಯೊಂದು ಕಾಣುತ್ತಿತ್ತು, ಬಹಳ ಭಯ ಆತಂಕದಿಂದ ಮನಸ್ಸು ಚಂಚಲವಾಗಿತ್ತು, ಕಣ್ಣುಗಳಲ್ಲಿ ಕಾತುರತೆ ತುಂಬಿತ್ತು, ಏನನ್ನೋ ಹೇಳಲು ತವಕಪಡುತ್ತಿದ್ದ ಆ ವೃದ್ಧ ಪಂಡಿತ. ಅವನ ಭಾವವನ್ನು ಅರಿತ ಪೂಜ್ಯಶ್ರೀಯವರು ಅವನತ್ತ ತಮ್ಮ ದೃಷ್ಟಿ ಹರಿಸಿದರು. ಆಗ ಅವನು ಪೂಜ್ಯಶ್ರೀಯವರಲ್ಲಿ ವಿನಮ್ರವಾಗಿ ವಿನಂತಿಸಿದ.

"ಮಹಾರಾಜ್ ! ಉತ್ತರದ ಜನತೆ ಬಹಳ ವಕ್ರ ಪ್ರಕೃತಿಯವರು. ಅತ್ತ ಎಂದೂ ದಿಗಂಬರ ಯತಿಗಳ ವಿಹಾರ ಆಗಿರುವುದನ್ನು ನಾವು ನಮ್ಮ ಜೀವನ ಕಾಲದಲ್ಲಿಯೇ

ನೋಡಿಲ್ಲ. ಈಗ ನಿಮ್ಮ ಸಂಘ ಹೋಗುತ್ತಿದೆ. ಕಿಡಿಗೇಡಿಗಳು ಸಂಘಕ್ಕೆ ವಿಘ್ನ ಮಾಡಬಹುದು. ಉಪಸರ್ಗ ಮಾಡಬಹುದು. ಆದ್ದರಿಂದ ನೀವು ಮೊದಲೇ ಯಾವ ದಾದರೂ ದೇವತೆಯ ಸಿದ್ಧಿಯನ್ನು ಮಾಡಿಕೊಂಡು ಹೋಗುವುದು ಉಚಿತವಾದೀತು. ಅದರಿಂದ ಯಾವ ದೋಷವೂ ಇಲ್ಲ."

ಮಹರಾಜರು: "ಆಗಮ ವಿರುದ್ಧ ನೀವು ಕೊಡುತ್ತಿರುವ ಸಲಹೆಯಿಂದ ನಿಮ್ಮ ಮಿಥ್ಯಾತ್ವವಿನ್ನೂ ಹೋಗಿಲ್ಲ ಎಂದು ತಿಳಿಯಿತು."

ಪಂಡಿತ: "ಮಹಾರಾಜ್! ನಿಮ್ಮ ಭಾವನೆ ನನಗೆ ಸ್ಪಷ್ಟವಾಗಲಿಲ್ಲ ಸ್ಪಷ್ಟಪಡಿಸಬೇಕಾಗಿ ಪ್ರಾರ್ಥನೆ."

ಮಹಾರಾಜರು: "ವ್ರತಿ, ಅವ್ರತಿಗೆ ನಮಸ್ಕಾರ ಮಾಡಬಹುದೇ?"

ಪಂಡಿತ: "ಇಲ್ಲ ಮಹರಾಜ್! ವ್ರತಿಕರು ಅವ್ರತಿಗೆ ನಮಸ್ಕಾರ ಮಾಡಲು ಬರುವುದಿಲ್ಲ."

ಮಹಾರಾಜರು: "ವಿದ್ಯೆ ಅಥವ ದೇವತೆಯನ್ನು ಸಿದ್ಧಿ ಮಾಡಿಕೊಳ್ಳಲು ನಮಸ್ಕಾರ ಮಾಡಬೇಕಾಗುತ್ತದೆ. ದೇವತೆ ಅವ್ರತಿ. ಆಗ ಅವ್ರತಿ ದೇವತೆಗೆ ನಮಸ್ಕಾರ ಮಾಡುವುದರಿಂದ ಮಹಾವ್ರತಿಗೆ ದೋಷ ಬರುವುದಿಲ್ಲವೇನು?"

ಈ ಶಾಸ್ತ್ರೋಕ್ತ ವಚನದಿಂದ ಪಂಡಿತನ ಬಾಯಿ ಮುಚ್ಚಿತು. ಅವನ ಕಣ್ಣು ತೆರೆಯಿತು. ಅವನ ಆತಂಕವನ್ನು ಗಮನಿಸಿ ಮತ್ತೆ ಸಮಾಧಾನ ಹೇಳತೊಡಗಿದರು.

"ಹೆದರುವಂತಹ ಮಾತೇನಿದೆ?. ಪಂಚ ಪರಮೇಷ್ಠಿಗಳಲ್ಲಿ ನಮಗೆ ನಿಷ್ಠೆ ಇದೆ, ಅವರ ಪ್ರಸಾದದಿಂದ ವಿಘ್ನಗಳು ಬರುವುದಿಲ್ಲ. ಒಂದು ವೇಳೆ ಪಾಪ ಕರ್ಮದಿಂದ ವಿಘ್ನಗಳು ಬಂದರೆ ಅವುಗಳನ್ನು ಸಹನೆ ಮಾಡಲು ಸಿದ್ಧರಿದ್ದೇವೆ" ಅಸಂದಿಗ್ಧ ಮಾತುಗಳಿಂದ ಪಂಡಿತನ ಮೌಢ್ಯ ಜಾರಿಹೋಗಿತ್ತು, ಅವನು ಭಕ್ತಿಯಿಂದ ಕಂಪಿಸುವ ಕೈಗಳನ್ನು ಅವರ ಚರಣಗಳಿಗೆ ಹಿಡಿದು ಭಾವೋದ್ವೇಗದಿಂದ ಹೇಳತೊಡಗಿದ.

ಪ್ರಭೋ! ಬಹಳ ಒಳ್ಳೇಯದು! ನಿಮ್ಮ ವಿಹಾರದಿಂದ ಉತ್ತರ ಭಾರತದಲ್ಲಿ ಧರ್ಮ ಗಂಗೆ ಧುಮುಧುಮಿಸಿ ಹರಿದು ಧರ್ಮ ತೀರ್ಥದ ಉದ್ಧವವಾಗಲಿ. ಜಿನೇಂದ್ರ ದೇವನ ಪ್ರಸಾದದಿಂದ [illegible] [illegible] [illegible]ವಾಗಿ ನಡೆಯಲಿ."

ಉತ್ತರದತ್ತ ಮಂಗಳ ಪ್ರಸ್ಥಾನ

ಓಂ ನಮಃ ಸಿದ್ಧೇಭ್ಯಃ ಎಂದು ಉಚ್ಚರಿಸುತ್ತಾ ಸನ್ ೧೯೨೮ರ ಮಾರ್ಗಶಿರ ಕೃಷ್ಣ ಪ್ರತಿಪದೆಯಲ್ಲಿ ಸಿದ್ಧಪರಿಮೇಷ್ಠಿಗಳನ್ನು ಸ್ಮರಿಸುತ್ತಾ ಪರಮಪೂಜ್ಯ, ಪ್ರಾತಃ ಸ್ಮರಣೀಯ ಮುಕ್ತಿ ಮಾರ್ಗ ಪಿತಾಮಹ ಆಚಾರ್ಯಶ್ರೀ ಶಾಂತಿಸಾಗರ ಮಹಾಮುನಿ ಸಮ್ಮೇದ ಶಿಖರದತ್ತ ತಮ್ಮ ಪವಿತ್ರ ಹೆಜ್ಜೆ ಮುಂದಿಟ್ಟರು. ವಿಶಾಲ ಸಂಘವು ಆಚಾರ್ಯಶ್ರೀಯವರ ಜಯಘೋಷದೊಡನೆ ಮಹಾಪ್ರವಾಹದೋಪಾದಿಯಲ್ಲಿ ಮುನ್ನಡೆಯಿತು. ಇಕ್ಕೆಲದಲ್ಲಿ ಸೇರಿದ್ದ ಭಾರೀ ಜನಸ್ತೋಮ ಸುಮ್ಮಾನದಿಂದ ಬೀಳ್ಕೊಟ್ಟಿತು. ಪವಿತ್ರ ಪರ್ವತ ಸಮ್ಮೇದ ಶಿಖರ ಅವರ ಕಣ್ಣಲ್ಲಿ ಕೀಲಿಸಿ ನಿಂತಿತ್ತು, ಆ ಸಂಘದಲ್ಲಿ ಸುಮಾರು ಇನ್ನೂರು ಜನ ಸಮಾವೇಶವಾಗಿದ್ದರು. ಆ ಸಂಘದಲ್ಲಿ ನೇಮಿಸಾಗರ, ವೀರಸಾಗರ, ಅನಂತಕೀರ್ತಿ ಮುನಿಗಳು, ಪಾಯಸಾಗರರಾದಿ ಮೂವರು ಐಲಕರೂ ಮೂವರು ಕ್ಷುಲಕರೂ ಕ್ಷುಲ್ಲಕಿಯರಾದ ಶಾಂತಿಮತಿ, ಚಂದ್ರಮತಿ, ಅನಂತಮತಿ, ಒಬ್ಬ ಬ್ರಹ್ಮಚಾರಿಣಿ ಮತ್ತು ಬ್ರಹ್ಮಚಾರಿಗಳಾದ ದಾದಾಗೊಂಡ ಸಾಂಗಲೀವಾಲಾ, ಅಣ್ಣಪ್ಪ ಲಿಗಾಡೆ, ವೈಸಾಲ್ ಕರ್, ಪಾರಿಸಪ್ಪ ಘೋದೆ, ಪಾಯಸಾಗರ ಉಗಾರ್ಕರ್, ದೇವಪ್ಪ, ಹಜಾರಿಲಾಲ್, ಹಾಗೂ ವೈದ್ಯನಂದಲಾಲ್ ಸೇರಿದ್ದರು. ಪಂಡಿತ ನಂದಲಾಲ್ ಶರೀರದ ವಾತಪಿತ್ತ ಕಫಕ್ಕೆ ಔಷಧಿ ಕೊಡುವ ವೈದ್ಯರಾಗಿದ್ದರು. ಸ್ವಲ್ಪ ಕಾಲಾನಂತರ ಆತ್ಮನ ಹುಟ್ಟು ಸಾವುಗಳ ಚಿರರೋಗಕ್ಕೆ ರತ್ನತ್ರಯ ರೂಪಿ ದಿವ್ಯೌಷದ ಕೊಡುವ ಆಧ್ಯಾತ್ಮ ವೈದ್ಯ ಆಚಾರ್ಯ ಸುಧರ್ಮ ಸಾಗರರಾದರು. ಪಂ.ಉತ್ಪಲ್ ರಾಯ್ ಕೀರ್ತನಕಾರ ಜಿನಗೊಂಡ ಪಾಟೀಲ್ ಮಂಗೂರ್ ಕರ್, ಶ್ರೀ ಗಂಗಾರಾಮ್ ಅರವಾಡೆ. ಕೊಲ್ಲಾಪುರ, ಪಂ.ಪತೇಚಂದ್ ನಾಗಪುರ ಇವರು ಇನ್ನಿತರೆ ಮಹಾನೀಯರಾಗಿದ್ದಾರು.

ಅಪೂರ್ವ ಆನಂದ ಮತ್ತು ಶುಭೋಪಯೋಗ ಪ್ರವೃತಿ

ಸಂಘದಲ್ಲಿರುವವರಿಗೆ ಅಪೂರ್ವ ಆನಂದದ ಅನುಭವ ಆಗುತ್ತಿತ್ತು. ಅವರು ಹೇಳುತ್ತಿದ್ದರು- "ಇಂತಹ ಭಾವಶುದ್ಧಿ, ಸಾತ್ವಿಕಶಾಂತಿ ಜೀವನದಲ್ಲೆಂದೂ ಕಂಡರಿಯೆವು. ಆಚಾರ್ಯ ಶ್ರೀಯವರ ಸಂಘದಲ್ಲಿ ಇಂತಹ ಪುಣ್ಯಯೋಗ ಸಿಕ್ಕಿದೆ! ಆರ್ತಧ್ಯಾನ ರೌದ್ರಧ್ಯಾನದ ಸುಳಿವೇ ಆ ಸಂಘದಲ್ಲಿ ಇರಲಿಲ್ಲ. ದಿನದಿಂದ ದಿನಕ್ಕೆ ವಿಹಾರ ಮುಂದೆ ಮುಂದೆ ಹೋಗುತ್ತಿತ್ತು.

ಮನೋಜ್ಞ ಜಿನಬಿಂಬ ಸ್ವರ್ಣ ಮತ್ತು ರಜತ ನಿರ್ಮಿತ ನಯನ ಮನೋಹರ ಸಮವಸ[illegible]ವುಗಳ ದರ್ಶನಕ್ಕೆ ಹೋದ ಹೋದೆಡೆಯಲ್ಲೆಲ್ಲಾ ನೂಕು[illegible]ಾಗುತ್ತಿತ್ತು. ಸಾವಿರಾರು ಜೈನೇತರರೂ ಪೂಜ್ಯಶ್ರೀಯವರ ದರ್ಶನವನ್ನು ಶ್ರದ್ಧೆ ಭಕ್ತಿಯಿಂದ ಮಾಡುತ್ತಿದ್ದರು. ಇವರು ನಾಗ ಬಾಬಾ ಪರಮಹಂಸರು. ಪೂರ್ವದ ಪುಣ್ಯವಿಲ್ಲದೆ ಇಂತಹ ಮಹಾಪುರುಷನ ದರ್ಶನ ಆಗುವುದಿಲ್ಲ ಎಂದು ಒಬ್ಬರಿಗೊಬ್ಬರು ಹೇಳುತ್ತಿದ್ದರು. ಸಂಜೆ ಸಂಘದ ವಾಸ್ತವ್ಯ ಎಲ್ಲಿ ಆಗುತ್ತಿತ್ತೋ ಅಲ್ಲಿಗೆ ಸುತ್ತಮುತ್ತಲ ಊರಿನ ಜನಗಳು ತಂಡೋಪತಂಡವಾಗಿ ಬಂದು ದರ್ಶನ ಪಡೆದು ಹೋಗುತ್ತಿದ್ದರು. ಇದರಿಂದ ಕಾಡೂ ಮಂಗಳಧಾಮವಾಗುತ್ತಿತ್ತು.

ಎಲ್ಲಿ ಸೂರ್ಯಾಸ್ತವಾಗುವುದೋ ಅಲ್ಲಿ ಮಹಾವ್ರತಧಾರಿ ಮುನಿ ನಿಂತು ಬಿಡುತ್ತಾರೆ. ಅವರು ತಮ್ಮ ಕುಟೀರದಲ್ಲಿ ಕುಳಿತು ಧ್ಯಾನ ಮಗ್ನರಾಗುತ್ತಾರೆ. ಸುಪ್ರಭಾತವಾಗುತ್ತಲೇ ಸಂಘದ ವಿಹಾರ ನಡೆಯುತ್ತದೆ. ಸುಮಾರು ಎಳೆಂಟು ಮೈಲಿ ದೂರದಲ್ಲಿ ನಿಲ್ಲುತ್ತಿದ್ದರು. ಶ್ರಾವಕರು ಮೊದಲೇ ಕಾರ್ ಮೋಟಾರ್ ವಾಹನಗಳಲ್ಲಿ ಆ ಸ್ಥಳ ಮುಟ್ಟಿ ಆಹಾರದ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಭಾಗ್ಯವಂತ ಶ್ರಾವಕರು ಆಹಾರ ದಾನ ಮಾಡುತ್ತಿದ್ದರು.

ಆಗಮೋಕ್ತ ಪ್ರವೃತಿ

ಸಾಧುಗಳು ಈರ್ಯಾಪಥ ಶುದ್ಧಿಯಿಂದ ನಡೆಯಬೇಕು. ಈ ವ್ರತ ಶುದ್ಧಿಗಾಗಿ ಅವರು ನಿಧಾನವಾಗಿ ನಡೆಯಬೇಕೆಂಬುದು ಕೆಲವರ ಭಾವನೆ. ಆ ಬಗ್ಗೆ ನಾನು ಅವರಲ್ಲಿ ಒಂದು ಪ್ರಶ್ನೆ ಹಾಕಿದ.

"ಮಹರಾಜ್ ! ವೇಗವಾಗಿ ನಡೆಯುವುದರಿಂದ ಸಾಧುಗಳಿಗೆ ದೋಷವೇನಾದರೂ ಬರುವುದೇ ?"

ಅವರು:-"ಯತ್ನಾಚಾರ ಪೂರ್ವಕ ನಡೆಯುವುದರಿಂದ ಮಾತ್ರ ದೋಷವಿಲ್ಲ"

ನಿಧಾನವಾಗಿ ಅಥವಾ ವೇಗವಾಗಿ ನಡೆಯುವುದು ಮುಖ್ಯವಲ್ಲ. ಜೀವಘಾತವಾಗದಂತೆ ಈರ್ಯಾಪಥ ಶುದ್ಧಿಯಿಂದ ನಡೆಯುವುದು ಮುಖ್ಯ. ಇದು ಆಗಮದ ಆಜ್ಞೆ. ಆಗಮದ ಆಜ್ಞೆಯನ್ನು ಅವರು ತಿಲ ಮಾತ್ರವೂ ಉಲ್ಲಂಘಿಸುತ್ತಿರಲಿಲ್ಲ. ಸನ್ ೧೯೪೭ರಲ್ಲಿ ಪೂಜ್ಯಶ್ರೀಯವರು ಸೋಲಾಪುರದಲ್ಲಿ ಚಾತುರ್ಮಾಸ ಮಾಡುತ್ತಿದ್ದರು. ಆಗ ಕೆಲವು ಪಂಡಿತರು ಕುತರ್ಕ ಮಾಡುತ್ತಿದ್ದರು.

ಆ ಬಗ್ಗೆ ನಂತರ ಅವರ ಗಮನ ಸೆಳೆದೆ. ಆಗ ಅವರು ಹೀಗೆಂದರು. "ಮೂಲಗುಣಗಳನ್ನು ನಿರ್ದೋಷವಾಗಿ ಪಾಲಿಸುವುದು ನಮ್ಮ ಕರ್ತವ್ಯವಾಗಿದೆ. ಉತ್ತರ ಗುಣಗಳ ಪೂರ್ಣತೆ ಒಂದೇ ಬಾರಿಗೆ ಆಗುವುದಿಲ್ಲ. ಪುಲಾಕ ಮುನಿಗೂ ಅಕಸ್ಮಾತ್ ಮೂಲಗುಣಗಳ ಕ್ವಚಿತ್ ವಿರಾಧನೆ ಆಗುತ್ತದೆ" ಉತ್ತರ ಕೇಳಿ ಆಶ್ಚರ್ಯಗೊಂಡೆ. ಯಾರೋ ಅವಿವೇಕಿಗಳು ವರ್ತಮಾನ ಮುನಿಗಳ ಇತಿಮಿತಿ ತಿಳಿಯದೆ ಮಾತಾಡುತ್ತಿದ್ದರು.

ಅತ್ಯಂತ ವ್ಯಸನಿ ದುರಾಚಾರಿ ದುಷ್ಟವ್ಯಕ್ತಿಗಳಲ್ಲಿ ಬೇಕಾದರೆ ವಾತ್ಸಲ್ಯ ಹುಟ್ಟೀತು. ಈ ಭೀಷಣ ಕಾಲದಲ್ಲಿ ಅಸಿಧಾರಾವ್ರತಧಾರಿ ವೀತರಾಗಿ ಮುನಿಗಳಲ್ಲಿ ಜನಗಳಿಗೆ ಆತ್ಮೀಯಭಾವ ಹುಟ್ಟದು. ಕೆಟ್ಟ ದೃಷ್ಟಿಯಿಂದಲೇ ಅವರತ್ತ ನೋಡುತ್ತಾರೆ. ಇದೆಂತಹ ಕೆಟ್ಟಕಾಲ ! ಇಂದಿನ ವೈಜ್ಞಾನಿಕ ಕಾಲದಲ್ಲಿ ವಿದ್ಯಾವಂತರಲ್ಲಿ ಕಂಡುಬರುವ ವಿಚಾರ ಹೀನತೆಯ ಕಡೆಗೇ ಬಹಳ ಜನ ಹೊರಳಿ ಹೋಗುತ್ತಾರೆ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅವರಲ್ಲಿ ಒಂದು ಪ್ರಶ್ನೆ ಹಾಕಿದೆ.

"ಶಿಥಿಲಾಚಾರಿ ಸಾಧುವಿನ ಬಗ್ಗೆ ಹೇಗೆ ವ್ಯವರಿಸಬೇಕು ?"

ಅವರು: "ಅಂತಹ ಸಾಧುವಿಗೆ ಏಕಾಂತದಲ್ಲಿ ತಿಳಿ ಹೇಳಬೇಕು. ಅಂತವರ ಸ್ಥಿತೀಕರಣ ಮಾಡಬೇಕು."

ನಾನು: ತಿಳಿ ಹೇಳಿದ ಮೇಲೂ ಅವರ ಪ್ರವೃತಿ ಬದಲಾಗದಿದ್ದರೆ ಆಗ ನಮ್ಮ ಕರ್ತವ್ಯವೇನು ? ಪತ್ರಿಕೆಗಳಲ್ಲಿ ಅವರ ಬಗ್ಗೆ ಪ್ರಕಟಿಸಬಹುದೇ ?

ಅವರು: ತಿಳಿ ಹೇಳಿದ ಮೇಲೂ ಕೆಲಸವಾಗದಿದ್ದರೆ. ಉಪೇಕ್ಷೆ ಮಾಡಿಬಿಡಿ. ಆಗ ಉಪಗೂಹನಾಂಗದ ಪಾಲನೆ ಮಾಡಿ. ಪತ್ರಿಕೆಗಳಲ್ಲಿ ಪ್ರಕಟಿಸಬಾರದು. ಹಾಗೆ ಮಾಡುವುದರಿಂದ ಅನ್ಯ ಸಾಧರ್ಮಿ ಸಾಧುಗಳಿಗೆ ಅಜ್ಞಾನಿ ಜೀವಿಗಳಿಂದ ಭಾಧೆ ಉಂಟಾಗುತ್ತದೆ" ಅವರು ಇದನ್ನೂ ಹೇಳಿದರು.

"ಮುನಿ ಅತ್ಯಂತ ನಿರಪರಾಧಿ ಪ್ರಾಣಿ. ಮುನಿಯ ವಿರುದ್ಧ ದೋಷಾರೋಪಣೆಯಿಂದ ಭಯಂಕರ ದುಷ್ಪರಿಣಾಮ ಉಂಟಾಗುತ್ತದೆ. ಶ್ರೇಣಿಕನಿಗೆ ನರಕಾಯುವಿಗೆ ಕಾರಣ ನಿರಪರಾಧಿ ಮುನಿಯ ಹೆಗಲ ಮೇಲೆ ಸತ್ತ ಹಾವನ್ನು ಹಾಕಿದ್ದು. ಸಮ್ಯಗ್ದೃಷ್ಟಿ ಪುರುಷನು ವಿವೇಕ ಪೂರ್ಣನಾಗಿ ಸ್ಥಿತೀಕರಣ ಉಪಗೂಹನ ವಾತ್ಸಲ್ಯಾಂಗ ಪಾಲಿಸತಕ್ಕದ್ದು. ಪತ್ರಿಕೆಗಳಲ್ಲಿ ಪ್ರಕಟಿಸಬಾರದು."

ಆಚಾರ್ಯಶ್ರೀಯವರ ಈ ಮಾರ್ಗಸೂಚಿ ಇಂದಿನ ದರ್ಶನ ಭ್ರಷ್ಟ ಕಾಲದಲ್ಲಿ ಅನುಕರಣೀಯವಾಗಿದೆ. ದುರ್ಗತಿಗಾಮಿ ಜೀವ ನಿರ್ನಿಮಿತ್ತವಾಗಿ ಸಾಧುಗಳ ಮಾರ್ಗದ [illegible]ನನ್ನೊಡ್ಡುತ್ತದೆ. ಪಾಪ ಪ್ರಚುರತೆಯು ಈ ಕಾಲದಲ್ಲಿ ಜೀವಿಗಳು ದೋಷ[illegible]ಗಳಾಗಿವೆ. ಮುನಿಪದ ಜೀವಾತ್ಮನನ್ನು ಪರಮಾತ್ಮನನ್ನಾಗಿ ಮಾಡಬಲ್ಲ ಉನ್ನತ ಪದ. ಜೀವಿಗಳು ಏನನ್ನಾದರೂ ಸಾಧಿಸಿಯಾರು. ಆದರೆ ಮುನಿಪದ ಸಾಧಿಸುವುದು ದುಃಸಾಧ್ಯ. ಇಂತಹ ತ್ರಿಜಗವಂದ್ಯ ಮುನಿಪದಕ್ಕೆ ದ್ವಾದಶಾಂಗ ಶ್ರುತಜ್ಞಾನಿಯಾದ ಸೌಧರ್ಮೇಂದ್ರನೂ ನತಮಸ್ತಕನಾಗುತ್ತಾನೆ. ಸೇವಕನಾಗುತ್ತಾನೆ. ಅಂತಹ ಶ್ರೇಷ್ಠ ಮುನಿಪದ ಧಾರಣೆಮಾಡುವುದು ಸಾಮಾನ್ಯ ಮಾತಲ್ಲ. ಅಂತಹ ತ್ರಿಲೋಕ ಪೂಜ್ಯ ಮುನಿಪದವನ್ನು ಗೌರವಿಸುವ ಬದಲು ತಿರಸ್ಕರಿಸಿದರೆ, ವಂದಿಸುವ ಬದಲು ನಿಂದಿಸಿದರೆ, ಸತ್ಕರಿಸುವ ಬದಲು ಧಿಕ್ಕರಿಸಿದರೆ, ಅಯ್ಯಯ್ಯೋ.....ಅಂತಹ ಜೀವಗಳ ಪಾಪ ಅನಂತ ಕಾಲ ಕಳೆದರೂ ತೀರಲಾರದು ! ಮುನಿಗಳನ್ನು ನಿಂದಿಸಿದ, ಧಿಕ್ಕರಿಸಿದ, ಅಪಮಾನಗೈದ, ಉಗ್ರತಾಪಕ್ಕೊಳಪಡಿಸಿದ ಜೀವಗಳ ದುರಂತ ದುಃಖದ ಜೀವನ ಚಕ್ರದ ಕಥೆಗಳು ಜೈನಪುರಾಣದಲ್ಲಿ ಎಷ್ಟೋ ಇವೆ. ಆ ಕಥೆಗಳನ್ನು ಓದಿದರೂ, ಕೇಳಿದರೂ, ಮೈ ನಡುಕ ಹುಟ್ಟದಿರದು. ಬಹುದೊಡ್ಡ ಸಮುದ್ರದಂತೆ ಭೋರ್ಗರೆದು ಹರಿಯುವ ಜಿನವಾಣಿಯ ಒಂದು ಬಿಂದುವಿನಷ್ಟೂ ಜ್ಞಾನವಿಲ್ಲದ ಎಷ್ಟೋ ಅಹಂಕಾರಿ ವಿಧ್ವಾಂಸರು ಜಿನವಾಣಿಗೆ ತಮ್ಮದೇ ಆದ ಕಲ್ಪಿತ ವ್ಯಾಖ್ಯಾನ ಕೊಡುತ್ತಾ ಆಧುನಿಕ ಪೊಳ್ಳು ಜೀವನದ ದೃಷ್ಟಿಯಿಂದ ಅದನ್ನು ಅಳೆಯುತ್ತಾರೆ. ಆಧುನಿಕ ಕಾಲಕ್ಕೆ ತಕ್ಕಂತೆ ಮಾರ್ಪಾಡಾಗಬೇಕೆಂದು ವಾದಿಸುತ್ತಾರೆ. ಮುನಿಗಳು ನವನಾಗರೀಕ ಕಾಲದಲ್ಲಿ ವಿಹರಿಸಬಾರದು; ಕನಿಷ್ಠ ಒಂದು ಲಂಗೋಟಿಯನ್ನಾದರೂ ಹಾಕಿಕೊಳ್ಳದೆ ನಗ್ನವಾಗಿ ಪಶುಗಳಂತೆ ತಿರುಗಾಡಬಾರದು ಎಂದು ವಾದಿಸುತ್ತಾರೆ. ಮುನಿಗಳ ಚರ್ಯೆಗೂ ಕೈ ಹಾಕಿ ಅವರ ಆಚಾರ ವಿಚಾರಗಳನ್ನೂ ಸರಿಪಡಿಸುವ ಮಟ್ಟಕ್ಕೆ ಹೋಗುತ್ತಾರೆ. ಗೃಹಸ್ಥರ ಆದೇಶಾನುಸಾರ ಮುನಿಗಳ ವಿಹಾರ ನಡೆಯಬೇಕೆನ್ನುವಷ್ಟು ಸಂಘ ನಿಯಂತ್ರಣದವರೆಗೂ ಮುಂದುವರೆಯುತ್ತಾರೆ. ಗುಣಗಳನ್ನು ಗಮನಿಸದೆ ದೋಷಗಳನ್ನೇ ದೊಡ್ಡದು ಮಾಡಿ ಸಮಾಜದಲ್ಲಿ ಸಾಧುಗಳ ವಿರುದ್ಧ ಹುಯ್ಲೆಬ್ಬಿಸುತ್ತಾರೆ. ಇಂತಹ ಪಾಪಿಗಳೇ ಈ ಕಾಲದಲ್ಲಿ ಹೆಚ್ಚು ಹೆಚ್ಚು ಹುಟ್ಟುತ್ತಿದ್ದಾರೆ. ಶಾಸ್ತ್ರವನ್ನು ಚೆನ್ನಾಗಿ ಅಧ್ಯಯನ ಮಾಡಿ ತಿಳಿಯದೆ, ಮುನಿಜೀವನದ ಆಳವನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳದೆ. ಮುಕ್ತಿ ಮಾರ್ಗದ ಕಲ್ಪನೆಯೂ ಇಲ್ಲದೆ ವಿಷಯಾಂಧರಾದ ಅಜ್ಞಾನಿಗಳು ಇಂತಹ ದುರ್ವರ್ತನೆಯಲ್ಲಿ ತೊಡಗಿರುವುದು ಅಸಹಜವಲ್ಲ. ಇಂತಹವರು ಮಹಾತಪಸ್ವಿಯ ವಾಣಿಯನ್ನು ಮೆಲುಕು ಹಾಕಿದರೆ ಸತ್ಯಾಂಶ ಕಂಡೀತು.

ನಾನು ಅವರಲ್ಲಿ ನನ್ನ ಒಂದು ಅನುಭವ ಹೇಳಿದೆ. ಒಬ್ಬ ಅವಿವೇಕ ಶೇಠ್‌ಜಿಗೆ ಒಬ್ಬ ಸಾಧು ರುಚಿಸಲಿಲ್ಲವಂತೆ. ಅವರ ವಿರುದ್ಧ ನೀವು ಹೋರಾಡಬೇಕೆಂದು ನನ್ನನ್ನು ಒತ್ತಾಯಿಸುತ್ತಾ ಬಂದ. ಆಗ ನಾನು ಅವನಿಗೆ ಹೇಳಿದೆ. ಒಬ್ಬ ಮುನಿ ಜೀವನ ಸಾಮಾನ್ಯವಾದುದಲ್ಲ. ಸರ್ವಸಮಕ್ಷಮ ಅವರ ಗುಣದೋಷ ವಿಮರ್ಶೆ ವಿಹಿತವಲ್ಲ. ಒಂದು ವೇಳೆ ಅವರ ಚರ್ಯೆ ಆಗಮ ವಿರುದ್ಧವಿದ್ದರೆ ಏಕಾಂತದಲ್ಲಿ ಬಿರುಸಿನಿಂದಲೇ ಬೇಕಾದರೆ ವಾದ ಮಾಡಿದರೆ ತಪ್ಪಾಗುವುದಿಲ್ಲ ಎಂದೆ. ಆಗ ಅವರು ಚೆನ್ನಾಗಿದೆ. ಸಮ್ಯಕ್ತ್ವೀ ಜೀವ ಹಾಗೆಯೇ ಕಾಯಂ ಪ್ರವೃತ್ತಿ ಇಡಬೇಕೆಂದು ಹೇಳಿದರು.

ಶಾಸ್ತ್ರವನ್ನು ಚೆನ್ನಾಗಿ ಅಧ್ಯಯನ ಮಾಡಿದ ವ್ಯಕ್ತಿಗಳಿಗೆ ಮುನಿಮಾರ್ಗ ಅಪಮಾನಕರವಾಗಿಯೇ ಕಾಣುತ್ತದೆ. ಅಂತವರು ಮುನಿಗಳ ಚಾರಿತ್ರಕ್ಕೆ ದೋಷ ಹಚ್ಚಲು ಸದಾ ಹೆಣಗಾಡುತ್ತಾರೆ. ಈ ಪರಿಸ್ಥಿತಿಯಲ್ಲಿ ಮುನಿಗಳ ಬಗ್ಗೆ ಎಂದೂ ಸಾರ್ವಜನಿಕವಾಗಿ ಚರ್ಚಿಸಬಾರದು. ,ಏಕಾಂತದಲ್ಲಿ ಮಾತ್ರ ವ್ಯವಹರಿಸಬೇಕು.

ಪಂಡಿತ ಆಶಾದರ ಸೂರಿಗಳು ಒಂದು ಮಾತು ಹೇಳಿದ್ದಾರೆ.

"ಜಗದ್ಬಂಧು ಜಿನಧರ್ಮದ ಪರಂಪರಾ ಮಾರ್ಗದಲ್ಲಿ ನಡೆಯುವ ಮುನಿಗಳನ್ನು ಉತ್ಪನ್ನ ಮಾಡುವ ಪ್ರಯತ್ನ ವಿವೇಕಿ ಗೃಹಸ್ಥನ ಕರ್ತವ್ಯವಾಗಿದೆ. ಹಾಗೂ ವಿಧ್ಯಮಾನ ಮುನಿಗಳ ಶ್ರುತಜ್ಞಾನಾದಿ ಗುಣಗಳ ಸಂವರ್ಧನೆಗೆ ಶ್ರಮಿಸುವುದೂ ಅವನ ಇನ್ನೊಂದು ಕರ್ತವ್ಯವಾಗಿದೆ."

ಮುನಿಗಳ ರಕ್ಷಣೆ ಶ್ರಾವಕನ ಹೊಣೆಯಾಗಿದೆ. ಸಚ್ಚಾರಿತ್ರಶೀಲ ಶ್ರಾವಕನಿಲ್ಲದಿದ್ದರೆ ಮುನಿಯೂ ಇಲ್ಲ. ಮುನಿ ಇರದಿದ್ದರೆ ಧರ್ಮವೂ ಇರುವುದಿಲ್ಲ. ಆದ್ದರಿಂದ ಮುನಿಯ ರಕ್ಷಣೆಯ ನಿಮಿತ್ತ ಶ್ರಾವಕನ. ಜವಾಬ್ದಾರಿ ಅಸಮಾನ್ಯವಾಗಿರುತ್ತದೆ. ಅಂತಹ ಶ್ರಾವಕ ಮೂರುಲೋಕದಲ್ಲೂ ಶ್ಲಾಘ್ಯನಾಗುತ್ತಾನೆ. ಇಂದಿನ ಶ್ರಾವಕನೇ ನಾಳಿನ ಮುನಿ. ಮುನಿಗಳ ಸೇವೆ ಭಕ್ತಿ ಶ್ರದ್ಧೆ ಮಾಡುತ್ತಾ ಮಾಡುತ್ತಾ ಒಂದು ದಿನ ಅವನೂ ಮುನಿಯಾಗಿ ಮೋಕ್ಷದತ್ತ ನಡೆಯುತ್ತಾನೆ.ಮುನಿ ರಕ್ಷಾಭಾವ ಮಹಾನ್ ಸೌಭಾಗ್ಯದ ಮಾತು. ಶ್ರೇಷ್ಠ ಅಂತರಂಗದ ಸಂಪತ್ತು ! ಅದನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಮುನಿಗಳ ರಕ್ಷಣೆಯ ಬಗ್ಗೆ ಸಫಲತೆ ಬರದಿದ್ದರೆ, ಅಂತವರಲ್ಲಿ ಚಿತ್ತ ಸ್ಥೈರ್ಯ ತುಂಬಲು ಈ ಮಾತು ಹೇಳುತ್ತಾರೆ.

"ಪಂಚಮ ಕಾಲದ ಮುನಿಗಳಲ್ಲಿ ಕಾಲದೋಷದ ನಿಮಿತ್ತ ಗುಣಗಳ ಮಹಾವಿಕಾಶ ಕಂಡುಬರುವುದಿಲ್ಲ. ಈ ದಿಕ್ಕಿನಲ್ಲಿ ಮುನಿಗಳಿಗೆ ಸಹಕರಿಸುತ್ತಾ

ಪ್ರಯತ್ನಶೀಲರಾಗುವ ಶ್ರಾವಕರಿಗೆ ಸಫಲತೆ ಪ್ರಾಪ್ತವಾಗದಿದ್ದರೂ ಶ್ರೇಯಸ್ಸಿಗೆ ಅವಶ್ಯ ಕಾರಣನಾಗುತ್ತಾನೆ. ಸಾಧುವಿಗೆ ಒಂದು ವೇಳೆ ಸಾಧನೆಯಲ್ಲಿ ಸಫಲತೆ ಉಂಟಾದರೆ ಸಾಧರ್ಮಿ ಸಾಧುಗಳಿಗೆ, ಸಾಮಾನ್ಯ ಜನತೆಗೆ ಮಹಾನ್ ಉಪಕಾರವಾಗುತ್ತದೆ. ಏಕೆಂದರೆ ಸತ್ಯವಾದ ಸಾಧುಗಳಿಂದಲೇ ಧರ್ಮ ರಕ್ಷೆವೃದ್ಧಿ ಮತ್ತು ಪ್ರಭಾವನೆ ಆಗಬಲ್ಲದು. ಆದ್ದರಿಂದ ತ್ಯಾಗಿಗಳನ್ನು ನಿರ್ಮಾಣಮಾಡಲು ಮತ್ತು ಅವರನ್ನು ಗುಣ ಮಂಡಿತರನ್ನಾಗಿ ಮಾಡಲು ಶ್ರಾವಕರು ಸದಾ ಶ್ರಮಿಸಬೇಕು.''

ವಿಷಯ ವಾಸನೆಯ ಕೊಚ್ಚೆಯಲ್ಲಿ ಮಿಂದೇಳುವ ಸಾಮಾನ್ಯ ಮಾನವನ ವ್ಯಕ್ತಿತ್ವದಲ್ಲಿ ಯಾವ ಮಹತ್ವವಿರುತ್ತದೆ? ವಿಷಯ ವಾಸನೆಗಳಿಗೆ ಅಂಕುಶ ಹಾಕಿ ಮುಕ್ತಿ ಮಾರ್ಗದಲ್ಲಿ ವಿರಾಟ್ ಶಕ್ತಿಯಾಗಿ ಬೆಳೆದು ಮೇಲೇಳುವ ಉಜ್ವಲ ಆತ್ಮನ ಅನುಪಮ ಶಕ್ತಿಯುನ್ನು ವಾಸನೆಗಳಿಗೆ ದಾಸನಾದವನು ಏನು ತಿಳಿದಾನು? ಯಾರ ಮನಸ್ಸು ಉನ್ನತವಾಗಿರುತ್ತದೋ ಅವರ ಆತ್ಮ ಸಮುನ್ನತವಾಗಿ ಬೆಳೆಯುತ್ತದೆ. ಅಂತವರಿಗೆ ಈ ಜಗತ್ತು ತಾನಾಗಿಯೇ ಬಾಗುತ್ತದೆ. ಪೂಜ್ಯಶ್ರೀಯವರಿಗೆ ಅವರಿವರೆನ್ನದೆ ಭಾವಪರವಶರಾಗಿ ತಲೆಬಾಗುತ್ತಿದ್ದರು. ಆತ್ಮನ ಅದ್ಭುತ ಶಕ್ತಿ ಪ್ರಕೃತಿಯನ್ನೇ ಮಣಿಸಿ ಬಿಡಿಸುತ್ತದೆ. ಇನ್ನು ಜನಗಳನ್ನು ಮಣಿಸದೆ?

ಸಾಂಗಲಿಯಲ್ಲಿ ಯಾತ್ರಸಂಘ

ಸಂಘವು ಸಾಂಗಲಿಗೆ ಬಂದಿತು. ಅಲ್ಲಿಯ ರಾಜ ಬಹಳ ಶ್ರದ್ಧೆ ಭಕ್ತಿಯಿಂದ ದರ್ಶನಕ್ಕೆ ಬಂದ. ಅವನಿಗೆ ಅವರ್ಣನೀಯ ಆನಂದವಾಯಿತು. ಪೂಜ್ಯಶ್ರೀಯವರು ಒಮ್ಮೆ ಲೌಕಿಕ ರಾಜನೀತಿಯನ್ನೂ ಇನ್ನೊಮ್ಮೆ ಪಾರಲೌಕಿಕವನ್ನೂ ಹೃದಯಂಗಮವಾಗಿ ವರ್ಣಿಸುತ್ತಿದ್ದರು. ಪುಂಗಿಯ ನಾದಕ್ಕೆ ಸಿಕ್ಕ ಸರ್ಪನಂತಾಗಿತ್ತು ರಾಜನ ಮನಸ್ಸು. ತೀರ್ಥಂಕರರು ಕ್ಷತ್ರಿಯರಾಗಿದ್ದರು. ಅಹಿಂಸಾ ಧ್ವಜವನ್ನು ಹಾರಿಸಿದವರೂ ಕ್ಷತ್ರಿಯರೇ. ಅಹಿಂಸಾ ಧರ್ಮದ ಪ್ರೇಮಗಂಗೆ ಕ್ಷತ್ರಿಯರಿಂದಲೇ ಹರಿಯಿತು. ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರು ಯಜ್ಞದಲ್ಲಿ ಪಶುಗಳ ಬಲಿದಾನ ಹೇಳಿದ್ದು ಎಂತಹ ವಿಪರ್ಯಾಸ! ಒಂದು ಆಶ್ಚರ್ಯಕರವಾದ ಮಾತೆಂದರೆ ಯಾವ ಕ್ಷತ್ರಿಯರ ಹರಿತವಾದ ಕತ್ತಿಯಿಂದ ಯಮನ ನಾಲಿಗೆಯ ಚಪಲ ತಣಿಯುತ್ತಿತ್ತೊ ಅಂತಹ ಧಿರೋಧಾತ್ತ ಕ್ಷತ್ರಿಯರೇ ಜೀವಗಳ ಮೌಲ್ಯವನ್ನು ತಿಳಿದು ಅಭಯದಾನ ಮಾಡುತ್ತಿದ್ದರು. ಬ್ರಹ್ಮತತ್ವ ಹೇಳುತ್ತಿದ್ದ ಬ್ರಾಹ್ಮಣರೇ ಜೀವಿಗಳನ್ನು ಅಗ್ನಿಯಲ್ಲಿ

ಹೋಮಗೊಳಿಸಿ ಸ್ವಾಹ ಮಾಡುವ ಜಾಲವನ್ನು ರಚಿಸುತ್ತಿದ್ದರು. ಸಾಂಖ್ಯ ತತ್ವ ಕೌಮುದಿಯ ಟೀಕಾಗ್ರಂಥದಲ್ಲಿ ಅಶ್ವ ಆಹುತಿಯ ಬಗ್ಗೆ ಈ ಮಂತ್ರ ಹೇಳಿದೆ.

"ಹೇ ಅಶ್ವ! ಯತ್ ತ್ವಂ ಅಸ್ಮಾಭಿಃ ಸಂಪಸ್ಯೆ ಏತತ್ಮಂ ನ ಮ್ರಿಯಸೆ ನ ವಿನಸ್ಯತಿ. ದೇವಯಾನ ಮಾರ್ಗೈಃ ದೇವಾನ್ ದೃತಂ ಗಚ್ಛತಿ''

ಅರ್ಥ ''ಹೇ ಅಶ್ವ! ನಾವು ಮಾಡುವ ನಿನ್ನ ಬಲಿದಾನದಿಂದ ನಿನ್ನ ಮರಣವಾಗುವುದಿಲ್ಲ ಮತ್ತು ನಿನ್ನ ವಿನಾಶವೂ ಆಗುವುದಿಲ್ಲ. ನೀನು ದೇವ ಮಾರ್ಗದಲ್ಲಿ ಶೀಘ್ರ ಗಮನ ಮಾಡಿ ಸುರತ್ವವನ್ನು ಪಡೆದುಕೊಳ್ಳುವೆ.'' ಇಂತಹ ನಿಂದ್ಯ ಶಾಸ್ತ್ರಗಳಿಂದ ಲೆಕ್ಕವಿಲ್ಲದಷ್ಟು ಪಶುಗಳು ಮನುಷ್ಯನ ಜಿಹ್ವಾಚಪಲಕ್ಕೆ ಧರ್ಮದ ಹೆಸರಿನಲ್ಲಿ ಬಲಿಯಾಗುತ್ತವೆ.

ರಾಜಧರ್ಮದ ಬಗ್ಗೆ ಪ್ರಕಾಶ

ರಾಜನಿಗೆ ಪೂಜ್ಯಶ್ರೀಯವರು ರಾಜಧರ್ಮದ ಬಗ್ಗೆ ಅತ್ಯಮೂಲ್ಯ ವಿಚಾರಗಳನ್ನು ತಿಳಿಸಿದರು.

''ರಾಮಚಂದ್ರ ಪಾಂಡವಾದಿಗಳು ರಾಜ್ಯವಾಳುತ್ತಿದ್ದರು. ಅವರ ಚರಿತ್ರೆಯನ್ನು ನೋಡಿರಿ. ಯಾವಾಗ ದುಷ್ಟರು ಆಕ್ರಮಣ ಮಾಡುತ್ತಿದ್ದರೋ ಆಗ ಮಾತ್ರ ಶತ್ರು ಪಕ್ಷದ ಮೇಲೆ ಕತ್ತಿ ಎತ್ತುತ್ತಿದ್ದರು. ಅನ್ಯ ರಾಜ್ಯಗಳನ್ನು ಅಪಹರಿಸುವುದಕ್ಕಲ್ಲ. ಸಂಕಲ್ಪ ಹಿಂಸೆ ತ್ಯಜಿಸುವುದು ರಾಜಧರ್ಮ. ನಿರಪರಾಧಿ ಪ್ರಾಣಿಗಳನ್ನೂ ರಕ್ಷಿಸಬೇಕು. ಬೇಟೆಯಾಡಬಾರದು, ಆಡಿಸಬಾರದು. ದೇವತೆಗಳಿಗೆ ಕೊಡುವ ಪ್ರಾಣಿಬಲಿಯನ್ನು ನಿಷೇಧಿಸಬೇಕು. ರಾಜನೀತಿಯಲ್ಲಿ ರಾಜನು ತಪ್ಪಿತಸ್ಥನಾದ ತನ್ನ ಪುತ್ರನಿಗೂ ದಂಡ ಕೊಡುತ್ತಾನೆ. ಸಪ್ತ ವ್ಯಸನಗಳನ್ನು ತಡೆಯಬೇಕು. ಸಜ್ಜನರನ್ನು ರಕ್ಷಿಸಬೇಕು, ದುರ್ಜನರನ್ನು ಶಿಕ್ಷಿಸಬೇಕು, ಸತ್ಯ ಧರ್ಮಗಳ ಲೋಪವನ್ನೆಂದೂ ಮಾಡಬಾರದು. ಪಂಚ ಮಹಾ ಪಾತಕಗಳ ತ್ಯಾಗವೇ ಧರ್ಮ. ಯಾವ ರಾಜಶಾಸನದಲ್ಲಿ ಪ್ರಜೆಗಳು ನ್ಯಾಯದಿಂದ ನಡೆದುಕೊಳ್ಳುತ್ತಾರೋ ಅಂತಹ ರಾಜನಿಗೆ ಯಾವಶಾಸನದಲ್ಲಿ ಪ್ರಜೆಗಳು ನ್ಯಾಯದಿಂದ ನಡೆದುಕೊಳ್ಳುತ್ತಾರೋ ಅಂತಹ ರಾಜನಿಗೆ ಪುಣ್ಯವೂ, ಅನ್ಯಾಯದಿಂದ ನಡೆದುಕೊಂಡರೆ ಪಾಪವೂ ಉಂಟಾಗುತ್ತದೆ.''

ಅವರು ಮುಂದುವರೆದು ಮತ್ತೆ ಹೀಗೆ ಹೇಳಿದರು

"ರಾಜನ ಮೇಲೆ ಯಾರಾದರೂ ಆಕ್ರಮಣ ಮಾಡಿದರೆ ಅವರನ್ನೂ ಓಡಿಸುವುದಕ್ಕೆ ಪ್ರತಿ ಆಕ್ರಮಣ ಮಾಡುವುದು ವಿರೋಧಿ ಹಿಂಸೆ. ಅಂತಹ ತ್ಯಾಗ ಶ್ರಾವಕರಿಂದ ಮಾಡಲು ಸಾಧ್ಯವಿಲ್ಲ. ಯಾರು ಪಂಚಮಹಾಪಾತಕಗಳನ್ನು ಮಾಡುತ್ತಾನೋ ಅವನು ಪಾಪಿ. ಯಾರೂ ಅದನ್ನು ಬಿಡುತ್ತಾರೋ ಅವರು ಪುಣ್ಯವಂತರು. ಪಂಚ ಪಾಪಗಳಿಂದ ರಾಜ್ಯಭಾರ ನಡೆಸುವುದು ಅನ್ಯಾಯವಾಗುತ್ತದೆ. ಪ್ರಜೆಗಳನ್ನು ತನ್ನ ಮಕ್ಕಳಂತೆ ನೋಡಿಕೊಳ್ಳುವುದೇ ರಾಜನೀತಿ.

ಸಾಂಗಲಿಯಲ್ಲಿ ಸಂಘ ಸಂಚಾಲಕರಿಗೆ ಸನ್ಮಾನ

ಆಚಾರ್ಯಶ್ರೀಯವರ ಉಪದೇಶದಿಂದ ರಾಜನಿಗೆ ಬಹಳ ಹರ್ಷವಾಯಿತು. ಮಹಾಪುರುಷರ ವಾಣಿ ಅಂತರ್ಯವನ್ನು ಸ್ಪರ್ಶಿಸುತ್ತದೆ. ಏಕೆಂದರೆ ಧರ್ಮ ಅಂತರ್ಯದ ವಸ್ತು. ಅಂತರ್ಯದಲ್ಲಿ ಧರ್ಮ ಎಂದು ಅಧಿಷ್ಠಿತವಾಗುತ್ತದೋ ಅದರ ಅಭಿವ್ಯಕ್ತಿ ಬಾಹ್ಯದಲ್ಲೂ ಕಾಣಬರುತ್ತದೆ. ಸಾಂಗಲಿಯ ಸಮಸ್ತ ಶ್ರಾವಕರು ಸಂಘ ಸಂಚಾಲಕರಾದ ಜವೇರಿ ಬಂಧುಗಳಿಗೆ ಸನ್ಮಾನ ಪತ್ರವನ್ನು ಅತ್ಯಂತ ವಿನಯ ಮತ್ತು ಗೌರವ ಪೂರ್ವಕ ಸಮರ್ಪಿಸಿದರು. ಶಾಂತಿಸಾಗರರಂತಹ ಯುಗಪುರುಷ ಮಹಾಯೋಗಿಯೊಬ್ಬರ ಸಂಘವನ್ನು ತೀರ್ಥಯಾತ್ರೆಗೆ ಕರೆದುಕೊಂಡು ಹೊರಟಿರುವುದು ಮಹಾಪುಣ್ಯ ಯೋಗವಾಗಿದೆ. ನೀವು ನಮಗೆ ಪರಮಆದರಣೀಯರೂ, ಅನುಕರಣೀಯರೂ ಆಗಿದ್ದೀರಿ ಎಂದು ಜನತೆ ಅವರನ್ನು ಮುಕ್ತ ಕಂಠದಿಂದ ಹೊಗಳಿತು. ಇಕ್ಷು ರಸವನ್ನು ಆಹಾರದಾನವಾಗಿ ಕೊಟ್ಟ ಶ್ರೇಯಾಂಶರಾಜನ ಯಶಶ್ಚಂದ್ರಿಕೆ ದಶದಿಕ್ಕಿಗೂ ಹಬ್ಬಿತು. ಅವನನ್ನು ಆಶ್ಚರ್ಯಚಕಿತನಾದ ಸ್ವತಃ ಭರತ ಚಕ್ರಿಯೇ ಬಂದು ಸತ್ಕರಿಸಿದ. ಪ್ರಭುವಿನ ಮನಸ್ಸನ್ನು ಹೇಗೆ ಅರಿತು ಪವಿತ್ರ ಆಹಾರ ದಾನ ಮಾಡಿದೆ ಎಂದು ಕುತೂಹಲದಿಂದ ಕೇಳುತ್ತಾನೆ. ಇಂದಿನಿಂದ ನೀನು ನಮಗೆಲ್ಲಾ ಪೂಜ್ಯನು ಆದೆ ಎಂದು ದಾನಪ್ರವರ್ತಕನನ್ನು ಸತ್ಕರಿಸುತ್ತಾನೆ. ಆದ್ದರಿಂದ ಮುನಿಗಳ ಸೇವೆ ವೈಯಾವೃತ, ಚತುರ್ವಿಧ ದಾನಗಳು ವ್ಯಕ್ತಿಯನ್ನು ಮಹಾ ಮೇರುವಿನೆತ್ತರಕ್ಕೆ ಏರಿಸಿಬಿಡುತ್ತವೆ. ಮುನಿಸೇವಾ ಮಹಿಮೆ ಹೀಗಿರುವಾಗ ಮುನಿ ಪರಂಪರೆಯ ಆದ್ಯಪ್ರವರ್ತಕರಾದ ಪೂಜ್ಯ ಆಚಾರ್ಯಶ್ರೀಯವರ ಸಂಘವನ್ನು ಪರಮಭಕ್ತಿ ಪುರಸ್ಸರವಾಗಿ ಸಂಚಾಲನೆ ಮಾಡಿದ ಜವೇರಿ ಬಂಧುಗಳ ಪುಣ್ಯಾತಿಶಯವನ್ನು ಹೊಗಳಲು ಯಾರಿಂದ ಸಾಧ್ಯ? ಭವಸಾಗರದಿಂದ ಪಾರುಮಾಡುವ ಶ್ರೇಷ್ಠ ಗುರುವಿನ ಆದರ ಮಾಡುವುದರಿಂದ

ಜಗತ್ತೇ ಆದರಿಸುತ್ತದೆ; ಪೂಜಿಸುತ್ತದೆ. ಅದು ಧರ್ಮದಲ್ಲಿ ಇಟ್ಟಿರುವ ಶ್ರದ್ಧೆಯ ಫಲವಾಗಿದೆ.

ಮುನಿಗಳ ಆಹಾರ ಕ್ರಮ

ಶ್ರೀಮಾನ್ ರಾಜಮಾನ್ ಶ್ರೀಮಂದರ ಅರವಡೆಯವರಮನೆಯಲ್ಲಿ ಪೂಜ್ಯಶ್ರೀಯವರ ಆಹಾರವಾಯಿತು. ದಿಗಂಬರಮುನಿಯು ಭಕ್ತಿ ಮತ್ತು ಶ್ರದ್ಧಾಯುಕ್ತ ಶ್ರಾವಕರಿಂದ ಕೊಡಲ್ಪಟ್ಟ ಅಯಾಚಿತ ಆಹಾರವನ್ನು ಪ್ರಸನ್ನಚಿತ್ತದಿಂದ ತೆಗೆದುಕೊಳ್ಳುತ್ತಾರೆ ಎನ್ನುವುದು ಆ ಆಹಾರ ದಾನದಿಂದ ಅನೇಕರಿಗೆ ಗೊತ್ತಾಯಿತು. ಗೃಹಸ್ಥರು ಕರುಣಾಭಾವದಿಂದ ಮುನಿಗಳಿಗೆ ಆಹಾರದಾನ ಮಾಡುವುದಿಲ್ಲ. ಭಕ್ತಿವಶರಾಗಿ ಪುಣ್ಯಸಂಚಯ ನಿಮಿತ್ತ ಶುದ್ಧ ನಿರ್ದೋಷ ಆಹಾರ ಅರ್ಪಿಸುತ್ತಾರೆ. ಸಾಧುಗಳು ತಮ್ಮ ಪ್ರತಿಜ್ಞೆಗೆ ಅನುಗುಣವಾಗಿ ಆಹಾರ ಸಿಕ್ಕರೆ ಮಾತ್ರ ತೆಗೆದುಕೊಳ್ಳುತ್ತಾರೆ. ಇಲ್ಲವಾದರೆ ಇಲ್ಲ. ಹಳ್ಳತಿಟ್ಟು ತುಂಬಲು ಕಲ್ಲು ಮಣ್ಣು ಇತ್ಯಾದಿ ಹಾಕುವಂತೆ ಮುನಿಗಳು ಸರಸ ನೀರಸ ಶುದ್ಧ ಆಹಾರವನ್ನು ಪ್ರಸನ್ನ ಚಿತ್ತದಿಂದ ಶಾಸ್ತ್ರವಿಧಿಗನುಸರಿಸಿ ಸ್ವೀಕರಿಸುತ್ತಾರೆ. ದಾತೃವು ಅವರ ಚರಣಗಳಿಗೆ ಪ್ರಣಾಮ ಮಾಡಿ ಚರಣ ಪೂಜಿಸಿ ಆಹಾರ ಜಲಶುದ್ಧಿ ಹೇಳಿ ಆಹಾರ ಸ್ವೀಕರಿಸಲು ಪ್ರಾರ್ಥಿಸುತ್ತಾರೆ. ಮುನಿಗಳು ಆಹಾರಕ್ಕಾಗಿ ಯಾರನ್ನೂ ಯಾಚಿಸುವುದಿಲ್ಲ. ಆಹಾರದ ರುಚಿ ಅರುಚಿಯತ್ತ ವಿಚಾರಿಸದೆ ವಿರಕ್ತ ಭಾವದಿಂದ ಸ್ವೀಕರಿಸುತ್ತಾರೆ. ಶರೀರ ಧರ್ಮ ಸಾಧನವಾಗಿದೆ. ಆದ್ದರಿಂದ ಆಹಾರ ಸೇವನೆಯನ್ನು ಶರೀರದ ರಕ್ಷಣೆ ಧರ್ಮ ರಕ್ಷಣೆಗಾಗಿ ಮಾಡಬೇಕಾಗಿದೆ. ಧರ್ಮ ರಕ್ಷಣಾರ್ಥ ಶರೀರಕ್ಕೆ ಆಹಾರ ಕೊಡುವರೇ ಹೊರತು ಶರೀರ ಪೋಷಣೆಯ ನಿಮಿತ್ತವಲ್ಲ. ತಿರುಗುವ ಚಕ್ರಕ್ಕೆ ಕೀಲೆಣ್ಣೆ ಹಾಕುವಂತೆ ಈ ಶರೀರಕ್ಕೆ ಆಹಾರದ ಅಗತ್ಯವಿರುತ್ತದೆ. ತವೆಗೆದುಕೊಳ್ಳುವ ಆಹಾರ ನನಗಾಗಿ ಅಲ್ಲ. ನಾನು ಜ್ಞಾನ ಚೇತನ ಸ್ವಭಾವಿ. ಆಹಾರ ಜಡ. ಜಡ ಆಹಾರ ಚೈತನ್ಯ ಸ್ವರೂಪಿಯಾದ ನನಗೆ ಹೇಗೆ ಸೇರೀತು ಎಂದು ಚಿಂತಿಸುತ್ತಾ ಆಹಾರ ಸ್ವೀಕರಿಸುತ್ತಾರೆ. ಆಹಾರ ಸೇವಿಸುತ್ತಿರುವಾಗಲೂ ರುಚಿ ಅರುಚಿಯ ಬಗ್ಗೆ ಹರ್ಷ ವಿಷಾದ ಮಾಡದೆ ಸ್ವಸ್ವರೂಪವನ್ನೇ ಧ್ಯಾನಿಸುವ ಮುನಿಗೆ ಆಹಾರವನ್ನುಣ್ಣುತ್ತಿದ್ದರೂ ಕರ್ಮ ನಿರ್ಜರೆ ಆಗುತ್ತದೆ. ಭೋಗಿಗಳ ಆಹಾರ ನಿದ್ರೆ, ಭಯ, ಮೈಥುನ ಆದಿ ಸಮಸ್ತ ಚಟುವಟಿಕೆಗಳು ರಾಗಯುಕ್ತವಾಗಿರುವುದರಿಂದ ಕ್ಷಣ ಕ್ಷಣಕ್ಕೂ ಬಂಧಕ್ಕೆ ಕಾರಣಗಳಾಗಿವೆ. ಆದ್ದರಿಂದ ಅಂತಹ ಜೀವಗಳು ಅಧೋಮುಖಿಗಳಾಗಿರುತ್ತವೆ. ವೀತರಾಗಿ ಮುನಿಗಳ ಜೀವನ ಊರ್ಧ್ವ ಮುಖಿಯಾಗಿರುತ್ತದೆ.

ಸಂಯೋಗ-ವಿಯೋಗಗಳ ಪಂಕದಲ್ಲಿ ಬಿದ್ದು ಪಾಪದ ಕೆಸರನ್ನು ಸದಾ ಮೆತ್ತಿಕೊಳ್ಳುತ್ತಿರುವ ಶ್ರಾವಕರು ತಮ್ಮ ಪಾಪದ ಕೆಸರನ್ನು ತೊಳೆಯುವ ಬಹುದೊಡ್ಡ ತೀರ್ಥ ಪಾದ ಮುನಿದಾನವನ್ನು ಬಹಳ ಶ್ರದ್ಧೆಯಿಂದ ಮಾಡುತ್ತಾರೆ. ಮುನಿಗೆ ಕೊಡುವ ನವದಾ ಭಕ್ತಿಯುಕ್ತ ದಾನವು ಕಬ್ಬಿಣದಂತಿರುವ ಶ್ರಾವಕರ ಜೀವನವನ್ನು ಅಪರಂಜಿಯನ್ನಾಗಿ ಮಾಡುವ ಸಿದ್ಧರಸದಂತಿದೆ. ಆಧ್ಯಾತ್ಮ ಸಂಪತ್ತಿನ ಪ್ರಾಪ್ತಿಗಾಗಿ ಶ್ರಾವಕರು ಮುನಿಗಳಿಗೆ ಅತ್ಯಂತ ಶ್ರದ್ಧೆಯಿಂದ ಆಹಾರ ದಾನ ಮಾಡುತ್ತಾರೆ.

ಸಾಂಗ್ಲಿಯಿಂದ ಸಂಘವು ಪ್ರಸ್ತಾನ ಮಾಡಿ ಮೀರಜ್ ಗೆ ಬಂದಿತು. ಅಲ್ಲಿಯ ರಾಜ ಪೂಜ್ಯಶ್ರೀಯವರ ದರ್ಶನಕ್ಕೆ ಆಗಮಿಸಿದ. ಅಲ್ಲಿಂದ ಸಂಘ ಅತಿಶಯ ಕ್ಷೇತ್ರ ಬಾಬ ನಗರ ಸೇರಿತು. ಅಲ್ಲಿಂದ ಮತ್ತೆ ಬೀಜಾಪುರದತ್ತ ಪ್ರಯಾಣ ಮಾಡಿತು. ಅಲ್ಲಿ ವೀರಸಾಗರ ಮತ್ತು ಪಾಯಸಾಗರರ ಪ್ರಭಾವಶಾಲಿ ಪ್ರವಚನಗಳಾದವು.

ಅಲ್ಲಿಂದ ಸಂಘವು ಅಕ್ಕಲ ಕೋಟೆಗೆ ಹೋಯಿತು. ಸಂಘಕ್ಕೆ ಸಂಭ್ರಮದ ಸ್ವಾಗತ ನೀಡಲಾಯಿತು. ಅಲ್ಲಿ ತ್ಯಾಗಿಗಳ ಕೇಶಲೋಚನವಾಯಿತು. ಉಚ್ಚ ಅಧಿಕಾರಿಗಳೂ ಆಗಮಿಸಿದ್ದರು. ಕೇಶಲೋಚನದ ಬಗ್ಗೆ ನಾನು ಒಂದು ಪ್ರಶ್ನೆ ಹಾಕಿದೆ. ತ

"ಮಹರಾಜ್ ! ನೀವು ಕೇಶಗಳನ್ನು ಕಿತ್ತು ಹಾಕುತ್ತೀರಿ. ಆಗ ನಿಮ್ಮ ಮುಖ ಮುದ್ರೆಯಲ್ಲಿ ಯಾವುದೇ ವಿಕೃತಿ ಹುಟ್ಟುವುದಿಲ್ಲ. ಪೂರ್ಣಶಾಂತಿ ಇರುತ್ತವೆ. ಆಗ ನಿಮಗೆ ಕಷ್ಟವೇನೂ ಆಗುವುದಿಲ್ಲವೆ ?"

ಅವರು-"ನಮಗೆ ಕೇಶಗಳನ್ನು ಕಿತ್ತು ಹಾಕಲು ಕಷ್ಟವೇನೂ ಕಾಣುವುದಿಲ್ಲ. ಶರೀರದ ಬಗ್ಗೆ ಮೋಹವು ಇರದ ಕಾರಣ ಶಾರೀರಿಕ ಪೀಡೆಯಿಂದ ಸಂಕ್ಲೇಶ ಹುಟ್ಟದು." ಅವರ ಮಾತು ಸರೀರ ಮೋಹ ತೊತ್ತೊಳ ತುಳಿದ ವೈರಾಗ್ಯಯುಕ್ತ ಮಹಾಪುರುಷನ ಮಾತಾಗಿತ್ತು.

ಕೇಶ ಲೋಚನದ ಬಗ್ಗೆ ಇನ್ನೊಂದು ಮಾತು ಇದೆ. ನಿರಂತರ ವೈರಾಗ್ಯ ಭಾವನೆಯ ಕಾರಣ ಶರೀರ ಮೋಹ ನಷ್ಟವಾಗಿರುತ್ತದೆ. ಆತ್ಮನನ್ನು ಶರೀರದಿಂದ ಭಿನ್ನ ಎಂದು ತಿಳಿಯುವ ಸಾಧುಗಳಿಗೆ ಕೇಶ ಲೋಚನ ಆತ್ಮ ವಿಕಾಶಕ್ಕೇ ಕಾರಣವಾಗಿದೆ. ಅನ್ಯ ಸಂಪ್ರದಾಯದವರಿಗೆ ಜಿನ ಮುನಿಗಳ ಶರೀರ ನಿರ್ಮಮಕಾರ ನಿಸ್ಪೃಹತೆ ತಿಳಿದು ಬರುತ್ತದೆ. ಮುನಿಯು ಎಷ್ಟರ ಮಟ್ಟಿಗೆ ಶರೀರ ಮೋಹ ತ್ಯಜಿಸಿದ್ದಾನೆ; ಎಷ್ಟು ಸ್ವಾವಲಂಬಿಯಾಗಿದ್ದಾನೆ ಎನ್ನುವುದು ಈ ಕೇಶ ಮೋಚನದಿಂದ ಬಾಹ್ಯ ಜಗತ್ತಿಗೆ ತಿಳಿಯುತ್ತದೆ. ಇದರಿಂದ ಜಿನ ಧರ್ಮದ ಪ್ರಭಾವವೂ ಆಗುತ್ತದೆ ಮುನಿಗಳು

ಬಾಹ್ಯದಲ್ಲಿ ಯಾವ ಪ್ರಕಾರ ದಿಗಂಬರರಾಗಿದ್ದಾರೋ ಅಂತರ್ಯದಲ್ಲಿ ವಿಷಯ ಕಷಾಯಗಳ ಭಾವಗಗಳನ್ನು ತೊರೆದು ಅಷ್ಟೇ ದಿಗಂಬರರಾಗಿರುತ್ತಾರೆ. ಆದ್ದರಿಂದ ಮುನಿಗಳು ಕೇಶವನ್ನು ಕೀಳುವುದೆಂದರೆ ಕರ್ಮದ ಬೇರುಗಳನ್ನು ಕೀಳುವುದು ಎಂದರ್ಥ. ಹುಟ್ಟು ಸಾವಿಗೆ ಕಾರಣವಾದ ರಾಗ-ದ್ವೇಷಗಳ ಮೂಲವನ್ನೇ ಕಿತ್ತು ಹಾಕುವುದು ಎಂದರ್ಥ ! ಆಹಾ ! ಮುನಿಗಳ ಸಹನೆ ಎಲ್ಲೆ ಇಲ್ಲದ್ದು ! ಅಳು-ನಗು, ನೋವು-ನಲಿವು, ಸುಖ-ದುಃಖ, ಶತ್ರು-ಮಿತ್ರ ಇವುಗಳಲ್ಲಿ ಸಮಾಭಾವ ಹೊಂದಿರುವ ಅವರಿಗೆ ಕೇಶಲೋಚನ ಸಂಯಮದ ಪರಾಕಾಷ್ಠತೆಯನ್ನು ತೋರಿಸುತ್ತದೆ.

ಇಲ್ಲಿಂದ ಸಂಘ ನಿಜಾಮರಾಜ್ಯ (ಹೈದರಾಬಾದ್) ಪ್ರವೇಶಿಸಿತು. ಆಗ ಅದು ಸ್ವತಂತ್ರ ರಾಜ್ಯವಾಗಿತ್ತು. ಈಗ ಭಾರತದಲ್ಲಿ ವಿಲೀನಗೊಂಡಿದೆ. ಇದಕ್ಕೆ ಸ್ವಲ್ಪ ಮೊದಲು ಅಲಂದಾ ಶೇಠ್ ಮಾಣಿಕ್ ಚಂದ್ ಮೋತಿ ಚಂದ್ ಶಹಾ ಹಾಗೂ ಬಾಲಚಂದ್ರಜಿ ಕೊಠಾರಿಯವರು ನಿಜಾಮ ಸರ್ಕಾರದಿಂದ ಸಂಘ ವಿಹಾರಕ್ಕೆ ಪರವಾನಿಗಿ ಪಡೆದಿದ್ದರು. ಅಲ್ಲಿಯ ಸೂಪರಿಂಟೆಂಡೆಂಟ್ ಸಾಹೇಬ್ ಮಹಮದ್ ಜಲಾಲುದ್ದೀನ್ ರವರು ಇಬ್ಬರು ಪೋಲೀಸ್ ಪೇದೆಗಳನ್ನು ಮುನಿಸಂಘದ ಜೊತೆಯಲ್ಲಿಯೇ ಇರಲು ಹುಕುಂ ಹೊರಡಿಸಿದ್ದರು.

ಸಂಘ ಜಗದಲಿ ತಲ್ಪಿದಾಗ ಅಲ್ಲಿಯ ಸ್ವರ್ಗೀಯ ಸೇಠ್ ಮೀಲಾಚಂದ್ ಹೇಮಚಂದ್ ರವರ ಪತ್ನಿ ರಾಜೂಬಾಯಿ ಅತ್ಯಂತ ಆದರದಿಂದ ಸಂಘ ಸೇವೆಯಲ್ಲಿ ತೊಡಗಿದರು. ಯಾತ್ರಿಕರನ್ನು ಆತ್ಮಾದರದಿಂದ ಭೋಜನಾದಿಗಳ ಮೂಲಕ ಸತ್ಕರಿಸಿದರು. ಮಧ್ಯಾನ್ಹದ ಸಾಮಾಯಿಕವಾದ ನಂತರ ಸಂಘ ಅಲಂದಾಕ್ಕೆ ಹೊರಟಿತು.

ಅಲಂದಾ ಜೈನ ಸಮಾಜ ಸಂಘವನ್ನು ಬಹಳ ಸಂಭ್ರಮ ಮತ್ತು ಸಡಗರದಿಂದ ಸ್ವಾಗತಿಸಿತು. ಅಲ್ಲಿ ಸಂಘವು ಸೇಠ್ ನಾನಾಚಂದ್, ಸೂರಚಂದ್ ರವರ ಉದ್ಯಾನವನದಲ್ಲಿ ಉಳಿಯಿತು. ಅಲ್ಲಿಯ ಬ್ರಾಹ್ಮಣ ಲಿಂಗಾಯಿತ, ಮುಸಲ್ಮಾನ ಕೋಮಿನ ಸಮಸ್ತರೂ ಪೂಜ್ಯಶ್ರೀಯವರ ದರ್ಶನ ಮಾಡಿ ಅವರ ಉಪದೇಶದಿಂದ ಬಹಳ ಸಂತೋಷಗೊಂಡರು. ದಿಗಂಬರ ಮುನಿಗಳ ಪ್ರಪ್ರಥಮ ದರ್ಶನ ಜನಗಳಲ್ಲಿ ಅಪೂರ್ವ ಭಾವನೆ ಹುಟ್ಟಿಸಿತು.

ಮಾರ್ಗಶಿರ ಸುಧಿ ೧೦ ರಂದು ವೀರಸಾಗರ ಮುನಿಗಳ ಕೇಶಲೋಚನವಾಯಿತು. ಜನಗಳು ಕುತೂಹಲದಿಂದ ಅಧಿಕ ಸಂಖ್ಯೆಯಲ್ಲಿ

ಸೇರಿದ್ದರು. ಆ ದಿನ ನಗರದ ಕಸಾಯಿ ಖಾನೆಯನ್ನು ಮುಚ್ಚಿಸಲಾಗಿತ್ತು. ಮಹಾರಾಜರ ಆಹಾರವು ಆ ದಿನ ಸೇಠ್ ಮಾಣಿಕ್ ಚಂದರವರ ಮನೆಯಲ್ಲಿ ನಡೆಯಿತು. ಸೇಠ್ ಜಿಯವರು ಧನ್ಯತಾ ಭಾವದಿಂದ ಉಬ್ಬಿ ಹೋಗಿದ್ದರು. ಆ ಸಂತೋಷದ ಭರಾಟೆಯಲ್ಲಿ ಅವರು ಶೇಡಬಾಳ ಆಶ್ರಮಕ್ಕೆ ವಿಶೇಷ ದಾನ ಘೋಷಿಸಿದರು.

ಗುಂಜೋಟಿ ಗ್ರಾಮದಲ್ಲಿ

ಆಲಂದಾದಿಂದ ಸಂಘ ಗುಂಜೋಟಿ ಗ್ರಾಮದತ್ತ ಹೊರಟಿತು. ಮಾರ್ಗ ಮೋಟಾರು ಸಂಚಾರಕ್ಕೆ ಅಯೋಗ್ಯವಾಗಿತ್ತು. ಗುರುಭಕ್ತ ಶಿರೋಮಣಿ ಶ್ರೀ ಹೀರಾಚಂದ್ ಮಾಣಿಕ್ಯಚಂದ್ ತಡಮಾಡದೆ ರಸ್ತೆ ರಿಪೇರಿ ಮಾಡಿಸಿದರು. ಗುಂಜೋಟಿ ಗ್ರಾಮದಲ್ಲಿ ಸಂಘವು ಸೇಠ್ ದೇವಚಂದ್ ಧನಜಿಯವರ ಉದ್ಯಾನವನದಲ್ಲಿ ಬಿಡಾರ ಮಾಡಿತು. ಆಹಾರ ಸೇಠ್‌ಜಿ ಮನೆಯಲ್ಲೇ ಆಯಿತು. ಪರಮ ಸಂತೋಷಗೊಂಡ ಸೇಠ್‌ಜೀ ಶೇಡಬಾಳ ಆಶ್ರಮಕ್ಕೆ ಐದು ಸಾವಿರ ರೂಗಳ ದಾನ ಘೋಷಿಸಿದರು.

ಇದಾದ ನಂತರ ಒಂದು ಘಟನೆ ನಡೆಯಿತು. ವಿಹಾರವನ್ನು ನಿಶ್ಚಯಿಸಿ ಪೂಜ್ಯ ಶ್ರೀಯವರು ಸಂಘಕ್ಕೆ ಆಜ್ಞಾಪಿಸಿದರು. ಅಲ್ಲಿಯ ಜನ, ಅಧಿಕಾರಿಗಳು ಆ ದಿನ ನಿಲ್ಲಲು ಎಷ್ಟೇ ಪ್ರಾರ್ಥಿಸಿದರೂ ಫಲಕಾರಿಯಾಗಲಿಲ್ಲ. ಏಕೆಂದರೆ ಮುನಿಗಳು ಸತ್ಯ ಮಹಾವ್ರತಿಗಳು. ನಿಶ್ಚಯಿಸಿದಂತೆ ಮಾಡುವವರು. ಅವರ ಮುಖದಿಂದ ಒಮ್ಮೆ ಒಂದು ಮಾತು ಹೊರಟರೆ ತೀರಿತು ಶತಾಯುಗತಾಯ ಆದರ ಪಾಲನೆಗೆ ಪ್ರಾಣವನ್ನು ಒಡ್ಡಿಯಾದರೂ ಕಟೀ ಬದ್ಧವಾಗುತ್ತಾರೆ. ಅವರು ಏನೇ ಹೇಳಿದರೂ ವಿಚಾರ ಪೂರ್ವಕ ಹೇಳುತ್ತಾರೆ. ಆತುರಾತುರವಾಗಿ ಹೇಳುವುದಿಲ್ಲ. ಅವರ ನಿಶ್ಚಯ ಹಿಮಾಲಯದಂತೆ ದೃಢವಾಗಿರುತ್ತದೆ. ಅವರಿಗೆ ಲಾಭ -ಅಲಾಭಗಳ ದೃಷ್ಟಿ ಇಲ್ಲ. ವಚನ ಪಾಲನೆ ಅಂದರೆ ಪರಮ ಕರ್ತವ್ಯ. ಮುನಿಗಳ ಮನ ವಚನ ಕಾಯಗಳು ಒಂದೇ ಇರುತ್ತದೆ. ಮನಸ್ಯೇಕ, ವಚಸ್ಯೇಕ, ಕರ್ಮಣ್ಯೇಕ, ಮಹಾತ್ಮನಃ ಎಂದು ಹೇಳಿರುವ ಮಾತು ಮುನಿಗಳಿಗೇ ಅನ್ವಯಿಸುತ್ತದೆ. ಸಣ್ಣದಿರಲಿ ದೊಡ್ಡದಿರಲಿ, ಲಾಭವಿರಲಿ ಹಾನಿಯಿರಲಿ ಅವರಂತೂ ಅದಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ನಿಶ್ಚಯಿಸಿದಂತೆ ಮಾತ್ರ ನಡೆಯಲು ಯೋಚಿಸುತ್ತಾರೆ. ಅವರು ತಮ್ಮ ಹಾಗೂ ಲೋಕ ಕಲ್ಯಾಣಗಳನ್ನು ಹೇಗೆ ಮಾಡುತ್ತಾರೆ ಎನ್ನುವುದು ಸನಿಹದಿಂದ ನೋಡಿದವರಿಗೆ ಮಾತ್ರ ಗೊತ್ತಾದೀತು. ಅವರು ರಾಗ-ದ್ವೇಷ ಕ್ರೋಧದಿಕಷಾಯಗಳಿಂದ ಕೂಡಿದ

ಜಗತ್ತಿನತ ಹೆಜ್ಜೆ ಹಾಕದೆ ಆತ್ಮೋನ್ನತಿಯ ಉನ್ನತ ಮಾರ್ಗದಲ್ಲಿ ನಡೆದು ಹೋಗುತ್ತಾರೆ. ಅವರು ಜೀವನ ಸಂಗ್ರಾಮದಿಂದ ಹೆದರಿ ಓಡಿಹೋಗುವವರು ಎಂದು ಕೆಲವರು ಟೀಕಿಸುತ್ತಾರೆ. ಇದೇ ಮಾತನ್ನು ಜವಾಹರ್‌ಲಾಲ್ ನೆಹರು ತಮ್ಮ ಡಿಸ್ಕವರಿ ಆಫ್ ಇಂಡಿಯಾ ಗ್ರಂಥ ಪು. ೮೩ರಲ್ಲಿ ಹೀಗೆ ಬರೆದಿದ್ದಾರೆ.

Buddhism and Jainism rather emphasised the obstention from life, running away from life.

ಬೌದ್ಧ ಮತ್ತು ಜೈನ ಧರ್ಮಗಳು ಜೀವನದಿಂದ ದೂರ ಇರುವುದರಿಂದ, ಜೀವನದಿಂದ ದೂರ ಓಡಲು ಒತ್ತು ಕೊಟ್ಟಿವೆ ಎಂದು ಬರಿದಿಟ್ಟದಾದರೆ. ಈ ಉದ್ಗಾರ ಜೈನ ಧರ್ಮಕ್ಕೆ ಸ್ವಲ್ಪವೂ ಅನ್ವಯಿಸುವುದಿಲ್ಲ. ಏಕೆಂದರೆ ಜೈನ ಶ್ರಾವಕರು ಲೌಕಿಕ ಜೀವನದಲ್ಲಿ ಯಥಾರ್ಥ ಹಾಗೂ ನ್ಯಾಯ ಪೂರ್ಣ ಪ್ರವೃತ್ತಿ ಹೊಂದಿರುತ್ತಾರೆ. ಸಮಾಜದ ಸಮೃದ್ಧಿ ಮತ್ತು ದೇಶ ಸೇವೆಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಾರೆ. ಆಧುನಿಕ ಸಮಾಜವಾದದ ಸದೃಢ ಬೆಳವಣಿಗೆ ವ್ರತ ನಿಷ್ಠ ಜೈನ ಶ್ರಾವಕರಿಂದಲೇ ಸಾಧ್ಯ ಎನ್ನುವುದು ಆಧುನಿಕ ಜಗತ್ತಿಗೆ ಗೊತ್ತಿಲ್ಲ. ಪಂಚಾಣು ವ್ರತಗಳನ್ನು ಪಾಲಿಸಬಲ್ಲ ಒಬ್ಬ ಶ್ರಾವಕ ಯಾವುದೇ ಕ್ರಿಮಿನಲ್ ಮತ್ತು ಸಿವಿಲ್ ಕಾಯಿದೆಗೆ ಸಿಗುವುದಿಲ್ಲ ಎನ್ನುವ ಮಾತನ್ನು ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸಮಾಜದ ರಚನೆ, ಬೆಳವಣಿಗೆ, ಸಮೃದ್ಧಿಗೆ ಜೈನ ಶ್ರಾವಕರು ಬಹು ಮುಖ್ಯ ಘಟಕ. ಅವರು ಜೀವನದಿಂದ ಹೇಗೆ ಓಡಿ ಹೋಗುತ್ತಾರೆ ?

ಈ ಮಾತು ಜೈನ ಮುನಿಗಳಿಗೂ ಅನ್ವಯಿಸಲಾರದು. ಜೈನ ಮುನಿಗಳ ಪ್ರವೃತ್ತಿ ಯಥಾರ್ಥ ಜೀವನದತ್ತವಂತೂ ಇದ್ದೇ ಇದೆ. ಮೋಹಿ ಜಗತ್ತಿನ ದೃಷ್ಟಿಯಿಂದ ಅವರ ಜೀವನ ನಿರ್ವಹಣೆ ನಡೆಯುತ್ತಿಲ್ಲ ಎನ್ನುವ ದೋಷ ದೃಷ್ಟಿಯಿಂದ ಅವರು ಜೀವನದಿಂದ ಓಡಿ ಹೋಗುತ್ತಾರೆ ಎಂದು ತೀರ್ಮಾನಕ್ಕೆ ಬರಲಾಗದು. ಸತ್ಯ ಧರ್ಮಗಳ ಅಡಿಗಲ್ಲ ಮೇಲೆ ನಿಂತ ಬದುಕು ಮಾತ್ರ ಯಥಾರ್ಥ ಬದುಕು. ವಿಷಯ-ಕಷಾಯಗಳ ಪೂರ್ತಿಗಾಗಿ ಬದುಕುವುದು, ಅದು ಬದುಕಲ್ಲ ಕೇವಲ ಬಡಿದಾಟ-ಹೋರಾಟ. ಅಂತವರು ತಮ್ಮ ಇಚ್ಛೆ ಪೂರ್ತಿಯಾಗದಿದ್ದಾಗ ವಿಷ ಕುಡಿದೋ ನೇಣು ಹಾಕಿಕೊಂಡೋ ಸತ್ತು ಜೀವನದಿಂದ ಓಡಿಹೋಗುತ್ತಾರೆ. ಅಹಿಂಸೆ-ಅಪರಿಗ್ರಹಗಳ ಅಡಿಗಲ್ಲ ಮೇಲೆ ನಿಂತು ಜಗತ್ತನ್ನು ಸುಖೀ ಮತ್ತು ಸಮೃದ್ಧಿ ಸಮಾಜದತ್ತ ಕೊಂಡೊಯ್ಯುವವರು ಜೀವನದಿಂದ ಓಡುವವರಲ್ಲ. ಜೈನ ಮುನಿಗಳು ಮೋಹಿಗಳು ಭಾವಿಸುವ ಮೋಹಮಯ ಪ್ರಪಂಚದಿಂದ ಓಡಿಹೋಗುವುದೇನೋ

ನಿಜ. ಈ ಜಗತ್ತಿನ ಮುಖ್ಯ ಲಕ್ಷ್ಯನಶ್ವರವಾದ ಭೋಗಗಳು. ಇಂದ್ರಿಯ ಭೋಗಗಳಿಗಾಗಿ ಬಾಯ್ಬಿಡುತ್ತಾ ಜೀವಿಗಳು ಭವ ಭವಗಳಲ್ಲೂ ಜೂಜು ಕುದುರೆಯಂತೆ ಓಡುತ್ತವೆ. ಅನಂತ ಶರೀರಗಳನ್ನು ತೊಟ್ಟು ಕೆದಕಿ ಕೆದಕಿ ನೋಡಿವೆ. ಲೋಕಾಕಾಶದ ಸಮಸ್ತ ಪ್ರದೇಶಗಳಲ್ಲೂ ಇಣುಕಿ ಇಣುಕಿ ನೋಡಿವೆ. ಅಣು ಅಣು ಕಣ ಕಣಗಳಲ್ಲಿ ಒಳ ಹೊಕ್ಕು ನೋಡಿವೆ. ಭೋಗಗಳಲ್ಲಿ ತೃಪ್ತಿ ಸಿಕ್ಕಿಲ್ಲ. ಶಾಶ್ವತ ಸುಖ ಪ್ರಾಪ್ತ ವಾಗಿಲ್ಲ. ಅವುಗಳ ಈ ಭ್ರಮೆಯನ್ನು ಬಿಡಿಸಿ ಅವುಗಳನ್ನು ಶಾಶ್ವತ ಅಚ್ಯುತಾನಂತ ಸುಖದತ್ತ ಮಾರ್ಗದರ್ಶನ ಮಾಡುವವರು ಮುನಿಗಳು. ಅವರು ಸುಖದ ಮೂಲವನ್ನು ತಿಳಿದಿದ್ದಾರೆ. ದುಃಖದ ಬೇರನ್ನು ಕಿತ್ತು ಹಾಕಿದ್ದಾರೆ. ಶಾಶ್ವತ ಸುಖ ಕೊಡುವ ಬದುಕಿನಲ್ಲಿ ಲಿಪ್ತರಾಗಿದ್ದಾರೆ. ಅಶಾಶ್ವತ ಇಂದ್ರಿಯ ಭೋಗಗಳಿಗೆ ಬೆನ್ನು ಹಾಕಿದ್ದಾರೆ. ಅವರ ಮುಖ್ಯ ಲಕ್ಷ್ಯ ಶರೀರ ಪೋಷಣೆಯಲ್ಲ. ಇಂದ್ರಿಯ ಭೋಗಗಳಲ್ಲ. ಸಂಸಾರಿಕ ಆಮೋದ ಪ್ರಮೋದಗಳಲ್ಲ. ಲೌಕಿಕ ಜೀವನದ ಬೇಕು-ಬೇಡಗಳ ಸಂತೆಯ ಚಿಂತೆಗಳಲ್ಲ. ಸಂಯೋಗ-ವಿಯೋಗಗಳ ಸುಂಟರಗಾಳಿಗೆ ಸಿಕ್ಕ ಸಂಕಟದ ಬಾಳಲ್ಲ. ಆತ್ಮನಿಗೆ ಅಂಟಿದ ಮೋಹಮಾಯೆ ರಾಗ-ದ್ವೇಷಗಳ ಕೊಳೆಯನ್ನು ತೊಳೆದು ಪೂರ್ಣ ಪವಿತ್ರ ಸರ್ವಸ್ವತಂತ್ರ ಬದುಕು ಅವರದು. ಯಾವ ಜಡಮಯ ಜೀವನವನ್ನು ಇಂದ್ರಿಯ ಲೋಲುಪಿಗಳು ಬಯುಸುತ್ತಾರೋ ಅಂತಹ ಬಾಳನ್ನು ಮುನಿಗಳು ಮೃತ್ಯುವಿನಂತೆ ತಿಳಿಯುತ್ತಾರೆ. ಮೋಹ ಪೂರ್ಣ ಬದುಕಿನಲ್ಲಿ ಆತ್ಮ ಎಂದೋ ಮೃತವಾಗಿ ಹೋಗಿರುತ್ತಾನೆ. ವಿಷಯ ವಾಸನೆಗಳಲ್ಲಿ ಮುಳುಗುವುದನ್ನು ಮುನಿಗಳು ನರಕ ವಾಸಕ್ಕಿಂತಲೂ ಭೀಷಣವನ್ನಾಗಿ ತಿಳಿಯುತ್ತಾರೆ. ಅವರು ಸಮಸ್ತ ಇಂದ್ರಿಯ ಕಾಮನೆಗಳ ದಮನ ಮಾಡಿ ಆತ್ಮಾರಾಧನೆಯಲ್ಲಿ ಸಂಲಗ್ನರಾಗಿರುತ್ತಾರೆ. ಈ ಮಹಾನ್ ಸಾಧನೆಗಾಗಿ ಅವರು ಬಾಹ್ಯ ಜಗತ್ತಿನ ಬದುಕಿನಿಂದ ಸದಾ ನಿರ್ಲಿಪ್ತರಾಗಿರುತ್ತಾರೆ. ಇಂದಿನ ಜಗತ್ತು ವಾಸ್ತವಿಕವಾಗಿ ಜ್ವಾಲಾಮುಖಿಯ ಮೇಲೆ ಕೂತಿರುವಂತಿದೆ. ಅತಿ ಲುಬ್ಧ ಭೋಗಕಾಂಕ್ಷೆಯಿಂದ ನಾನಾ ದುಷ್ಕಟಗಳಿಂದ ನಾನಾ ಭಯಂಕರ ರೋಗಗಳು ಎಂದು ಜ್ವಾಲಾಮುಖಿಯಂತೆ ಸ್ಫೋಟಗೊಳ್ಳುವವೋ ಯಾರು ಬಲ್ಲರು ? ಇಂತಹ ಭಯಂಕರ ಅಪಾಯದಿಂದ ದೂರವಿರುವ ಶಿಸ್ತು ಬದ್ಧ ವಿಚಾರ ಬದ್ಧ ಶುದ್ಧ ಜೀವನ ನಡೆಸುವುದು ಜೀವನದಿಂದ ಓಡಿದಂತಾಗುವುದೇ ? ಮುನಿಗಳು ಜೀವನದ ಸರ್ವ ಅಪಾಯದ ದಾರಿಯನ್ನು ತೊರೆದು ಇಹ ಮತ್ತು ಪರಗಳ ಶ್ರೇಯಸ್ಸನ್ನು ಕೊಡುವ ಮಾರ್ಗದಲ್ಲಿ ಹೋಗುತ್ತಾರೆ. ಮತ್ತು ಅನ್ಯರಿಗೂ ಆ ಮಾರ್ಗದಲ್ಲಿ ಹೋಗಲು ಮಾರ್ಗದರ್ಶನ ಮಾಡುತ್ತಾರೆ. ಅವರೆಂತಹ ಪರಮ ಉಪಕಾರಿಗಳು ! ಶರೀರ ಮೋಹದಿಂದ ಮೂರ್ಛೆಗೊಂಡಿರುವ ಜೀವಕ್ಕೆ ಆತ್ಮ ಜಾಗೃತಿ ದಿವ್ಯ ಔಷಧಿ ಕೊಡುತ್ತಾರೆ. ಅದನ್ನು ಸ್ವಸ್ಥಗೊಳಿಸುತ್ತಾರೆ.

ಶ್ರಾವಕರು ವಾಸನಾ ವಿಜೇತ ಸಂಸ್ಕೃತಿಯ ಆಧಾರ ಸ್ತಂಭ ಎಂದು ಭಾವಿಸಲ್ಪಟ್ಟಿದ್ದಾರೆ. ಎಷ್ಟೆಷ್ಟು ವಾಸನೆಯ ವಿಜಯವಾಗುತ್ತದೋ ಅಷ್ಟಷ್ಟು ಆತ್ಮವಿಕಾಶವಾಗುತ್ತದೆ. ಜೈನ ಮುನಿಗಳು ಪರಪದಾರ್ಥಗಳ ತ್ಯಾಗ ಮಾಡಿರುತ್ತಾರೆ. ಆ ವಸ್ತುಗಳ ಬಗ್ಗೆ ಹೃದಯದಲ್ಲಿ ನೆಟ್ಟಿರುವ ಆಸೆಯ ಬೀಜಗಳನ್ನು ಕಿರಿದು ಮಾಡುವುದೇ ಆತ್ಮನನ್ನು ಹಿರಿದು ಮಾಡುವ ಸಾಧನ ಎಂದು ರವೀಂದ್ರನಾಥ ಟಾಗೋರ್ ಹೇಳಿದ್ದಾರೆ. ಪಾಶ್ಚಾತ್ತರು ಸಾವಿನೊಡನೆ ರಾಜಿ ಮಾಡಿಕೊಳ್ಳಬಲ್ಲರು. ಆದರೆ ವಾಸನೆಗಳನ್ನು ಕಿರಿದು ಮಾಡಿಕೊಳ್ಳಲು ಒಪ್ಪುವುದಿಲ್ಲ. ವಾಸನೆಗೆ ವಶವಾಗಿ ಆತ್ಮನನ್ನು ದುರ್ಗತಿಯಿಂದ ರಕ್ಷಿಸಲು ಅವರು ಒಪ್ಪುವುದಿಲ್ಲ. ವಾಸನೆಯ ವಿಜಯಕ್ಕಾಗಿ ಮುನಿಗಳು ಚಳಿ-ಮಳೆ ಶೀತೋಷ್ಣಗಳನ್ನೂ ಲೆಕ್ಕಿಸುವುದಿಲ್ಲ. ಆದರೆ ವಿಷಯ ವಾಸನೆಗೆ ಸಿಕ್ಕ ಮೋಹಿ ಜೀವ ಜೀವನದ ವೈಪರೀತ್ಯಕ್ಕೆ ಬೆದರುತ್ತದೆ. ಆದ್ದರಿಂದ ವಿಷಯ ವಾಸನಾ ದೃಷ್ಟಿಯುಳ್ಳವರಿಗೆ ಮುನಿಯ ಜೀವನ ವಿಚಿತ್ರವಾಗಿ ತೋರುತ್ತದೆ. ಜಡತ್ವವಾಗಿ ತೋರುತ್ತದೆ. ಜೀವನದಿಂದ ಓಡಿಹೋದಂತೆ ಭಾಸವಾಗುತ್ತದೆ.

ಮುನಿಗಳ ಸನಿಹದಲ್ಲಿದ್ದು ನಿರೀಕ್ಷಿಸಿದರೆ ಅವರ ಜೀವನ ಎಷ್ಟು ಕ್ರಮಬದ್ಧ ಎಷ್ಟು ಸುಸಂಬದ್ಧ ಎನ್ನುವುದು ತಿಳಿದೀತು. ಅವರು ಒಂದು ಕ್ಷಣವನ್ನೂ ಅಪವ್ಯಯ ಮಾಡುವುದಿಲ್ಲ. ನಿದ್ರೆಯಲ್ಲೂ ಹೆಚ್ಚು ವೇಳೆ ಕಳೆಯಲು ಇಷ್ಟಪಡುವುದಿಲ್ಲ. ಆತ್ಮ ಕಲ್ಯಾಣದಲ್ಲಿ ಲಭ್ಯವಾದ ಪ್ರತಿಕ್ಷಣಗಳನ್ನು ಉಪಯೋಗಿಸಿಕೊಳ್ಳಲು ನಿದ್ರಾ ವಿಜಯ ತಪಸ್ಸನ್ನು ಆಚರಿಸುತ್ತಾರೆ. ಕ್ರೋಧಾದಿಕಷಾಯಗಳ ಬೇರನ್ನು ಕಿತ್ತು ಹಾಕುತ್ತಾರೆ. ಪೂಜ್ಯಶ್ರೀಯವರು ಇಂತಹ ನಿದ್ರಾವಿಜಯ ತಪಸ್ಸನ್ನು ಆಚರಿಸುತ್ತಿದ್ದರು. ಅವರ ಆತ್ಮ ತಿಂಗಳ ಬೆಳಕಂತೆ ಥಳಥಳಿಸುತ್ತಿತ್ತು.

ಒಂದು ದಿನ ಸೆಪ್ಟೆಂಬರ್ ೬,೧೯೫೫ರಂದು ಸುಪ್ರಭಾತ ಸಮಯದಲ್ಲಿ ಒಂದು ಪ್ರಶ್ನೆ ಹಾಕಿದೆ

"ಮಹರಾಜ್ !ಪ್ರತಿದಿನ ನೀವು ಎಷ್ಟು ಗಂಟೆ ಜಪ ಮಾಡುತ್ತೀರಿ ?"

ಅವರು -"ರಾತ್ರಿ ಒಂದು ಗಂಟೆಯಿಂದ ಏಳುಗಂಟೆವರೆಗೆ, ಮಧ್ಯಾಹ್ನ ಎರಡುಗಂಟೆ ಕಾಲ ಹಾಗೂ ಸಾಯಂಕಾಲ ಎರಡು ಗಂಟೆ ಜಪ ಮಾಡುತ್ತೇವೆ." ಅವರ ಜೀವನದ ಒಂದೊಂದು ಕ್ಷಣಗಳೂ ಹೇಗೆ ಸದುಪಯೋಗವಾಗುತ್ತದೆ ಎಂದು ಇದರಿಂದ ತಿಳಿದು ಬರುತ್ತದೆ. ಸೂರ್ಯ ಕಲಂಕಪೂರ್ಣ ಎಂದು ಹೇಳುವುದು ಮತ್ತು ಮುನಿಗಳು ಜೀವನದಿಂದ ಓಡಿಹೋಗುತ್ತಾರೆ ಎಂದು ಹೇಳುವುದು ಎರಡೂ ಒಂದೇ. ಅವರು ಓಡಿ ಹೋಗುವುದೇನೋ ನಿಜ. ಜೀವನರಂಗದಿಂದ ಅಲ್ಲ. ಮೃತ್ಯುವಿನಿಂದ

ಅಮರತ್ವದ ಕಡೆಗೆ, ದುಃಖದಿಂದ ಸುಖದ ಕಡೆಗೆ, ಅಜ್ಞಾನದಿಂದ ಜ್ಞಾನದ ಕಡೆಗೆ ಓಡಿ ಹೋಗುತ್ತಾರೆ. ಆದ್ದರಿಂದ ಅದನ್ನು ಹೀಗೆ ಹೇಳಬಹುದು. It is not escape from life; but escape from death, ignorance and morality.

ಜ್ಯೋತಿರ್ಮಯ ಮಾರ್ಗ

ಉಪನಿಶತ್ ನಲ್ಲಿ ಒಂದು ಪ್ರಾರ್ಥನೆ ಬಂದಿದೆ

"ತಮಸೋಮಾ ಜ್ಯೋತಿರ್ಗಮಯಃ ಮೃತ್ಯೋರ್ಮಾ ಅಮೃತಮ್ ಗಮಯಾ" ಕತ್ತಲೆಯಿಂದ ಬೆಳಕಿನತ್ತ, ಮೃತ್ಯುವಿನಿಂದ ಅಮರತ್ವದತ್ತ ನನಗೆ ಮಾರ್ಗದರ್ಶನ ಪ್ರಾಪ್ತವಾಗಲಿ. ಈ ಮಾರ್ಗದ ಸರ್ವಾಂಗೀಣ ಪ್ರಾಪ್ತಿ ಕೇವಲ ಅಹಿಂಸಾ ಧರ್ಮಪಾಲನೆಯಿಂದ ಮಾತ್ರ ಸಾಧ್ಯ. ಎಲ್ಲಿಯವರೆಗೆ ಸಂಪೂರ್ಣ ಸಣ್ಣ ದೊಡ್ಡ ಸಮಸ್ತ ಜೀವಿಗಳನ್ನು ಕೋಮಲ ಅನುಕಂಪ ಭಾವಗಳಿಂದ ರಕ್ಷಿಸುವ ವಿಚಾರ ಜಾಗೃತವಾಗುವುದಿಲ್ಲವೋ ಅಲ್ಲಿಯವರೆಗೆ ಕತ್ತಲೆಯಿಂದ ಬೆಳಕಿನತ್ತ, ಮೃತ್ಯುವಿನಿಂದ ಅಮರತ್ವದತ್ತ ಜೀವಿಯ ಗಮನ ಆಗಲಾರದು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಬದುಕನ್ನು ಶೋಧ ಮಾಡಿಕೊಳ್ಳಬೇಕಾಗಿದೆ. ಎಲ್ಲಿಯವರೆಗೆ ಈ ಅಂತರ್ಯ ಪ್ರಜ್ಞೆ ಮೂಡುವುದಿಲ್ಲವೋ ಅಲ್ಲಿಯವರೆಗೆ ಅಹಿಂಸಾ ರೂಪಿ ಪರಮೌಷಧ ಅಂತವರಿಗೆ ಕಹಿಯಾಗಿಯೇ ಕಾಣುತ್ತದೆ. ಜ್ವರ ಪೀಡಿತರಿಗೆ ಹಾಲೂ ಹಿಡಿಸದಂತೆ ಹೀನ ಸಂಸ್ಕಾರಿ ಜನಗಳಿಗೆ ಕಲ್ಯಾಣ ಪ್ರದಮಾರ್ಗ-ದುರ್ಮಾರ್ಗದಂತೆ ಕಾಣುತ್ತದೆ. ಇಂದ್ರಿಯ ಭೋಗಗಳೇ ಸಾರಸರ್ವಸ್ವವಾಗಿ ಕಾಣುವ ಜನಗಳಿಗೆ ಮುನಿಧರ್ಮದ ಜ್ಯೋತಿರ್ಮಯ ಮಾರ್ಗ ಅಪಥ್ಯವಾಗುತ್ತದೆ. ಶ್ರಮಣ ಜೀವನದ ಚರ್ಯೆಯಿಂದ ಯಾವ ಹಿಂಸಾದಿ ಮಹಾ ಪಾಪಗಳ ಪರಿತ್ಯಾಗವಾಗುತ್ತದೋ, ಅದರಿಂದ ಉಂಟಾಗುವ ನೈತಿಕ ಸ್ತರದ ಸಮುನ್ನತಿಯನ್ನು ಯಾವ ರಾಜ ಶಾಸನದಿಂದಲೂ ಸಾಧಿಸಲಾಗುವುದಿಲ್ಲ. ರಾಜಶಾಸನ ಮತ್ತು ರಾಜದಂಡದ ಭೀತಿಯು ಅಂತಃಕರಣ ಅಥವ ಮನೋವೃತ್ತಿಯನ್ನು ಎಂದೂ ಬದಲು ಮಾಡಲು ಸಾಧ್ಯವಿಲ್ಲ. ಆದರೆ ಆ ಮಹಾಯೋಗಿಗಳ ಪರಿಶುದ್ಧ ಜೀವನದ ವೀಕ್ಷಣೆ ಮತ್ತು ಉಪದೇಶಗಳು ಅಂತರಂಗಕ್ಕೆ ಹೊಕ್ಕು ಶಾಶ್ವತ ಪರಿವರ್ತನೆ ಮಾಡಬಲ್ಲವು. ಶ್ರಮಣರ ಆದೇಶ ಮತ್ತು ಉಪದೇಶದಿಂದಲೇ ಅದೆಷ್ಟೋ ಲೋಕ ಕಲ್ಯಾಣ ಕೆಲಸಗಳು ಆಗಿ ಹೋಗಿವೆ. ಅವರ ಆಶೀರ್ವಾದದಿಂದ ಅದೆಷ್ಟೋ ಸಾಮ್ರಾಜ್ಯಗಳು ಹುಟ್ಟಿ ಧರ್ಮದಿಂದ ಭೂತಲವನ್ನು ಆಳಿವೆ. ಸಾರಾಂಶವೇನೆಂದರೆ ಒಬ್ಬ ಮುನಿ ಮಹಾತ್ಮನ ಉಪದೇಶದಿಂದ ವ್ಯಕ್ತಿಗಳ

ಜೀವನಕ್ರಮ ಕ್ರಮಬದ್ಧಗೊಳ್ಳುತ್ತದೆ. ಆದ್ದರಿಂದ ಸಮಾಜ ಶುಚಿಗೊಳಿಸಲ್ಪಡುತ್ತದೆ. ಸುಸಂಸ್ಕೃತಿ ನೆಲೆಗೊಳ್ಳುತ್ತದೆ. ಇದೇ ಜಗತ್ಕಲ್ಯಾಣದ ದಾರಿ. ಆದ್ದರಿಂದ ಅವರನ್ನು ಹೇಡಿಗಳಂತೆ ಚಿತ್ರಿಸಿ ಜೀವನದಿಂದ ಓಡಿಹೋಗುವವರು ಎಂದು ಹೇಳುವುದು ಎಂತಹ ಅಮಂಗಳಕಾರಿ ?

ಲಾತೂರಿನಲ್ಲಿ

ತಮ್ಮ ನಿಶ್ಚಯಾನುಸಾರ ಸಂಘವು ಗುಂಜ್ಯೋಟಿಯಿಂದ ಲಾತೂರಿಗೆ ಪ್ರಸ್ಥಾನ ಮಾಡಿತು. ಅಲ್ಲಿ ಸೇತುವಾಳ ಸಮಾಜದ ಗದ್ದುಗೆ ಇದೆ. ಅಲ್ಲಿಯ ಭಟ್ಟಾರಕರು ವಿಶಾಲ ಕೀರ್ತಿಗಳು ಅವರು ಆಚಾರ್ಯಶ್ರೀಯವರಿಗೆ ಪ್ರಣಾಮ ಮಾಡಿ ಸಂಘಪತಿಯನ್ನು ಗೌರವಿಸಿದರು ಅಲ್ಲಿ ಸಂಘಕ್ಕೆ ಯಾವುದೇ ಅಡೆ ತಡೆಗಳಾಗಲಿಲ್ಲ.

ಕಾರಾಂಜಾದ ಧಾರ್ಮಿಕ ಮಂಡಳಿ ಪಂಡಿತ ದೇವಕೀನಂದನ, ವ್ಯಾಖ್ಯಾನ ವಾಚಸ್ಪತಿಯವರ ನೇತೃತ್ವದಲ್ಲಿ ಕಾರಂಜಾದಲ್ಲಿ ವಿಹರಿಸಲು ಪೂಜ್ಯಶ್ರೀಯವರಲ್ಲಿ ವಿನಮ್ರ ವಿನಂತಿ ಮಾಡಿತು. ಕಾರಣಾಂತರದಿಂದ ಆ ಪ್ರಾರ್ಥನೆ ಸ್ವೀಕರಿಸಲಿಲ್ಲ. ಅಲ್ಲಿಂದ ಸಂಘ ಹಲವು ಸ್ಥಾನಗಳನ್ನೂ ಸ್ಪರ್ಶಿಸುತ್ತ ನಾಗಪುರದತ್ತ ಹೊರಟಿತು.

ನಾಗಪುರದಲ್ಲಿ ಸಂಘ

ಸನ್ ೧೯೩೮ರಲ್ಲಿ ಮುನಿತ್ರಯರೊಂದಿಗೆ ಪೂಜ್ಯಶ್ರೀಯವರು ನಾಗಪುರ ಸೇರಿದರು. ಸ್ವಾಗತದ ಉತ್ಸವವು ಸುಮಾರು ಮೂರು ಮೈಲು ಉದ್ದವಾಗಿತ್ತು. ಈ ಉತ್ಸವದಲ್ಲಿ ಛತ್ರ ಚಾಮರ, ಪಾಲಕಿ ಕಲಶ ಮುಂತಾದ ವಸ್ತುಗಳಿದ್ದವು. ನಾಗಪುರದ ನಿವಾಸಿಗಳು ಮಾತ್ರವೇ ಅಲ್ಲದೆ, ಆಸುಪಾಸಿನ ಗ್ರಾಮೀಣ ಜನತೆ, ಅಧಿಕಾರಿಗಳು, ವಣಿಕರು ಮುಂತಾದ ಬಹು ಸಂಖ್ಯೆಯ ಜನ ಪೂಜ್ಯಶ್ರೀಯವರ ದರ್ಶನ ಪಡೆದು ಧನ್ಯತೆ ಪ್ರಾಪ್ತಿ ಮಾಡಿಕೊಳ್ಳುತಿತ್ತರು.

ಶಾಂತಿನಗರದಲ್ಲಿ ನಿವಾಸ

ಅವರ್ಣನೀಯ ಶೋಭೆಯಿಂದ ಸ್ವಾಗತ ನೀಡಲಾಯಿತು. ಶಾಂತಿನಗರದಲ್ಲಿ ೮-೧೦ ಸಾವಿರ ಜೈನರ ವಸತಿ ಇದೆ. ಸಂಘದ ಮೂರು ದಿನಗಳ ವಾಸ್ತವ್ಯದಿಂದ

ಶಾಂತಿನಗರ ಜೀವಂತ ನಗರದಂತೆ ಕಂಗೊಳಿಸಿತು. ಧರ್ಮದ ಅಮೃತಗಂಗೆಯೇ ಅಲ್ಲಿ ಹರಿಯಿತು. ಮಹಾಭಾರತದಲ್ಲಿ ಹೀಗೆ ಹೇಳಿದೆ.

"ನಾಗ ನರೇಶ ಶ್ರಮಣರ ಉಪಾಸನಕನಾಗಿದ್ದನು. ನಾಗ ಕುಲೀನ ರಾಜ ತಕ್ಷನು ನಗ್ನ ಶ್ರಮಣನಾಗಿ ಹೋದನು" ದಿಗಂಬರ ಮುನಿಗಳ ಬಗ್ಗೆ ನಾಗಪುರ ನಿವಾಸಗಳ ಭಕ್ತಿ ಪುರಾಣ ಕಥಾನುಸಾರವಿತ್ತು. ನಾಗಪುರದ ಇಲ್‌ವಾರ್ ಬಜಾರ್, ಸರಾಫ್ ಬಜಾರ್ ಮೂರು ದಿನಗಳವರೆಗೆ ಮುಚ್ಚಿಹೋಗಿದ್ದವು. ಯಥಾರ್ಥವಾಗಿ ಹೇಳುವುದಾದರೆ ಸಜೀವ ರತ್ನತ್ರಯ ಮೂರ್ತಿಯ ದರ್ಶನದಿಂದ ನಿರ್ಜೀವ ರತ್ನಗಳು ಆಕರ್ಷಣೆ ಕಳೆದುಕೊಂಡಿದ್ದವು. ರತ್ನಪಡಿ ವ್ಯಾಪಾರಿಗಳು ನಿರ್ಜೀವ ರತ್ನಗಳ ವ್ಯಾಪಾರ ತ್ಯಜಿಸಿ ರತ್ನತ್ರಯ ವ್ಯಾಪಾರ ಆರಂಭಿಸಲು ಪೂಜ್ಯಶ್ರೀಯವರ ಚರಣ ದರ್ಶನದಲ್ಲಿ ಜೇನು ಹುಳುಗಳಂತೆ ಒತ್ತೊತ್ತಾಗಿ ಸೇರಿಹೋಗಿದ್ದರು. ಇವರಿಂದಾಗಿ ಪೇಟೆ ಬೀದಿ ಬಿಕೋ ಎನ್ನುನ್ನುತ್ತಿತ್ತು.

ಧರ್ಮ ಪುರುಷಾರ್ಥ

ಪೂಜ್ಯಶ್ರೀಯವರಿಂದ ಸ್ಮರಣೀಯ ಉಪದೇಶಗಳಾದವು. ಯಾರ ಜೀವನ ಸ್ವಯಂ ಧರ್ಮ ಪುರುಷಾರ್ಥದಿಂದ ಸಂಪೂರ್ಣ ಪರ್ಯಾಪ್ತವಾಗಿದೆಯೋ ಅಂತವರು ಮಾತ್ರ ಧರ್ಮದ ಒಳಹೊರಗನ್ನು ಅಧಿಕಾರವಾಣಿಯಿಂದ ವರ್ಣಿಸಬಲ್ಲರು. ಪಾಪಚರಣೆಯಲ್ಲಿ ಮುಳುಗಿದ ಬುದ್ಧಿ ಜೀವಿಗಳು ಮಾಡುವ ವ್ಯಾಖ್ಯಾನ ಹೃದಯದ ಆಳದಿಂದ ಹೊರಡುವುದಲ್ಲ. ಅಂತವರ ವಾಣಿಯಲ್ಲಿ ಜನಗಳ ಹೃದಯವನ್ನು ತಟ್ಟುವ ಶಕ್ತಿ ಇರುವುದಿಲ್ಲ. ಸ್ವಯಂ ತಮ್ಮನ್ನು ತಾವು ತಿದ್ದಿಕೊಳ್ಳಲಾರದ ಪಂಡಿತರ ಮಾತು ಬೇರೆಯವರಿಗೆ ಹಾಸ್ಯಾಸ್ಪದದಂತೆ ಕಾಣಬಹುದು.

ಅವರು ಹೇಳಿದರು: "ಹಿಂಸಾದಿ ಪಾಪಾಚರಣೆಗಳನ್ನು ತೊರೆಯುವುದೇ ಧರ್ಮವಾಗಿದೆ. ಅದರ ಹೊರತು ಈ ವಿಶ್ವದಲ್ಲಿ ಎಂದೂ ಶಾಂತಿ ನೆಲೆಸಲಾರದು. ಆ ಧರ್ಮದ ಲೋಪವಾದರೆ ಸುಖ ಶಾಂತಿಗಳ ಲೋಪವು ಆಗುತ್ತದೆ. ಧರ್ಮದ ಮೂಲ ಸಕಲ ಜೀವಿಗಳಲ್ಲಿ ದಯೆ ಆಗಿದೆ. ಧರ್ಮವನ್ನು ಮರೆಯುವವರು ಎಂದೂ ಶಾಂತಿ ಹೊಂದಲಾರರು. ಅಹಿಂಸಾ ಧರ್ಮ ಪಾಲನೆಯಿಂದ ಸಣ್ಣ ಸಣ್ಣ ಜೀವಗಳೂ ಸುಖ ಪ್ರಾಪ್ತಿ ಮಾಡಿಕೊಂಡಿರುವ ಪ್ರಸಂಗಗಳು ಶಾಸ್ತ್ರದಲ್ಲಿ ವರ್ಣಿಸಲ್ಪಟ್ಟಿವೆ. ಆದ್ದರಿಂದ ಅಹಿಂಸಾ ಧರ್ಮದ ಯಥಾಶಕ್ತಿ ಪಾಲನೆಗಾಗಿ ಪ್ರತಿಯೊಬ್ಬರೂ ಪ್ರತಿಜ್ಞೆ

ಕೈ ಕೊಳ್ಳಬೇಕಾಗಿದೆ. ಸಮತಾ ಭಾವ ಜೈನ ಧರ್ಮದ ಮೂಲ ಮಂತ್ರವಾಗಿದೆ. ಜಿನೇಂದ್ರ ವಾಣಿಯಂತೆ ನಡೆದರೆ ಕಲ್ಯಾಣವಾದೀತು. ಶಕ್ತಿಗೆ ತಕ್ಕಷ್ಟು ತ್ಯಾಗ ಮಾಡಿರಿ. ವಿಷಯ ಕಷಾಯಗಳಿಂದ ಮನಸ್ಸನ್ನು ಶುಚಿಗೊಳಿಸಿರಿ. ಇದೇ ಸ್ವ ಮತ್ತು ಪರಕಲ್ಯಾಣದ ಮಾರ್ಗ" ಜೈನ ಧರ್ಮ ವಿಶ್ವಕುಟುಂಬಿ ಧರ್ಮ ಎನ್ನುವುದನ್ನು ತಿಳಿಸುತ್ತಾ ಹೀಗೆ ಹೇಳಿದರು.

"ದಯಾಪೂರ್ಣ ಅಂತಃಕರಣವುಳ್ಳವನೇ ಜೈನ. ಜೈನಜಾತಿ ಒಂದು ಜಾತಿಯೇ ಅಲ್ಲ. ಜೈನರು ಜೈನ ಧರ್ಮದ ಉಪಾಸಕರು. ಜೈನ ಧರ್ಮ ಒಂದು ಧರ್ಮ. ಧರ್ಮದ ಬಗ್ಗೆ ಅನೇಕ ಪರಿಭಾಷೆಗಳು ಹೇಳಲ್ಪಟ್ಟಿವೆ.

ಸ್ವಾಮಿ ಕಾರ್ತಿಕೇಯಾನುಪ್ರೇಕ್ಷೆಯಲ್ಲಿ ಹೇಳಿದೆ

"ದಮ್ಮೋ ವತ್ಥು ಸಹಾವ್ಯೋ ಕಮಾದಿ ಬಾವ್ಯೋದಯಹವೇಹೋ ದಮ್ಮೋ
ರಯಣತ್ತಯಂಚ ದಮ್ಮೋ ಜೀವಣಂ ರಕ್ಖಣಂ ದಮ್ಮೋ ॥

"ವಸ್ತು ಸ್ವಭಾವ ಧರ್ಮ. ಉತ್ತಮ ದಶಲಕ್ಷಣ ಭಾವಗಳು ಧರ್ಮ ರತ್ನತ್ರಯ ಸ್ವರೂಪ ಧರ್ಮ. ಜೀವ ದಯಾಭಾವ ಧರ್ಮ. ಹೀಗೆ ಧರ್ಮದ ಸ್ವರೂಪವನ್ನು ಭಿನ್ನ ಭಿನ್ನವಾಗಿ ಹೇಳಿದ್ದರೂ ಅದರ ಮೂಲ ಮಾತ್ರ ದಯೆ ದಮ, ಕ್ಷಮೆ, ಶಾಂತಿ ಇತ್ಯಾದಿಗಳಾಗಿರುತ್ತದೆ. ಜೈನ ಧರ್ಮ ಒಂದು ವರ್ಗ, ಒಂದು ಪಂಗಡದ ಧರ್ಮವಲ್ಲ. ಸಕಲ ಜೀವರಾಶಿಗಳ ಧರ್ಮ. ಏಕೆಂದರೆ ಅದು ಜೀವಾತ್ಮನ ಧರ್ಮ. ಆದ್ದರಿಂದ ಜೈನಧರ್ಮಧಾರಣೆ ಮಾಡಲು ಸರ್ವರಿಗೂ ಸ್ವಾಗತವಿದೆ. ಚಾಂಡಾಲ ದೀವರಾದಿಗಳೂ ಈ ಧರ್ಮಧಾರಣೆ ಮಾಡಿಕೊಂಡು ಸ್ವರ್ಗಕ್ಕೆ ಹೋದ ಉದಾಹರಣೆಗಳುಂಟು. ಆದರೆ ಜೈನ ಧರ್ಮದಲ್ಲಿ ಸ್ವರ್ಗಕ್ಕೂ ಯಾವ ಬೆಲೆಯಿಲ್ಲ. ಬೆಲೆ ಇರುವುದು ಕೇವಲ ಮೋಕ್ಷಕ್ಕೆ. ಈ ಧರ್ಮದ ದೆಶೆಯಿಂದ ಚಾಂಡಾಲಾದಿಗಳೂ ಕಲ್ಯಾಣ ಮಾಡಿಕೊಂಡಿದ್ದಾರೆ. ಜೈನ ಧರ್ಮದ ದೆಶೆಯಿಂದ ದುಃಖಿಗಳ ದುಃಖ ದೂರವಾಗುತ್ತದೆ."

ಪೂಜ್ಯಶ್ರೀಯವರ ಉಪದೇಶದಿಂದ ಜನಗಳ ಮಾನಸ್ಸು ಮೋಡರಹಿತ ಆಕಾಶದಂತೆ ಶುಭ್ರವಾಯಿತು. ಎಷ್ಟೋ ಜನ ಶಕ್ತ್ಯಾನುಸಾರ ವ್ರತಗಳನ್ನು ಸ್ವೀಕರಿಸಿದರು.

ಶಂಕೆ

ಧರ್ಮದ ದೆಶೆಯಿಂದ ಜೀವನಿಗೆ ಸುಖ ಪ್ರಾಪ್ತಿಯಾಗುವುದೆಂದು ಅವರು ಹೇಳುತ್ತಿದ್ದರು. ಆಗ ನನ್ನಲ್ಲಿ ಒಂದು ಶಂಕೆ ಮೂಡಿತು. ಅವರಲ್ಲಿ ಕೇಳಿಯೇ ಬಿಟ್ಟೆ.

"ಮಹಾರಾಜ್ ! ಈ ಧರ್ಮದ ದೆಶೆಯಿಂದ ನಿಮಗೆ ಬಹಳ ಕಷ್ಟ ಉಂಟಾಗಿದೆ. ಹೀಗಿದ್ದೂ ಧರ್ಮದಿಂದ ಸುಖ ಉಂಟಾಗುವುದು ಎನ್ನುವ ನಿಮ್ಮ ಮಾತು ಎಷ್ಟರಮಟ್ಟಿಗೆ ನಿಜ ?"

ಅವರು ನನ್ನತ್ತ ಹೊರಳಿ ನಿಮ್ಮ ಅಭಿಪ್ರಾಯವೇನು ಸ್ಪಷ್ಟವಾಗಿ ತಿಳಿಸಿ ಎಂದರು.

ನಾನು ಹೇಳಿದೆ: "ಮಹಾರಾಜ್ ! ಈ ಜೈನ ಧರ್ಮ ನಿಮಗೆ ಗೃಹ, ವಸ್ತ್ರ ವೈಭವ ತ್ಯಾಗ ಮಾಡಿಸಿತು. ಶ್ರೀಮಂತ ಕುಟುಂಬದ ಮುಖ್ಯ ಪುರುಷರಾಗಿದ್ದರೂ ನಿಮ್ಮ ಹತ್ತಿರ ಈಗ ಯಾವ ವೈಭವವೂ ಇಲ್ಲ. ಅಂತಹ ಸಾಮಾಗ್ರಿಗಳಿಂದ ನೀವು ಶಾರೀರಿಕ ಕಷ್ಟ ನಿವಾರಿಸಿಕೊಳ್ಳಬಹುದಿತ್ತು. ಈ ಜೈನ ಧರ್ಮದ ದೆಶೆಯಿಂದ ನೀವು ಎಂಟು ಹತ್ತು ದಿವಸಗಳವರೆಗೆ ಉಪವಾಸ ಇರಬೇಕಾಗಿ ಬಂತು. ಈ ಧರ್ಮದ ದೆಶೆಯಿಂದಲೇ ನೀವು ದಂಶಕ ಮಶಕ ಬಾಧೆ ಸಹಿಸಬೇಕಾಯಿತು. ಒಂದು ವೇಳೆ ನೀವು ಈ ಧರ್ಮಧಾರಣೆ ಮಾಡದೆ ಹೋಗಿದ್ದರೆ ಸಮಸ್ತ ರೀತಿಯಿಂದಲೂ ಸುಖಿಗಳಾಗಿರಬಹುದಿತ್ತು."

ಸಮಾಧಾನ

ಪೂಜ್ಯಶ್ರೀಯವರು ಮುಗುಳ್ನಗುತ್ತಾ ಹೀಗೆಂದರು "ಅರೆ ! ಈ ಧರ್ಮ ನಮಗೆ ಕಷ್ಟಕೊಟ್ಟಿದೆಯೆಂದು ಯಾರು ಹೇಳಿದರು. ಈ ಧರ್ಮ ನಮಗೆ ಅವರ್ಣನೀಯ ನಿರಾಕುಲತೆ ಕೊಟ್ಟಿದೆ. ಆದ್ದರಿಂದ ನಮಗೆ ಬಹಳ ದೊಡ್ಡ ಶಾಂತಿ ಸಿಕ್ಕಿದೆ. ಧನ, ವೈಭವ, ಅಧಿಕಾರ, ಅಂತಸ್ತು ಮುಂತಾದ ಬಾಹ್ಯ ಪರಿಗ್ರಹಗಳಿಂದ ಸುಖ ಸಿಗುತ್ತದೆ ಎನ್ನುವುದು ನಿಮ್ಮ ಭ್ರಮೆ. ಅವುಗಳ ತ್ಯಾಗದಿಂದಲೇ ನಿಜವಾದ ಶಾಂತಿ ಸಿಗುತ್ತದೆ. ಪೂರ್ವದಲ್ಲಿ ಬಂಧಿಸಲ್ಪಟ್ಟಿರುವ ಕರ್ಮಗಳ ನಿರ್ಜರೆಗಾಗಿ ನಾವು ಆಗಾಗ್ಗೆ ಉಪವಾಸ ಮಾಡುತ್ತಿರುತ್ತೇವೆ. ಅಗ್ನಿಯ ತಾಪವಿಲ್ಲದೆ ಹೇಗೆ ಸುವರ್ಣ ಶುದ್ಧಿಯಾಗುವುದಿಲ್ಲವೋ ಹಾಗೆಯೇ ಉಪವಾಸ ಪೂರ್ವಕ ತಪಶ್ಚರ್ಯೆ ಹೊರತು ಪೂರ್ವ ಕರ್ಮ ಸಂವರೆ ನಿರ್ಜರೆಗಳು ಆಗುವುದಿಲ್ಲ. ಕಷ್ಟಗಳ ಸಹನೆಯಿಂದ

ಪೂರ್ವಾರ್ಜಿತ ಕರ್ಮಗಳು ನಿರ್ಜರೆಯಾಗಿ ಹೋಗುತ್ತವೆ. ಜೈನ ಧರ್ಮ ನಮಗೆ ದುಃಖಕೊಟ್ಟಿದೆ ಎನ್ನುವುದು ನಿಮ್ಮ ಭ್ರಮೆ" ಮತ್ತೆ ಹೇಳಿದರು.

"ಆತ್ಮ ಸುಖಕ್ಕಾಗಿ ಕರ್ಮಬಂಧ ತಡೆಯಬೇಕು. ಕರ್ಮಗಳ ಸಂವರೆಗಾಗಿ ಚಾರಿತ್ರಪಾಲನೆ ಮಾಡಿ ಎಂದು ಭಗವಂತನು ಹೇಳಿದ್ದಾನೆ. ಪೂರ್ವದಲ್ಲಿ ಬಂಧಿಸಲ್ಪಟ್ಟ ಕರ್ಮಗಳನ್ನು ಅವಶ್ಯವಾಗಿ ನಾಶ ಮಾಡಬೇಕು. ಇದು ಋಣದ ಸಮಾನ. ಯಾವಾಗ ಜೀವ ಬಂಧ ಮಾಡಿಕೊಂಡಿತೋ ಋಣ ಕಟ್ಟಿಕೊಂಡಂತೆ. ಅದನ್ನು ತೀರಿಸಲೇ ಬೇಕು. ಕರ್ಮಫಲವನ್ನು ಸಮತಾಭಾವದಿಂದಲಾದರೂ ಭೋಗಿಸು, ಸಂಕ್ಲೇಶ ಪರಿಣಾಮದಿಂದಲಾದರೂ ಭೋಗಿಸು. ಭೋಗಿಸುವುದು ಅವಶ್ಯವಾಗಿದೆ. ಆದ್ದರಿಂದ ನಾವು ಕರ್ಮಗಳ ನಿರ್ಜರೆಗಾಗಿ ಕಾಯ ಕ್ಲೇಶ ತಪಸ್ಸು ಮಾಡುತ್ತೇವೆ. ಮೋಕ್ಷ ಪಾಹುಡದಲ್ಲಿ ಹೀಗೆ ಹೇಳಿದೆ.

ಧ್ರುವ ಸಿದ್ಧಿಸ್ತೀರ್ಥಂಕರಃ ಚತುರ್ಜ್ಞಾನಯುತಃ ಕರೋತಿ ತಪಶ್ಚರಣಂ
ಜ್ಞಾತ್ವಾ ಧ್ರುವಂ ಕುರ್ಯಾತ್ ತಪಶ್ಚರಣಂ ಜ್ಞಾನಯುಕ್ತಃ ಅಪಿ ।।೬೦।।

ನಿಶ್ಚಿತವಾಗಿಯೂ ಮುಕ್ತನಾಗಬಲ್ಲ ಮತ್ತು ನಾಲ್ಕು ಜ್ಞಾನಗಳನ್ನು ಧರಿಸಿದ ತೀರ್ಥಂಕರ ಪ್ರಭುವೂ ತಪಶ್ಚರಣೆ ಮಾಡುತ್ತಾರೆ. ಅದನ್ನು ತಿಳಿದಾದರೂ ಜ್ಞಾನಿಗಳು ತಪಶ್ಚರಣೆ ಕೈಗೊಳ್ಳಬೇಕು. ಬಾಹ್ಯ ತಪದ ಮೂಲಕ ಅಂತರಂಗ ತಪಗಳ ಸಾಧ್ಯತೆ ಉಂಟಾಗುತ್ತದೆ. ತೀರ್ಥಂಕರ ಭಗವಾನರು ಬಾಹ್ಯ ಅಭ್ಯಂತರ ತಪಗಳನ್ನು ಮಾಡುತ್ತಾರೆ.

ಶಾಂತಿ ಮತ್ತು ತ್ಯಾಗಿ

ಮಹಾವ್ರತ ಪಾಲನೆಯಿಂದ ಅವರ್ಣನೀಯ ಆನಂದ ಉಂಟಾಗುತ್ತದೆ. ಏಕೆಂದರೆ ಕುಟುಂಬ ಪರಿವಾರಾದಿ ಭಾರಿ ಪರಿಗ್ರಹಗಳ ಹೊರೆ ಇಳಿದುಹೋಗುವುದರಿಂದ ನಿಶ್ಚಿಂತೆ ಮೂಡುತ್ತದೆ. ಇದರ ಸತ್ಯತೆಯನ್ನು ತಿಳಿಯುವಂತಹ ಸಂದರ್ಭವೊಂದು ಸಹಜವಾಗಿ ಒದಗಿಬಂತು. ಸನ್ ೧೯೫೦ರಲ್ಲಿ ಒಬ್ಬ ಸ್ಥಾನಕವಾಸಿ ಸಾಧು ಮಹೋದಯ ಪೂಜ್ಯಶ್ರೀಯವರಲ್ಲಿ ಒಂದು ಪ್ರಶ್ನೆ ಹಾಕಿದ.

"ಮಹಾರಾಜ್ ! ಶಾಂತಿಯಾದರೂ ಇದೆಯೋ ?"

ಆಚಾರ್ಯಶ್ರೀಃ "ಶಾಂತಿ ಇಲ್ಲದ ಸಾಧುತ್ವ ಎಂತಹದ್ದು?"

ಶಾಂತಿಗಾಗಿಯೇ ಗೃಹ ಪರಿವಾರ ತ್ಯಜಿಸಬೇಕು. ಗೃಹ ತ್ಯಜಿಸಿ ಸನ್ಯಾಸಿಯಾಗಿಯೂ ಶಾಂತಿ ಸಿಗದಿದ್ದರೆ ಅದು ನಿಜವಾದ ಸನ್ಯಾಸ ಆಗುವುದಿಲ್ಲ. ಮತ್ತೊಬ್ಬ ವ್ಯಕ್ತಿ ಇನ್ನೊಂದು ಪ್ರಶ್ನೆ ಹಾಕಿದ.

"ಮಹರಾಜ್ ! ಜೈನ ಧರ್ಮ ಅತ್ಯಂತ ಕಠಿಣವೇಕೆ ? ಅದರಲ್ಲಿ ಸುಖ ಶಾಂತಿ ಕೊಡುವ ವಿಪುಲ ಸಾಮಗ್ರಿಗಳೇನೋ ಇವೆ."

ಅವರು: "ಜೈನ ಧರ್ಮ ಕಠಿಣವೇನೋ ನಿಜ. ಆದರೆ ಈಗ ಜನಗಳು ಐಹಿಕ ಭೋಗಗಳತ್ತ ವಾಲುತ್ತಿದ್ದಾರೆ. ಮೋಕ್ಷದ ಚಿಂತೆ ಯಾರಿಗೂ ಇಲ್ಲ. ಭೋಗಗಳ ಸರಳ ಮಾರ್ಗ ಎಲ್ಲರನ್ನೂ ಸುಲಭವಾಗಿ ಆಕರ್ಷಿಸುತ್ತದೆ. ಜೈನಧರ್ಮದ ಚಾರಿತ್ರ ಬಹಳ ನಿಷ್ಠುರ ಮತ್ತು ಕಠಿಣ. ಅನ್ಯ ಧರ್ಮದ ಸಾಧುಗಳು ಸ್ತ್ರೀಯರೊಡನೆಯೂ ಇರುತ್ತಾರೆ. ರಾತ್ರಿ ಊಟವನ್ನೂ ಮಾಡುತ್ತಾರೆ. ನೀರನ್ನೂ ಕುಡಿಯುತ್ತಾರೆ. ಮುನಿಗಳಂತೆ ಯಾರು ೪೬ ದೋಷರಹಿತ ಆಹಾರವನ್ನು ಒಮ್ಮೆ ನಿಂತುಕೊಂಡು ತೆಗೆದುಕೊಳ್ಳುತ್ತಾರೆ ? ಈ ಕಾರಣದಿಂದಲೇ ದಿಗಂಬರ ಜೈನ ಸಾಧುಗಳ ಸಂಖ್ಯೆ ಬಹಳ ಕಡಿಮೆ ಇದೆ. ದಿಗಂಬರ ಜೈನ ಮುನಿ ಪ್ರಾಣ ಹೋದರೂ ವ್ರತಗಳ ಮರ್ಯಾದೆ ಮೀರಲಾರ. ಉರಿ ಬಿಸಿಲಿನಲ್ಲಿ ಬಾಯಾರಿ ನಾಲಿಗೆ ಕಿತ್ತು ಬರುವಂತಾದರೂ ಶಾಂತಿಯಿಂದ ತೃಷಾ ಪರೀಷಹ ಸಹನೆ ಮಾಡುತ್ತಾನೆ. ಅವರು ಸಂಯಮವನ್ನು ಪೂರ್ಣರೂಪದಿಂದ ಪಾಲಿಸುತ್ತಾರೆ."

ಈ ಸಂಬಂಧವಾಗಿ ಸ್ವಾಮಿ ಸಮಂತಭದ್ರರು ಯುಕ್ತ್ಯಾನುಶಾಸನದಲ್ಲಿ ಹೀಗೆ ಹೇಳಿದ್ದಾರೆ.

"ಜಿನ ಶಾಸನವು ದಯೆ, ದಮ, ತ್ಯಾಗ, ಸಮಾಧಿಯಾದಿಗಳ ಪ್ರತಿಪಾದನೆಯಿಂದ ಅದ್ವಿತೀಯವಾಗಿದೆ. ಆದರೂ ಜಗತ್ತು ಅದರ ಪಾಲನೆಯನ್ನು ಏಕೆ ಮಾಡುತ್ತಿಲ್ಲವೋ." ಇದಕ್ಕೆ ಎರಡು ಕಾರಣಗಳಿವೆ. ಒಂದನೆಯ ಸಾಧಾರಣ ಕಾರಣ, ಕಾಲದ ಪ್ರತಿಕೂಲ ಪರಿಸ್ಥಿತಿ. ಎರಡನೆಯ ಅಸಾಧಾರಣ ಕಾರಣ, ದರ್ಶನ ಮೋಹನೀಯ ಕರ್ಮದ ತೀವ್ರೋದಯ. ಈ ಕಾಲದಲ್ಲಿ ಜೀವಗಳಲ್ಲಿ ಧರ್ಮ ಜಿಜ್ಞಾಸೆಯ ಅಭಾವವಿದೆ. ಈ ಕಾಲದಲ್ಲಿ ಸಮರ್ಥ ಪ್ರವಕ್ತರುಗಳಿಲ್ಲ. ಸಚ್ಚಾರಿತ್ರ ಸಂಪನ್ನ ತಪಸ್ವಿಗಳಿಲ್ಲ. ಜಿನವಾಣಿ ಸಮರ್ಥವಾಗಿದ್ದರೂ, ಅದನ್ನು ಉಪದೇಶಿಸುವ

ಸಮರ್ಥ ಶಾಸ್ತ್ರಗಳ ಅಭಾವ ಈ ಕಾಲದಲ್ಲಿ ಕಂಡುಬರುತ್ತಿದೆ. ಸಮಂತಭದ್ರರು ಈ ಕಾಲದ ಸ್ವಭಾವವನ್ನು ಒಂದು ಕಡೆ ಹೀಗೆ ಹೇಳಿದ್ದಾರೆ.

"ಕಾಲಃ ಕಲಿರ್ವಾ ಕಲುಷಾಶಯೊವಾ ಶ್ರೋತುಃ
ಪ್ರವಕ್ತುರ್ವಚನಾನಯೋವಾ ।।

ತ್ವಚ್ಛಾಸನೈಕಾಧಿಪತಿತ್ವ ಲಕ್ಷ್ಮೀ-ಪ್ರಭುತ್ವಾ ಶಕತೆ
ರಪವಾದಹೇತು ।।

"ಭಗವಾನ್ ! ನಿಮ್ಮ ಅನೇಕಾಂತ ರೂಪಿ ಸಿದ್ಧಾಂತದ ಪ್ರಭುತ್ವದ ಏಕಾಧಿಪತ್ಯಕ್ಕೆ ಅಪವಾದವೇ ಈ ಕಲಿಕಾಲ ! ಅಥವ ಶ್ರೋತೃಗಳ ಕಲುಷಿತ ಅಂತರಂಗದ ಕಾರಣವೇ ಅನೇಕಾಂತ ವಾದದ ವಿರುದ್ಧ ಕಥನವಾಗಿದೆ."

ಪಂಚಮಕಾಲದಲ್ಲಿ ಜನಗಳ ಮನಸ್ಸು ಕ್ರೋಧಾದಿಕಷಾಯಗಳಿಂದ ಸದಾ ಕಲುಷಿತವಾಗಿರುವುದರಿಂದ ಅನೇಕಾಂತ ಸಿದ್ಧಾಂತದ ವಿರುದ್ಧ ಕಥನ ಮಾಡುತ್ತಾರೆ. ಚಾರಿತ್ರಶೀಲ ನಿಪುಣ ಉಪದೇಶಕರು ಇಲ್ಲದಿರುವುದರಿಂದ ಅನೇಕಾಂತ ಸಿದ್ಧಾಂತ ಜನಗಳಿಂದ ದೂರ ಸರಿದಿದೆ.

ಈ ಸಂದರ್ಭದಲ್ಲಿ ಒಂದು ಮಾತು ನೆನಪಿಸಿಕೊಳ್ಳಬೇಕು. ಪಂಚಮ ಕಾಲದ ಅವಧಿ ೨೧ ಸಾವಿರ ವರ್ಷಗಳು. ಅದರಲ್ಲಿ ಸುಮಾರು ಎರಡುವರೆ ಸಾವಿರಕ್ಕಿಂತ ಸ್ವಲ್ಪ ಹೆಚ್ಚು ಕಾಲ ಈಗಾಗಲೇ ಗತಿಸಿ ಹೋಗಿದೆ. ಉಳಿದ ಕಾಲದಲ್ಲೂ ಜಿನಧರ್ಮ ಭರತಖಂಡದಲ್ಲಿ ವರ್ತಿಸುತ್ತದೆ. ಅಲ್ಲಿಯವರೆಗೆ ಧರ್ಮದ ಲೋಪ ಉಂಟಾಗುವುದಿಲ್ಲ. ಇದು ಸರ್ವಜ್ಞ ಭಗವಾನರ ವಾಣಿ. ಈಗ ಜಿನಧರ್ಮ ಮುಳುಗುವ ಸೂರ್ಯನಂತೆ ಮಂದ ಪ್ರಕಾಶ ಬೀರುತ್ತಾ ಹೋಗುತ್ತದೆ. ಆದರ ಅಲ್ಲೊಂದು ಇಲ್ಲೊಂದು ಸಮ್ಯಕ್ತ್ವಿ ಜೀವ ಸ್ವಪರ ಕಲ್ಯಾಣದ ಕಾರ್ಯಕವನ್ನು ಕೈಗೊಳ್ಳುತ್ತಾ ಹೋಗುತ್ತವೆ. ಸಫಲತೆಯಾಗಿದ್ದರೂ ದುಃಖಿಗಳಾಗುವುದಿಲ್ಲ.

ಶುಭ ಸಮಾಚಾರ

ಯಾವಾಗ ಧರ್ಮ ಪ್ರಭಾವನೆಯ ಚಂದ್ರಿಕೆ ಸಹಸ್ರ ಕಿರಣಗಳಿಂದ ನಾಗಪುರದ ನಿವಾಸಿಗಳನ್ನು ತಣಿಸುತ್ತಿತ್ತೊ, ಆಗ ಸಂಘಪತಿ ಸೇಠ್ ಪೂನಂ ಚಂದ್‌ರವರಿಗೆ ಅತ್ತ ಬೊಂಬಾಯಿನಿಂದ ಒಂದುಸಿಹಿ ಸುದ್ದಿ ತಂತಿ ಮೂಲಕ ಬಂದಿತು. ಆ ವರ್ಷ ಅವರಿಗೆ ಒಂದು ಲಕ್ಷ ನಿವ್ವಳ ಲಾಭ ಬಂದಿತ್ತು. ಸಂಘದ ಪ್ರತಿಯೊಬ್ಬರೂ ಬಹಳ

ಸಂತೋಷಗೊಂಡರು. ಇದು ೧೯೨೮ರ ಮಾತು. ಆಗ ರೂಪಾಯಿ ಮೌಲ್ಯ ಅತ್ಯಧಿಕವಿತ್ತು. ಈ ಸಮಾಚಾರ ಸಂಘಪತಿಗೆ ಬಹಳ ಹರ್ಷವನ್ನುಂಟು ಮಾಡಬೇಕಾದುದು ಸಹಜವಿತ್ತು. ಆದರೆ ಅವರ ಮನಸ್ಸಿನಲ್ಲಿ ಹರ್ಷಾತಿರೇಖದ ಗೆರೆಯೂ ಮೂಡಲಿಲ್ಲ. ತೃಷ್ಣೆಯ ಪೀಡೆಯೂ ಹುಟ್ಟಲಿಲ್ಲ. ಪೂಜ್ಯಶ್ರೀಯವರ ಸತ್ಸಂಗದಿಂದ ಅವರ ಭಾವನೆ ಬಹಳ ಉನ್ನತಕ್ಕೇರಿಸಲ್ಪಟ್ಟಿತ್ತು. ಲೌಕಿಕ ಲಾಭ-ಅಲಾಭಗಳಿಂದ ಮೇಲೇರಿ ಜಗತ್ತನ್ನು ಸ್ಥಿತಪ್ರಜ್ಞನಾಗಿ ನಿಂತು ನೋಡುವ ಭಾವ ಭೂಮಿಕೆ ಅವರಲ್ಲಿ ಚಿಗುರೊಡೆದಿತ್ತು. ಗುರುಪ್ರಸಾದದಿಂದ ಬಂದ ಈ ಹಣ ಗುರುಚರಣಗಳ ಸನ್ನಿಧಿಯಲ್ಲೇ ಉಪಯೋಗಿಸಿ ಬಿಡುವುದು ಒಳಿತು. ಶಿಖರಿಜಿಯಲ್ಲೇ ಆ ಮಹಾಪುರುಷನ ಸಮಕ್ಷಮ ಪಂಚಕಲ್ಯಾಣ ಪೂಜೆ ಈ ಹಣದಿಂದ ಮಾಡಿಸಿದರಾಯಿತು ಎಂದು ತಿರ್ಮಾನಿಸಿದರು. ಸಂಘ ಇನ್ನೆರಡು ತಿಂಗಳಲ್ಲಿ ತಲ್ಪುವ ನಿರೀಕ್ಷೆ ಇತ್ತು. ಅಷ್ಟರೊಳಗೇ ಪಂಚಕಲ್ಯಾಣದ ವ್ಯವಸ್ಥೆ ಮಾಡುವುದು ಕಠಿಣವಾಗಿ ತೋರುತ್ತಿತ್ತು.

ಪುಣ್ಯಾತ್ಮ ಜೀವಕ್ಕೆ ತನ್ನ ಸಂಕಲ್ಪದ ಪೂರ್ತಿಗೆ ಜಗತ್ತೇ ಪಣ ಕಟ್ಟಿ ನಿಲ್ಲುತ್ತದೆ. ಜವೇರಿ ಬಂಧುಗಳ ಪುಣ್ಯವೇ ಅಷ್ಟು ಅತಿಶಯವಾಗಿತ್ತು. ಮುನಿ ಮಹಾತ್ಮರ ಸೇವೆಯನ್ನು ತತ್ಪರವಾಗಿ ಅಹರ್ನಿಸಿ ಮಾಡಿದುದರ ಫಲವದು! ಜವೇರಿ ಪರಿವಾರ ಕೂಡಲೇ ಕಾರ್ಯಮಗ್ನವಾಯಿತು. ಸೋಲಾಪುರದ ಸೇಠ್ ರಾವ್ ಜಿ ಸಖಾರಾಮ್ ಜಿ ದೋಸಿಯವರೊಡನೆ ಈ ಬಗ್ಗೆ ಚರ್ಚೆ ನಡೆಸಲಾಯಿತು. ನಮ್ಮ ತಂದೆ ಸಿಂಘಾಯಿ ಕುಮಾರ್ ಸೇನ್‌ಜಿಯವರು ಗುರುದೇವನ ದರ್ಶನಕ್ಕೆ ಪರಿವಾರ ಸಮೇತ ಆಗಮಿಸಿದ್ದರು. ಅವರೊಡನೆ ಅಲ್ಪ ಕಾಲದಲ್ಲಿ ಈ ಬಹು ದೊಡ್ಡ ಕಾರ್ಯವನ್ನು ಹೇಗೆ ಸಫಲತಾಪೂರ್ವಕ ಮಾಡುವುದು ಎಂದು ಸಮಾಲೋಚಿಸಲಾಯಿತು. ದೀರ್ಘ ಪರಾಮರ್ಶೆಯ ನಂತರ ನನ್ನ ತಂದೆಯವರು ಮತ್ತು ಸಂಘಪತಿ ಇಬ್ಬರೂ ಸೇರಿ ಪಂಚಕಲ್ಯಾಣ ವ್ಯವಸ್ಥೆಯ ಬಗ್ಗೆ ಕಲಕತ್ತಾ ಜೈನ ಸಮಾಜದ ಸಹಯೋಗ ಪಡೆಯಲು ಹೊರಟರು. ಅಲ್ಲಿ ಪಂಚಕಲ್ಯಾಣದ ವ್ಯವಸ್ಥೆಯನ್ನು ಮಾಡಿ ವಾಪಾಸಾದರು. ಅಲ್ಲಿ ನಾನು ಆಗ ನ್ಯಾಯ ಶಾಸ್ತ್ರದ ಅಧ್ಯಯನ ಮಾಡುತ್ತಿದ್ದೆ. ಆಗಲೇ ಪಂಚಕಲ್ಯಾಣದ ಮಂಗಲಮಯ ಸಮಾಚಾರ ನನಗೆ ತಿಳಿದದ್ದು. ಆಗ ಭದ್ರ ಪರಿಣಾಮಿ ಸೇಠ್ ದಾಡಿಮ್ ಚಂದ್ ರವರ ಪರಿಚಯವೂ ಆಯಿತು.

ಕೂಡಲೇ ಪಂಚಕಲ್ಯಾಣದ ಸಿದ್ಧತೆಗಳು ಭರದಿಂದ ನಡೆಯತೊಡಗಿದವು. ಶಿವನಿಯ ಮಹಾ ದಾನವೀರ ಸ್ವರ್ಗೀಯ ಸೇಠ್ ಪೂರನ್ ಸಹಾರವರು ೧೯೦೯ರಲ್ಲಿ ಮುಕ್ತ ಹಸ್ತದಿಂದ ಒಂದು ಪಂಚ ಕಲ್ಯಾಣ ನಡೆಸಿದ್ದರು. ಆಗ ಲಕ್ಷಾಂತರ ನರ

ನಾರಿಯರು ಬಂದಿದ್ದರಂತೆ. ಅದರ ನಿಕಟ ಅನುಭವ ನಮ್ಮ ತಂದೆಗಿತ್ತು. ಆ ಅನುಭವ ಈಗ ಉಪಯೋಗಕ್ಕೆ ಬಂದಿತು.

ನಾಗಪುರ ಜನತೆ ಬಹಳ ಸಂಭ್ರಮ ಮತ್ತು ಪ್ರೇಮಪೂರ್ವಕ ರಜತ ಪತ್ರದಲ್ಲಿ ಸಂಸ್ಕೃತ ಭಾಷೆಯಲ್ಲಿ ಉತ್ಕೀರ್ಣಗೊಳಿಸಿದ ಸನ್ಮಾನ ಪತ್ರವನ್ನು ಸಂಘಪತಿಗೆ ಹಾರ್ದಿಕವಾಗಿ ಸಮರ್ಪಿಸಿತು.

ಮೂರು ದಿನಗಳವರೆಗೆ ಧರ್ಮಾಮೃತವರ್ಷ ಸುರಿಸಿದ ಮುನಿಸಂಘ ಮುಂದಕ್ಕೆ ಮುನ್ನಡೆಯಿತು. ಅಲ್ಲಿಂದ ಬರಡಾರದ ಮೂಲಕ ಸರೋಲಿ ತಲ್ಪಿತು. ಅಲ್ಲಿಸೇತುವಾಲ ಸಮಾಜವಿದೆ. ಸಮಾಜದ ನರನಾರಿಯರು ಪೂಜ್ಯಶ್ರೀಯವರನ್ನು ದರ್ಶನ ಮಾಡಿ ಪರಮಾನಂದಗೊಂಡರು. ಹತ್ತು-ಹನ್ನೆರಡು ಸ್ತ್ರೀಯರು ಪುನರ್ವಿವಾಹ ಮಾಡಿಕೊಳ್ಳದಿರಲು ಪ್ರತಿಜ್ಞೆ ಕೈಗೊಂಡರು. ಆಗ ಪುನರ್ವಿವಾಹ ಪದ್ಧತಿ ಜಾರಿಯಲ್ಲಿತ್ತು.

ಪುನರ್ವಿವಾಹದಿಂದ ಜಾತಿ ಸಂಕರವಾಗಿ ಮೋಕ್ಷ ಮಾರ್ಗ ವಿಚ್ಛೇದಗೊಳ್ಳುತ್ತದೆ ಎಂದು ಪುನರ್ವಿವಾಹ ನಿಷೇಧಿಸಲಾಗಿದೆ. ಇದು ಆತ್ಮಕಲ್ಯಾಣದ ಅಪೇಕ್ಷೆ. ಈ ಅಪೇಕ್ಷೆಯ ನಿಷೇಧಕ್ಕೂ ಸಾಮಾಜಿಕ ಭಾವನೆಗೂ ಏನೇನೂ ಸಂಬಂಧವಿಲ್ಲ. ಸಾಮಾಜಿಕ ದೃಷ್ಟಿಕೋನವೇ ಬೇರೆ. ನೈತಿಕ ದೃಷ್ಟಿಕೋನವೇ ಬೇರೆ. ಸಾಮಾಜಿಕ ದೃಷ್ಟಿಕೋನ ವ್ಯಕ್ತಿಯ ರಕ್ಷಣೆ, ಶರೀರ ಪೋಷಣೆ, ನಿರಾತಂಕ ಜೀವನ ಇವುಗಳ ಕಡೆ ಲಕ್ಷ್ಯವಿಟ್ಟಿರುತ್ತದೆ. ಇವೆರಡರ ಅಂತರ ಬಹಳವಿರುವುದರಿಂದ ಸಮಾಜ ಸುಧಾರಕರು, ಸಮಾಜವಾದಿಗಳು ನೈತಿಕ ದೃಷ್ಟಿಕೋನವನ್ನು ವಿರೋಧಿಸುವುದುಂಟು. ಬಾಲ ವಿಧವೆ ಸಮಾಜದಲ್ಲಿ ಶೋಷಣೆಗೆ ಒಳಗಾಗುತ್ತಾಳೆ. ಇಂದ್ರಿಯ ಭೋಗಗಳಿಂದ ವಂಚಿತಳಾಗುತ್ತಾಳೆ. ಕಾಮುಕರ ಸಂಚಿಗೆ, ಆಕ್ರಮಣಕ್ಕೆ ಸದಾ ಬಲಿಯಾಗುತ್ತಾಳೆ. ಯೌವ್ವನದ ಕಾವಿನಿಂದ ಮೈ ಮರೆತು ಜಾರಿ ಸಮಾಜದ ನಿಂದೆಗೆ ಗುರಿಯಾಗುತ್ತಾಳೆ. ತನ್ನ ಆಸೆಗಳನ್ನು ಕೈಗೂಡಿಸಿಕೊಳ್ಳಲಾಗದೆ, ಅವುಗಳನ್ನು ಹತ್ತಿಕಲೂ ಆಗದೆ ಮಾನಸಿ ಒತ್ತಡದಿಂದ ಬಳಲುತ್ತಾಳೆ. ವಿಧವೆ ಎನ್ನುವ ಕಾರಣದಿಂದ ಸಮಾಜದ ಯಾವುದೇ ಮಂಗಳ ಕಾರ್ಯದಲ್ಲಿ ಭಾಗವಹಿಸಲು ಅವಕಾಶ ಕಳೆದುಕೊಂಡು ಅಸ್ಪೃಷ್ಯಳಂತೆ ದೂರವಿದ್ದು ಮೂಕವೇದನೆ ಅನುಭವಿಸುತ್ತಾಳೆ. ಅವಳು ಪ್ರತಿಕ್ಷಣವನ್ನೂ ಕಣ್ಣೀರಿನಲ್ಲೇ ಕಳೆಯಬೇಕಾಗುತ್ತದೆ. ಇದಕ್ಕೆ ಪರಿಹಾರ ಕಾನೂನಿನಲ್ಲಿಲ್ಲ. ಸಮಾಜದಲ್ಲೂ ಇಲ್ಲ. ಪುನರ್ವಿವಾಹವೇ ಇದಕ್ಕೆ ಪರಿಹಾರ ಎನ್ನುವುದು ಪುನರ್ವಿವಾಹ ಆಂದೋಳನದ ಸಿದ್ಧಾಂತ.

ಸಾಮಾಜಿಕ ದೃಷ್ಟಿಯಿಂದ ನೋಡಿದಾಗ ಇದು ಸರಿ ಎನಿಸುತ್ತದೆ. ಸಂಪ್ರದಾಯದ ದೃಷ್ಟಿಯಿಂದ ಇವೆಲ್ಲಾ ತೊಳ್ಳು ಎನ್ನಿಸುತ್ತದೆ. ಇವೆಲ್ಲಾ ಕಾರಣದಿಂದಲೇ ಹಿಂದೆ ಸತಿ ಸಹಗಮನ ಪದ್ಧತಿ ಇದ್ದಿರಬಹುದು. ಸ್ತ್ರೀ ಒಂದು ಶಕ್ತಿಯ ಕೇಂದ್ರ. ಸ್ತ್ರೀಯ ಶರೀರ ರಚನೆ ಪುರುಷನದಕ್ಕಿಂತ ಭಿನ್ನ. ಅದು ನಾನಾ ದೌರ್ಬಲ್ಯಗಳ ಆಗರ. ಇಷ್ಟಿದ್ದರೂ ಅವಳು ಅದನ್ನು ಸಹಿಸಬಲ್ಲಳು. ಇಂದ್ರಿಯ ಭೋಗದ ಆವೇಗ ಅವಳಲ್ಲಿ ಅತ್ಯಧಿಕ. ಆದರೂ ಅದನ್ನು ಕಡಿವಾಣ ಹಾಕಿ ನಿಯಂತ್ರಿಸಬಲ್ಲಳು. ಅವಳ ಸಂಯಮ ಸಹನೆಯನ್ನು ಅವಲ ಆತ್ಮಹಿತಕ್ಕೆ ಉಪಯೋಗಿಸಲು ಈ ಸಮಾಜ ಏಕೆ ಬಿಡುತ್ತಿಲ್ಲ? ಸ್ತ್ರೀಯನ್ನು ಇಂದ್ರಿಯ ಸುಖದ ಒಂದು ಆಟಿಕೆಯನ್ನಾಗಿ ಮಾಡುವುದು ಸಮಾಜ. ಸ್ತ್ರೀ ಒಬ್ಬ ವಿಧವೆ ಎನ್ನುವ ಒಂದು ಸಾಮಾನ್ಯ ವಿಚಾರದಿಂದ ಅವಳ ಸ್ವತಂತ್ರ ಹರಣ ಮಾಡಿ ನಾಲ್ಕು ಗೋಡೆಗಳ ನಡುವೆ ಅವಳನ್ನು ಖೈದಿಯನ್ನಾಗಿ ಮಾಡುವುದು ಸಮಾಜ. ಅವಳ ಮಾನಸಿಕ, ದೈಹಿಕ, ದೌರ್ಬಲ್ಯಗಳನ್ನು ದುರುಪಯೋಗಗೊಳಿಸಿಕೊಂಡು ಅವಳ ಭವಿಷ್ಯವನ್ನು ಹಾಳುಗೆಡುವುದು ಸಮಾಜ. ಗಂಡನನ್ನು ಕಳೆದುಕೊಂಡು ಮಾನಸಿಕ ಆಘಾತದಿಂದ ಜರ್ಝರಿತಳಾದ ಅವಳನ್ನು ಪುನರ್ವಿವಾಹದ ತೊಡಕಿಗೆ ಪುನಃ ಸಿಕ್ಕಿಸಿ ಅವಳಿಗೆ ಒಲ್ಲದ ಸಂಸಾರ ಮಾಡಲು ಹಚ್ಚುವುದು ಸಮಾಜ. ಒಮ್ಮೆ ತನ್ನ ಹೃದಯವನ್ನು ಒಬ್ಬನಿಗೆ ಅರ್ಪಿಸಿ ವಿಧವೆಯಾದ ಮೇಲೆ ಸ್ತ್ರೀಗೆ ಉಳಿಯುವುದು ಭಾರವಾದ ಬದುಕು ಮತ್ತು ಶೂನ್ಯವಾದ ಮನಸ್ಸು. ಬಾಳಿಗೊಂದು ಗಂಡು ಊರುಗೋಲಾಗಿ ಬೇಕೇ ಬೇಕು ಎನ್ನುವ ಒಂದೇ ಒಂದು ಬಾಹ್ಯ ದೃಷ್ಟಿಯಿಂದ ಮನಸ್ಸಿಲ್ಲದ ಮನಸ್ಸಿನಿಂದ ಅನ್ಯಪುರುಷನ ಕೈ ಹಿಡಿದ ಸ್ತ್ರೀ ಹಿಂದಿನ ಕಹಿ ಮರೆತು ನಗು ಹೂವು ಚೆಲ್ಲಬಲ್ಲಳೇ? ಹಿಂದಿನ ಸಿಹಿ ಸಂಸಾರದ ವಿಷಾದದ ಬಿಸಿ ಉಸಿರನ್ನು ಅಡಗಿಸಿಡಬಲ್ಲಳೆ? ನಾನು ವಿಧವೆ ಎನ್ನುವ ಹಿಂದಿನ ಗಾಯ ಮಾಸಿಯಾಗಿ ನವೀನ ಗಂಡನೆದುರು ತನ್ನ ಸತೀತ್ವ ತೋರಬಲ್ಲಳೇ? ಭಾರತದ ಅನಾದಿ ಸತ್ಪರಂಪರೆಯ ಮಣ್ಣಿನಲ್ಲಿ ಬೆಳೆದ ಯಾವುದೇ ಆಧುನಿಕ ನಾರಿಯಾದರೂ ಸುಖಿ ಎಂದು ಬಾಹ್ಯದಲ್ಲಿ ಎಷ್ಟೇ ಹೇಳಿಕೊಳ್ಳುತ್ತಿದ್ದರೂ, ಅವಳ ಆತ್ಮಸಾಕ್ಷಿ ಅವಳನ್ನು ಒಳಗೊಳಗೇ ಕೊಲ್ಲುತ್ತಿರುತ್ತದೆ. ಹಿಂದಿನ ಕಹಿ ನೆನಪನ್ನು ನೆನಸಿಕೊಂಡು ಏಕಾಂತದಲ್ಲಿ ಕಣ್ಣೀರು ಹಾಕುತ್ತಲೇ ಇರುತ್ತಾಳೆ. ಹಿಂದಿನದನ್ನು ಮರೆಯಲಾಗದೆ ಇಂದಿನ ಬಾಳಿಗೂ ಪೂರ್ಣ ಹೊಂದಿಕೊಳ್ಳಲಾಗದೆ ಇಬ್ಬಂದಿ ಜೀವನದ ಮಾನಸಿಕ ಒತ್ತಡಕ್ಕೆ ಅವಳು ಸಿಕ್ಕುತ್ತಾಳೆ.

ಈ ಎರಡು ಭಿನ್ನ ದೃಷ್ಟಿಯ ಮೇಲೆ ನಿಂತು ನೋಡಿದಾಗ ಈ ಸಮಸ್ಯೆಗೆ ಉತ್ತರ ಹೇಳಲು ಸಾಧ್ಯವಿಲ್ಲ. ಏಕೆಂದರೆ ಸಾಮಾಜಿಕ ಅನುಭವ ಈ ಎರಡೂ ಸಮಸ್ಯೆಗಳನ್ನು

ಸ್ಪರ್ಶಿಸುತ್ತದೆ. ಜೈನಧರ್ಮ ಎರಡೂ ವಾದಗಳ ಜಾಡನ್ನು ತೊರೆದು ಆಧ್ಯಾತ್ಮ ನಿಷೇಧ ಮಾಡುವುದು ಶುದ್ಧಾಂಗ ಆತ್ಮಹಿತದೃಷ್ಟಿ. ಸಾಮಾಜಿಕ ದೃಷ್ಟಿಕೋನವಾಗಲಿ, ಸಂಪ್ರದಾಯಿಕ ದೃಷ್ಟಿಕೋನವಾಗಲಿ ಅದು ಹೊಂದಿಲ್ಲ. ವ್ಯಕ್ತಿಗಳು ಬದಲಾಗಬಹುದು. ತನ್ಮೂಲಕ ಸಾಮಾಜಿಕ ಸಿದ್ಧಾಂತಗಳು ವ್ಯತ್ಯಾಸವಾಗಬಹುದು. ಆಗ ಪುನರ್ವಿವಾಹದ ಸಮಸ್ಯೆ ಬದಲಾದ ಸಮಾಜದಲ್ಲಿ ಬೇರೆ ಬೇರೆ ತರ್ಕ ಸಿದ್ಧಾಂತಗಳ ಜಗ್ಗಾಟಕ್ಕೆ ಒಳಗಾಗಬಹುದು. ಆದರೆ ಜೈನ ಧರ್ಮದ ಆಧ್ಯಾತ್ಮ ದೃಷ್ಟಿಕೋನ ಎಂದೆಂದೂ ಬದಲಾಗದ ವಸ್ತುನಿಷ್ಠ ದೃಷ್ಟಿಕೋನ. ಈ ಆಧ್ಯಾತ್ಮಿಕ ದೃಷ್ಟಿಕೋನ ಸಮಾಜಿಕ ಸಮಸ್ಯೆಗಳೂ ಒಳಗೊಂಡಂತೆ ಬಾಹ್ಯ ಅಭ್ಯಂತರ ಇವೆರಡರ ಹಿತ ಸಾಧಿಸಬಲ್ಲದು. ಆದರೆ ಸಾಮಾಜಿಕ ಸಿದ್ಧಾಂತ ಕ್ಷಣಿಕ ಬದುಕಿನ ಚೌಕಟ್ಟಿನಲ್ಲಿ ಮಾತ್ರ ಕ್ರಿಯಾಶೀಲವಾಗಿದೆ. ಆದರೆ ಅದು ಆತ್ಮಹಿತವನ್ನು ಬಲಿ ತೆಗೆದುಕೊಳ್ಳುತ್ತದೆ. ವಿಧವಾ ವಿವಾಹ ನಿಷೇಧ ಶಾಶ್ವತ ಚಿಕಿತ್ಸೆಯ ಒಂದು ಅಂಗವೆಂದು ಅಧ್ಯಾತ್ಮ ಭಾವಿಸುತ್ತದೆ. ವಿಧವೆಯಂತೂ ಪುನರ್ವಿವಾಹ ಮಾಡಿಕೊಳ್ಳಲಿ ಅಥವಾ ಹಾಗೇ ಇರಲಿ ಇವೆರಡೂ ಸ್ಥಿತಿಗಳಲ್ಲೂ ಒಂದು ವಿಧವಾದ ತಪ್ತಿತಸ್ಥ ಮಾನಸಿಕ ಭಾವ ಅವಳನ್ನು ಕೊಲ್ಲುತ್ತಲೇ ಇರುತ್ತದೆ. ಅವಳ ಅಂತರಂಗದ ನೋವನ್ನು ಯಾರು ಅರ್ಥ ಮಾಡಿಕೊಳ್ಳಬಲ್ಲರು? ಯಾರು ನಿವಾರಿಸಬಲ್ಲರು? ಅವಳ ಕಣ್ಣೀರು ಒರೆಸುವ ಶಕ್ತಿ ಇದ್ದರೆ ಅದು ಅಧ್ಯಾತ್ಮ ಭಾವಕ್ಕೆ ಮಾತ್ರ. ಒಂದು ವೇಳೆ ವಿಧವೆ ಭೌತಿಕ ಜೀವನದಿಂದ ಸರಿದು ಆಧ್ಯಾತ್ಮ ಸಾಧನೆಯತ್ತ ಹೊರಟಳೆಂದರೆ ನಾನಾ ರೀತಿಯ ಸಾಮಾಜಿಕ ಸಮಸ್ಯೆಗಳು ಒಮ್ಮೆಗೇ ಮಾಯವಾಗಿ ಬಿಡುತ್ತವೆ. ದಿಕ್ಕಿಲ್ಲದ ಒಂಟಿ ಹೆಣ್ಣು ಎನ್ನುವ ಸಮಾಜದ ಕೊಳಕು ಭಾವನೆ ಇಂಗಿ ಹೋಗುತ್ತದೆ. ಶುದ್ಧ ಚಾರಿತ್ರದ ದೆಶೆಯಿಂದ ಅವಳನ್ನು ಕಡೆಗಣಿಸುತ್ತಿದ್ದ ಸಮಾಜ ಪೂಜ್ಯತೆಯಿಂದ ಆದರಿಸುತ್ತದೆ. ಹೆಜ್ಜೆ ಹೆಜ್ಜೆಗೂ ಅಳುಕಿ ಬೆದರಿ ಬದುಕಬೇಕಾಗಿದ್ದ ಅವಳು ಸಮ್ಯಗ್ದರ್ಶನ ಜ್ಞಾನ ಚಾರಿತ್ರದ ಬಲದಿಂದ ನಿರ್ಭಯಳಾಗಿ ಬದುಕುತ್ತಾಳೆ. ಮಹಾನ್ ಶಾಂತಿಯನ್ನು ಹೊಂದಿ ಭವ್ಯ ಭವಿಷ್ಯದತ್ತ ಕಾಲಿಡುತ್ತಾಳೆ. ಅವಳ ವೈಧವ್ಯದ ನೋವನ್ನು ಧರ್ಮ ಗುಣಪಡಿಸುತ್ತದೆ. ಗಂಡ ಸತ್ತರೆ ಇಲ್ಲವೆ ದೀಕ್ಷೆಗೊಂಡರೆ, ಅಂತಹ ಸ್ತ್ರೀಯರು ಪುನರ್ವಿವಾಹ ಮಾಡಿಕೊಳ್ಳದೆ ಬ್ರಹ್ಮಚರ್ಯದಂತಹ ಮಹಾನ್ ವ್ರತ ಸ್ವೀಕರಿಸಿ ಆರ್ಜಿಕೆಯರಾಗಿ ಆತ್ಮಕಲ್ಯಾಣ ಮಾಡಿಕೊಂಡವರ ಕಥೆಗಳೆಷ್ಟು ಶಾಸ್ತ್ರದಲ್ಲಿ ಹೇಳಿಲ್ಲ? ಧರ್ಮಕ್ಕೆ ಶರಣಾದವರನ್ನು ಧರ್ಮವೇ ನಿಯಮ ಪೂರ್ವಕ ರಕ್ಷಿಸುತ್ತದೆ. ಆದರೆ ಭೋಗಲಾಲಸಿ ಸ್ತ್ರೀಯರನ್ನು ಭೋಗಲಂಪಟರ ಬಾಯಿನಿಂದ ಯಾರು ರಕ್ಷಿಸಿದ್ದಾರೆ. ಸಮಾಜವೇ? ಸಮಾಜಕ್ಕೆ ಒಳಿತು ಕೆಡುಕಿನ ಭಯವೇನಿಲ್ಲ. ಧರ್ಮವೇ? ಧರ್ಮಾಚರಣೆ ಮಾಡಿಯೇ ಇಲ್ಲ. ಧರ್ಮಾಚರಣೆಯಿಂದ ಬಂಧಿಸಲ್ಪಡುವ ಪುಣ್ಯವೇ ರಕ್ಷಕ. ಎಷ್ಟೋ ಬಾರಿ ತಂದೆಯೇ

ಮಗಳನ್ನು ದೃಷ್ಟಿಯಿಂದ ನೋಡಿಲ್ಲಲ್ಲವೇ? ಕಾರ್ತಿಕೇಯ ಮುನಿಯ ತಂದೆ ಮಗಳನ್ನೇ ಮೋಹಿಸಿ ಮದುವೆ ಮಾಡಿಕೊಂಡನಲ್ಲ? ಅವನು ಸ್ವಯಂ ರಾಜನಾಗಿದ್ದರಿಂದ ಅವನನ್ನು ಯಾರೂ ತಡೆಯದೆ ಹೋದರು. ಹೀಗಿದ್ದ ಮೇಲೆ ಅಬಲೆಯಾದ ಹೆಣ್ಣಿಗೆ ಸಮಾಜದಲ್ಲಿಹೇಗಿದ್ದರೂ ರಕ್ಷಣೆ ಎಲ್ಲಿದೆ? ಅವಳು ಸಮಾಜವನ್ನು ತೊರೆದು ಧರ್ಮಕ್ಕೆ ಶರಣಾದಾಗ ಅವಳನ್ನು ನಿಯಮ ಪೂರ್ವಕ ಧರ್ಮವೇ ರಕ್ಷಿಸುತ್ತದೆ. ಆಗ ಜಗತ್ತೇ ಮುನಿದರೂ ಅವಳನ್ನು ಏನೂ ಮಾಡದು. ಸ್ತ್ರೀ ವಿವಾಹಿತಳಾಗಿದ್ದರೇನು; ಅವಿವಾಹಿತಳಾಗಿದ್ದರೇನು; ವಿಧವೆಯಾಗಿದ್ದರೇನು, ಅವಳು ಈ ಸಮಾಜದಲ್ಲಿ ಎದುರಿಸುವ ಸಮಸ್ಯೆಗಳು ಕೆಲವು ಸಮಾನಾಂತರವಾಗಿವೆ. ಅವಳು ಯಾವುದಾದರೊಂದು ಸಮಸ್ಯೆಯ ಕುಣಿಕೆಗೆ ಬಿದ್ದು ಸಾಯಲೇ ಬೇಕಾಗುತ್ತದೆ. ಅದೇ ಹೆಣ್ಣು ಎಚ್ಚೆತ್ತು ಧರ್ಮಮಾರ್ಗದಲ್ಲಿ ನಡೆದರೆ ಬಾಳಿನ ಚಿತ್ರವೇ ಬೇರೆಯಾಗಿ ಹೋಗುತ್ತದೆ. ಅನಂತಮತಿಯ ಕಥೆ ಕೇಳಲಿಲ್ಲರೆ? ಅವಳನ್ನು ಅರಮನೆಯ ಕಾಮಿನಿಯಂತೆ ಕಂಡ ರಾಜನ ಗತಿ ಏನಾಯಿತು? ಸ್ತ್ರೀ ಎಚ್ಚೆತ್ತು ಧರ್ಮಕ್ಕೆ ಶರಣಾದಾಗ ರಾಜ ದಂಡವೂ ನಿರುಪಯೋಗಿಯಾಗುತ್ತದೆ. ಚಂದನೆಗೆ ತನ್ನ ಶೀಲದ ಬಗ್ಗೆ ಬಂದ ಬೆದರಿಕೆ ಏನು ಕಡಿಮೆಯೇ? ಚಂದನೆಯ ತಂದೆ ಚೇಟಕ ಸ್ವಯಂ ಶೂರರಾಜನಾಗಿದ್ದರೇನು? ಅವಳನ್ನು ರಕ್ಷಿಸಬಲ್ಲನಾಗಿದ್ದನೆ? ವಿದ್ಯಾಧರ ರಾಜನಿಂದ ಕಾಡು ಬೇಡನಿಂದ ಅವಳ ಶೀಲಕ್ಕೆ ಬಂದ ಅಪಾಯ ನಿವಾರಿಸಲು ಯಾರು ಮುಂದೆ ಬಂದರು? ಅವಳ ಧರ್ಮವೇ ಅವಳನ್ನು ಸಮರ್ಥವಾಗಿ ಕಾಪಾಡಿತು. ಒಂದು ಸೈನ್ಯ ವೀರಯೋಧರು ಸಾಧಿಸಲಾರದ್ದನ್ನು ಒಬ್ಬ ಏಕಾಂಗಿಯಾದ ಹೆಣ್ಣು ಧರ್ಮಕ್ಕೆ ಶರಣಾದಾಗ ಸಾಧಿಸಬಲ್ಲಳೆಂಬುದನ್ನು ಅನಂತ ಮತಿ, ಚಂದನೆಯರು ನಿರೂಪಿಸಿದರು. ಇವರಿಗೆ ಬಂದೊದಗಿದ ಆಪತ್ತು, ವಿಧವೆಯರಿಗೆ ಬರುವುದಕ್ಕಿಂತ ಕಡಿಮೆಯದೇನೂ ಆಗಿರಲಿಲ್ಲ. ಧರ್ಮದ ದೆಸೆಯಿಂದ ಆಪತ್ತಿನಿಂದ ಪಾರಾದರು. ಉಳಿದವರು ಮುಳುಗಿ ಹೋದರು. ನಳಕೂಬರನ ಹೆಂಡತಿ ಉಪರಂಬೆ ಸೌಂದರ್ಯದಲ್ಲಿ ಅಪ್ಸರೆಯಂತವಳು. ನಳಕೂಬರನಂತಹ ತರುಣ ಗಂಡನಿದ್ದರೂ ರಾವಣನನ್ನೂ ಕೂಡಲು ಬಯಸಿ ಪರಾಜಿತಳಾದಳು. ಆದರಿಂದ ಗಂಡ ಬಂದಿಯಾದ, ರಾಜ್ಯ ಪರಾಕ್ರಾಂತವಾಯಿತು. ಅವಳು ಲಜ್ಜೆಯಿಂದ ತಲೆ ತಗ್ಗಿಸುವಂತಾಯಿತು. ಶೀಲಗೆಟ್ಟರೆ ಬಂದೊದಗುವ ಆಪತ್ತಿನ ಕಥೆ ಇದು. ತನ್ನ ಗಂಡ ಇರುವಾಗ ಆಗಲಿ ಸತ್ತ ನಂತರವಾಗಲಿ ಅನ್ಯ ಪುರುಷನ್ನು ಅಪೇಕ್ಷಿಸುವುದು ಕುಲೀನ ಸ್ತ್ರೀಯರಿಗೆ ಶೋಭಿಸದ ಮಾತು. ಅದು ನಾನಾ ಆಪತ್ತುಗಳಿಗೆ ಆಹ್ವಾನ ಕೊಟ್ಟಂತೆ. ಈ ಪುರಾಣ ಕಥೆಗಳು ಆಧುನಿಕ ಜಗತ್ತಿಗೆ ಹೊಂದದ ಮಾತು ಎಂದು ಕೆಲವರು ಮೂಗು ಮುರಿಯಬಹುದು. ಎಷ್ಟೇ ಆಧುನಿಕತೆ ಬೆಳೆಯಲಿ ನಮ್ಮ ಸಂಸ್ಕೃತಿಯ ನಾಡಿ ನಮ್ಮಲ್ಲಿ

ಮಿಡಿಯುತ್ತಲೇ ಇರುತ್ತದೆ. ಅಂತರಂಗದಲ್ಲಿ ಅದು ನಮ್ಮನ್ನು ಕೊಲ್ಲುತ್ತಲೇ ಇರುತ್ತದೆ. ತಪ್ಪಿ ನಡೆದಾಗ ಅಂತರ್ವಾಣಿ ಮೊದಲು ಇರಿಯುತ್ತದೆ. ಅದನ್ನೇ ಅಶಾಂತಿ, ಮಾನಸಿಕ ಕ್ಷೋಭೆ ಎನ್ನುತ್ತಾರೆ. ಅನಂತ ಯಾತನೆಗೆ ಕಾರಣವಾದ ಆತ್ಮನ ರೋಗಕ್ಕೆ ಚಿಕಿತ್ಸೆ ಮಾಡಲು ಯೋಚಿಸದೆ ಶರೀರ ರಕ್ಷಣೆಯಲ್ಲಿ ತೊಡಗಿದರೇನಾದೀತು. ಶರೀರ ಮುಳುಗುವ ದೋಣಿ ಇದ್ದಂತೆ. ಅದನ್ನು ಕಡೆಗಣಿಸಿ ಏರಿದರೆ ಏನಾಗಬಹುದು? ಪುನರ್ವಿವಾಹದಿಂದ ಒಂದು ಹೆಣ್ಣಿಗೆ ಇಂದ್ರೀಯ ಭೋಗದ ಮತ್ತೊಂದು ಅವಕಾಶ ಕಲ್ಪಿಸಿ ಕೊಟ್ಟಂತಾಯಿತು. ಬದುಕಿಗೊಂದು ಶಾಶ್ವತ ಆಸರೆ ಸಿಕ್ಕಂತಾಯಿತು ಎಂದೇನೂ ಹೇಳಲಾಗದು. ಒಂದೆರಡು ಇಚ್ಛೆಗಳು ಕೈಗೂಡಿದರೂ ಇನ್ನುಳಿದ ಹಲವಾರು ಸಮಸ್ಯೆಗಳು ಅವಳನ್ನು ಪೀಡಿಸುತ್ತಲೇ ಇರುತ್ತವೆ. ಅವಳ ಮಕ್ಕಳನ್ನು ಎರಡನೆಯ ಗಂಡ ತನ್ನ ಮಕ್ಕಳಂತೆ ಒಪ್ಪಬಲ್ಲನೇ? ಕೈಗಳ ಬೆಡಿ ತಪ್ಪಿತು. ಆದರೆ ಕಾಲಿಗೆ ಬಿದ್ದಿತು ಎಂದಂತಾಯಿತು. ಪುನರ್ವಿವಾಹದಿಂದ ಹೊಸ ಗಂಡನಿಂದ ಮತ್ತೆ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಹೀಗೆ ಉದ್ಭವಿಸಬಹುದಾದ ನೂರಾರು ಸಾಮಾಜಿಕ ಸಮಸ್ಯೆಗಳನ್ನು ಆತ್ಮ ಜಾಗೃತಳಾದ ಸ್ತ್ರೀ ಸಹಜವಾಗಿ ಮೆಟ್ಟಿಹಾಕಿ ಸುಂದರ ಬದುಕಿನ ಹೊಸ ದಿಗಂತದತ್ತ ಶಾಂತವಾಗಿ ಹೆಜ್ಜೆ ಹಾಕಿ ನಡೆದು ಹೋಗುತ್ತಾಳೆ. ಕೇವಲ ಆತ್ಮ ಸ್ವಾತಂತ್ರದ ಅಪೇಕ್ಷೆಯಿಂದ ಮಾತಾಡುವುದಾದರೆ ವಿವಾಹವೇ . ಆತ್ಮನನ್ನು ಪರತಂತ್ರಗೊಳಿಸುವ ಬಂಧನ!

ಪೂಜ್ಯಶ್ರೀಯವರು ಪುನರ್ವಿವಾಹವನ್ನು ಎರಡು ದೃಷ್ಟಿಯಿಂದ ನಿಷೇಧಿಸಿದರು. ವರ್ಣಸಂಕರದಿಂದ ಮೋಕ್ಷ ಮಾರ್ಗದ ವಿಚ್ಛೇದ ಮತ್ತು ಆತ್ಮಕಲ್ಯಾಣದ ಅವಕಾಶದ ನಾಶ.

ಛತ್ತೀಸ್ ಘಡ್ ಪ್ರಾಂತ್ಯದ ಭಯಂಕರ ಕಾಡಿನಲ್ಲಿ ಸಂಘದ ವಿಹಾರವಾಯಿತು. ದೂರ ದೂರ ಗ್ರಾಮೀಣ ಜನರು ಮಹಾಪುರುಷನ ದರ್ಶನಕ್ಕೆ ಧಾವಿಸುತ್ತಿದ್ದರು. ಸಾವಿರಾರು ಜನರಿಗೆ ಮದ್ಯ, ಮಧು, ಮಾಂಸ ತ್ಯಾಗ ಮಾಡಿಸಿದರು. ಪಾಪ ಪ್ರವೃತ್ತಿಯ ಪರಿತ್ಯಾಗದಿಂದ ಆತ್ಮೋದ್ಧಾರವಾಗುತ್ತದೆ. ಕೆಲವರಂತೂ ಸುಂದರ ವೇಷ ಭೂಷಣಗಳು ರುಚಿ ರುಚಿಯಾದ ಊಟೋಪಚಾರಗಳು ಆತ್ಮೋತ್ಥಾನದ ಅಂಗವೆಂದು ಭಾವಿಸುತ್ತಾರೆ. ಇದೊಂದು ದೊಡ್ಡ ಭ್ರಮೆಯ ಮಾತು. ಆತ್ಮೋತ್ಕರ್ಷಕ್ಕೆ ಅಂತರಂಗ ವೃತ್ತಿಯ ಪರಿಮಾರ್ಜನೆಯ ಅಗತ್ಯವಿದೆ. ಬಡವರ ನಿಜವಾದ ಉದ್ಧಾರವೆಂದರೆ 'ಅವರ ಹಸಿದ ಹೊಟ್ಟೆಗೆ ರೊಟ್ಟಿ ಕೊಡುವುದರೊಡನೆ ಅವರನ್ನು ಪಾಪವೃತ್ತಿಯಿಂದ ಬಿಡಿಸುವುದೂ ಆಗಿದೆ ಎಂದು ಅವರು ಹೇಳುತ್ತಿದ್ದರು.

ಅರವಿಂದ ರಾಜನಂತಾಗ ಬೇಡಿ

ಈ ಸಂದರ್ಭದಲ್ಲಿ ಅರವಿಂದ ರಾಜನ ಸ್ಮರಣೆ ಬರುತ್ತದೆ. ವಿಜಯಾರ್ಧ ಪರ್ವತದಲ್ಲಿ ಅರವಿಂದನೆಂಬೊಬ್ಬ ರಾಜನಿದ್ದ. ಒಮ್ಮೆ ಅವನಿಗೆ ಭಯಂಕರ ದಾಹ ಜ್ವರ ಕಾಣಿಸಿಕೊಂಡಿತು. ಏನೆಲ್ಲಾ ಔಷದೋಪಚಾರ ಮಾಡಿದರೂ ಜ್ವರ ಪೀಡೆ ಹೆಚ್ಚುತ್ತಲೇ ಹೋಯಿತು. ಒಮ್ಮೆ ಎರಡು ಹಲ್ಲಿಗಳು ಕಚ್ಚಾಡುತ್ತಾ ಇರುವಾಗ ಒಂದು ತೊಟ್ಟು ರಕ್ತದ ಹನಿ ಅವನ ಮೈ ಮೇಲೆ ಬಿದ್ದಿತು. ಅದರಿಂದ ಅವನಿಗೆ ಸ್ವಲ್ಪ ದಾಹ ಶಾಂತಿ ಆದಂತೆ ಅನ್ನಿಸಿತು. ಅವನು ಕೂಡಲೇ ತನ್ನ ಮಗನನ್ನು ಕರೆದು ಅರಣ್ಯದ ಪ್ರಾಣಿಗಳನ್ನು ಕೊಂದು ಒಂದು ರಕ್ತದ ಹೊಂಡ ನಿರ್ಮಿಸಲು ಹೇಳಿದ. ರಾಜಕುಮಾರ ತಂದೆಯ ಆಜ್ಞೆಯಂತೆ ಅರಣ್ಯ ತಲ್ಪಿದಾಗ ಅವಧಿ ಜ್ಞಾನಿ ಮುನಿಗಳು ಅವನ ಪಾಪಾಚರಣೆಯ ಉದ್ಯಮ ತಡೆದು ನಿನ್ನ ತಂದೆ ಶೀಘ್ರ ಮರಣ ಹೊಂದುವನು. ನೀನೇಕೆ ವ್ಯರ್ಥ ಪಾಪ ಬಂಧ ಮಾಡಿಕೊಳ್ಳುವೆ ಎಂದು ಹೇಳುತ್ತಾರೆ. ಜಾಗ್ರತಗೊಂಡ ರಾಜಕುಮಾರ ಅರಗಿನ ಹೊಂಡ ತಯಾರಿಸುತ್ತಾನೆ. ಸಂತೋಷಗೊಂಡ ರಾಜ ಅದರಲ್ಲಿ ಇಳಿದು ಆ ನೀರನ್ನು ಬಾಯಲ್ಲಿ ಮುಕ್ಕಳಿಸಿ ಅದು ಅರಗಿನ ನೀರೆಂದು ತಿಳಿದು ಕೋಪಗೊಂಡು ರಾಜಕುಮಾರನನ್ನೇ ಕೊಲ್ಲಲು ಮೇಲೇರಿ ಬರುವಾಗ ಮುಗ್ಗರಿಸಿ ತನ್ನ ಕತ್ತಿಗೇ ಆಹುತಿಯಾಗಿ ಸತ್ತು ನರಕ ಸೇರುತ್ತಾನೆ.

ಈ ಕಥೆಯನ್ನು ಸ್ಮರಿಸಿಕೊಳ್ಳುತ್ತಾ ಅವರೆಂದರು

"ದೊಡ್ಡವರ ಆಜ್ಞೆ ಪಾಲಿಸುವುದು ಕರ್ತವ್ಯವಾಗಿದೆ. ಆದರೆ, ಅದು ಧರ್ಮಯುಕ್ತವಾಗಿರಬೇಕು. ಅಧರ್ಮಯುಕ್ತ ಆಜ್ಞೆಯನ್ನು ಉಲ್ಲಂಘಿಸಬೇಕು. ಆಜ್ಞಾಪಿಸುವವರು ದೊಡ್ಡವರಾದರೇನು, ಚಿಕ್ಕವರಾದರೇನು, ಜೀವಿಗಳಿಗೆ ಧರ್ಮವೇ ದೊಡ್ಡದು. ನಿಜವಾದ ಕಲ್ಯಾಣ ಪಾಪ ಪರಿತ್ಯಾಗದಲ್ಲಿದೆ".

ಅಲ್ಲಿಂದ ಸಂಘ ರಿಯಾಸತ್ ಗೆ ಬಂದಿತು. ರಿಯಾಸತ್ ನಿಂದ ದುರ್ಗಾಕ್ಕೆ ಬಂದಿತು. ಅವರು ಹೋದ ಹೋದೆಡೆಯಲ್ಲೆಲ್ಲಾ ಅಷ್ಟಮೂಲಗುಣ ಯಜ್ಞೋಪವೀತ ಧಾರಣೆ ಮಾಡಿಸುತ್ತಿದ್ದರು. "ಸಂಸ್ಕಾರಾತ್ ದ್ವಿಜ ಉಚ್ಯತೆ" ಸಂಸ್ಕಾರದಿಂದಲೇ ದ್ವಿಜ ಎನ್ನಿಸಿಕೊಳ್ಳುತ್ತಾನೆ. ಇಲ್ಲದಿದ್ದರೆ ಉತ್ತಮ ಕುಲದವನೂ ಶೂದ್ರನಾಗುತ್ತಾನೆ. ಮಹಾಪುರಾಣದಲ್ಲಿ ಮೋಕ್ಷಗಾಮಿಯ ಚಿನ್ಹೆ ವರ್ಣಿಸಿದೆ. "ವ್ರತ ಚಿನ್ಹಾದದ ಸೂತ್ರಂ " ಎಂದಿದೆ. ಯಜ್ಞೋಪವೀತ ವ್ರತ ಚಿನ್ಹೆಯಾಗಿದೆ. ಋಷಭನಾಥರು ಸ್ವಯಂ ತನ್ನ ಸುಪುತ್ರ ಭರತನಿಗೆ ಅನ್ನಪ್ರಾಶನ,

ಯಜ್ಞೋಪವೀತಧಾರಣೆ, ವ್ರತಸಂಸ್ಕಾರ ಮಾಡಿದನೆಂದು ಹೇಳಿದೆ. ಆತ್ಮನ ಉತ್ಕರ್ಷಕ್ಕೆ ಸ್ವಲ್ಪವಾದರೂ ವ್ರತಪಾಲನೆ ಅಗತ್ಯವೆಂದು ಜಿನ ಸೇನಾಚಾರ್ಯರು ಹೇಳಿದ್ದಾರೆ. "ಸ್ವಲ್ಪ ಮಪಿವ್ರತಂ ಸ್ವರ್ಗಾಪವರ್ಗಯೋ ಹೇಜಂತೂ" ಎಂದು ಎಚ್ಚರಿಸಿದ್ದಾರೆ. ಯಮಪಾಲ ಚಾಂಡಾಲ ಅಹಿಂಸಾ ವ್ರತಂದಿಂದ ದೇವಗತಿಗೆ ಹೋದ. ಆಲದ ಮರದ ಬೀಜ ಚಿಕ್ಕದಿದ್ದರೂ ಅದರಿಂದ ಭಾರೀ ವೃಕ್ಷವೇ ಬೆಳೆಯುತ್ತದೆ. ನಿರತಿಚಾರ ಪೂರ್ವಕ ಆಚರಿಸಿದ ಸಣ್ಣ ವ್ರತವೇ ನಾಳೆ ಜೀವಿಗೆ ಮಹಾಭ್ಯುದಯ ತಂದುಕೊಡುತ್ತದೆ. ಆದ್ದರಿಂದ ಪೂಜ್ಯಶ್ರೀಯವರು ವ್ರತಗಳನ್ನು ಯಥಾಶಕ್ತಿ ಪಾಲಿಸಲು ಮೇಲಿಂದ ಮೇಲೆ ಹೇಳುತ್ತಿದ್ದರು. ಯವನರ ದಾಳಿಯಿಂದ ಲುಪ್ತವಾಗಿದ್ದ ಸದಾಚಾರದ ಪುನರುತ್ಥಾನ ಮಾಡಹತ್ತಿದರು. ದಶಲಕ್ಷಣ ಧರ್ಮದಲ್ಲಿ ಹೇಳಿದೆ. "ಸಂಯಮ್ ಬಿನ್ ಘಡಿಯಾ ಇಕ್ ಜಾಹೋ" ಸಂಯಮವಿಲ್ಲದೆ ಒಂದು ಕ್ಷಣವೂ ಕಳೆಯಬೇಡ. ಸಂಘದ ಮೂಲಕ ಸಂಯಮವೆಂಬ ರತ್ನಗಳು ಭವ್ಯ ಜೀವಿಗೆ ಹಂಚಲ್ಪಡುತ್ತಿತ್ತು. ನರಕಾಯು ಬಂಧಿಸಲ್ಪಟ್ಟ ಮಹಾಪಾಪಿ ಸಂಯಮಿಯನ್ನು ಶತ್ರುವನಂತೆ ನೋಡುತ್ತಾನೆ. ಸದ್ಗತಿಗಾಮಿ ಜೀವಿ ಅವರನ್ನು ಭಕ್ತಿಯಿಂದ ಪೂಜಿಸುತ್ತದೆ. ಅಲ್ಲಿಂದ ಸಂಘ ೧೮ ಜನವರಿ ರಾಯಪುರ್ ಸೇರಿತು. ಅಲ್ಲಿ ಅನಂತ ಕೀರ್ತಿಗಳ ಕೇಶಲೋಚನವಾಯಿತು.

ಆಂಗ್ಲ ಅಧಿಕಾರಿ ಭ್ರಮೆ ನಿವಾರಣೆ

ಅಲ್ಲಿ ಒಬ್ಬ ಆಂಗ್ಲ ಅಧಿಕಾರಿಣಿ ದಿಗಂಬರ ಮುನಿಗಳನ್ನು ನೋಡಿದಳು. ತನ್ನ ಐರೋಪ್ಯ ಪದ್ಧತಿಗೆ ದೊಡ್ಡ ಧಕ್ಕೆ ಬಂದಿತೆಂದು ಭಾವಿಸಿದಳು. ಅವಳು ತನ್ನ ಗಂಡನ ನೆರವಿನಿಂದ ಸಂಘಕ್ಕೆ ಬಾಧೆ ಮಾಡತೊಡಗಿದಳು. ಆದರೆ ಕೆಲವು ಚತುರಶ್ರಾವಕರು ಮುನಿಗಳ ಲೋಕೋತ್ತರ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟರು. ಆಗ ಅವರು ಕೂಡಲೇ ತಮ್ಮ ಮನಸ್ಸನ್ನು ಬದಲಾಯಿಸಿದರು. ಪೂಜ್ಯಶ್ರೀಯವರ ಪುಣ್ಯ ಪ್ರಭಾವದಿಂದ ವಿಘ್ನಗಳು ಧೂಳಿಪಟವಾಗುತ್ತಿದ್ದವು. ದಿಗಂಬರತ್ವದ ಬಗ್ಗೆ ತರ್ಕದ ತರ್ಜನಿ ಎತ್ತಿ ತೋರಿಸುವವರು ತಿಳಿಯಬೇಕಾದ್ದೇನೆಂದರೆ ಆತ್ಮ ತಲ್ಲೀನತೆ ಮತ್ತು ದೈಹಿಕ ನಿಷ್ಪೃಹತೆ ವಸ್ತ್ರಗಳಲ್ಲಿಲ್ಲ. ಆರ್ಕಿಮಿಡೀಸ್ ಎನ್ನುವ ವಿಜ್ಞಾನಿ ವೈಜ್ಞಾನಿಕ ತತ್ವ ಕಂಡುಹಿಡಿದಾಗ ಸಂತೋಷ ತಾಳಲಾರದೆ ರಸ್ತೆಯಲ್ಲಿ ಅದು ಸಿಕ್ಕಿತು; ಅದು ಸಿಕ್ಕಿತು ಎಂದು ಕೂಗುತ್ತಾ ಬೆತ್ತಲೆಯಾಗಿ ಓಡುತ್ತಿದ್ದನಂತೆ! ಲೌಕಿಕ ಶೋಧನೆಯಿಂದ ಹರ್ಷಿತನಾದವನಿಗೇ ಶರೀರದ ಹಂಗು ಇಲ್ಲದಿದ್ದ ಮೇಲೆ ಆತ್ಮಶೋಧಕನಿಗೆ ನಗ್ನತ್ವದ ನಾಚಿಕೆ ಇದ್ದರಾದೀತೇ? ಆತ್ಮ ಶೋಧಕ ಶರೀರದ ಪೋಷಕನಲ್ಲ. ಆತ್ಮನ

ಅವಲಂಬನದಿಂದಲೇ ಆತ್ಮನ ಅದ್ಭುತ ವಿಭೂತಿ ಹೊರ ಹೊಮ್ಮುವುದರಿಂದ ಆತ್ಮಜ್ಞಾನಿಗಳು ಶರೀರಮೋಹ ತೊರೆದು ಆತ್ಮಾರಾಧನೆಗಾಗಿ ನಗ್ನತ್ವ ಧಾರಣೆ ಮಾಡುತ್ತಾರೆ. ವಿಷಯ ಕಷಾಯ ಲಂಪಟರಿಗೆ ಲೌಕಿಕ ವ್ಯವಹಾರಗಳಲ್ಲೇ ರುಚಿ ಹೆಚ್ಚು. ಅಂತರ್ಯಕ್ಕೆ ಮನಸ್ಸು ಇಳಿಯುವುದಿಲ್ಲ. ಅದೇ ರೀತಿ ಆತ್ಮಜ್ಞಾನಿಗೆ ಮನಸ್ಸು ಹೆಚ್ಚು ಹೆಚ್ಚು ಅಂತರ್ಮುಖಿಯಾಗುತ್ತಾ ಹೋಗುತ್ತದೆ. ಬಾಹ್ಯದಾಟದಲ್ಲಿ ಸಿಡಿಮಿಡಿ ಉಂಟಾಗುತ್ತದೆ. ಸೂರ್ಯೋದಯವಾದೊಡನೆ ಚಂದ್ರ ತಾರೆಯರು ಅವನ ಬೆಳಕಿನಲ್ಲಿ ವಿಲೀನವಾಗಿ ಹೋಗುವಂತೆ ಆತ್ಮಜ್ಞಾನಿಯಾದ ಸಾಧುವಿಗೆ ಅನ್ಯ ವಿಚಾರಗಳು ಉಪ್ತವಾಗಿ ಹೋಗುತ್ತವೆ.

ಸನ್ ೧೯೩೧ರಲ್ಲಿ ನೀರಾ ಜಿಲ್ಲೆಯ ಕಲೆಕ್ಟರ್ ಮುನಿ ಸಂಘದ ವಿಹಾರಕ್ಕೆ ನಿಷೇದಾಜ್ಞೆ ಹೊರಡಿಸಿದರು. ಈ ಆಜ್ಞೆಯಿಂದ ಜೈನ ಸಮಾಜದಲ್ಲಿ ಭಯಂಕರ ಪ್ರತಿರೋಧ ಕಾಣಿಸಿತು. ಗೃಹ ಮಂತ್ರಿಯಾಗಿದ್ದ ಮೊರಾಜ್ಜಿ ದೇಸಾಯಿಯವರಿಂದ ನಿಷೇದಾಜ್ಞೆ ರದ್ದು ಮಾಡಲ್ಪಟ್ಟಿತು. ಇಂತಹದ್ದೇ ಒಂದು ಪರಿಸ್ಥಿತಿ ೧೯೪೮ರಲ್ಲಿ ನಿಜಾಮ ರಾಜ್ಯದಲ್ಲಿ ಉದ್ಭವಿಸಿತ್ತು. ಅದೋ ಶೀಘ್ರವೇ ನಿವಾರಣೆಯಾಗಿತ್ತು. ಪೂಜ್ಯಶ್ರೀಯವರು ಎದುರಿಸದ ಕಷ್ಟವಿರಲಿಲ್ಲ. ಆತ್ಮ ಸ್ಥೈರ್ಯದಿಂದ ಅದೆಲ್ಲವನ್ನೂ ಸಾಮ್ಯಭಾವದಿಂದ ಎದುರಿಸುತ್ತಿದ್ದರು.

ರಾಂಚಿಯಲ್ಲಿ ಸಂಘ

ಸಂಘವು ವಿಹರಿಸುತ್ತಾ ರಾಂಚಿ ಸೇರಿತು. ಬಹಳ ಜನಗಳು ಅಷ್ಟ ಮೂಲಗುಣ ಧರಿಸಿದರು. ಅಲ್ಲಿಯ ಧಾರ್ಮಿಕ ಸೇಠ್ ರಾಯ್ ಬಹದ್ದೂರ್ ರತನ್ ಲಾಲ್ ಸೂರಮಲ್ ಜಿಯವರು ಬಹಳ ಆಸ್ಥೆಯಿಂದ ಸಂಘ ವ್ಯವಸ್ಥೆ ಮಾಡಿದರು. ಆಚಾರ್ಯಶ್ರೀಯವರು ಯಜ್ಞೋಪವೀತಧಾರಣೆ ಮಾಡಿ ಎಂದು ಹೇಳುತ್ತಿದ್ದ ಮಾತು ಬಹಳ ಜನಗಳಿಗೆ ಸಂಶಯ ಮೂಡಿಸತೊಡಗಿತು. ಇದು ವೈದಿಕ ಪರಂಪರೆ. ಜೈನರೀಗೇಕೆ ಹೇಳುತ್ತಿದ್ದಾರೆ ಎಂದು ಕೇಳಲಾರಂಭಿಸಿದರು. ಆಗ ಅವರು ಇಂತಹ ಸಂಶಯಕ್ಕೆ ಶಾಸ್ತ್ರೋಕ್ತ ಸಮಾಧಾನ ಹೇಳುವ ಅಗತ್ಯ ಒದಗಿಬಂತು. " ಆಗಮದಲ್ಲಿ ಯಜ್ಞೋಪವೀತ ಸಂಸ್ಕಾರ ಹೇಳಿದೆ. ಅದು ರತ್ನತ್ರಯ ಧರ್ಮದ ಚಿನ್ಹೆ. ಯಾರು ಯಜ್ಞೋಪವೀತ (ಜನಿವಾರ) ಧಾರಣೆ ಮಾಡಿರುತ್ತಾರೋ ಅಂತವರು ಮಾತ್ರ ಮುನಿಗಳಿಗೆ ಆಹಾರದಾನ ಮತ್ತು ಭಗವಂತನ ಪೂಜೆ ಮಾಡುವ ಅರ್ಹತೆ ಪಡೆದುಕೊಳ್ಳುತ್ತಾರೆ. "

"ಮಹಾ ಪುರಾಣದಲ್ಲಿ ದ್ವಿಜೋತ್ಪತ್ತಿಯ ಬಗ್ಗೆ ಹೇಳಿದೆ. ಮಾತೆಯ ಗರ್ಭದಿಂದ ಜನ್ಮದವರೆಗೆ ಸಂಸ್ಕಾರ ಬದ್ಧನಾಗಿ ದ್ವಿಜನಗುತ್ತಾನೆ. ಹರಿವಂಶ ಪುರಾಣದಲ್ಲಿ ಹೀಗೆ ಹೇಳಿದೆ."

"ದೇಹಸ್ಥಿತೇನ ಶುದ್ಧೇನ ತ್ರಿಗುಣೆಮೋಜ್ವಲೀ ಕೃತಃ
ಯಜ್ಞೋಪವೀತ ಸೂತ್ರೇಣ ಸ ರತ್ನತ್ರಯೋಣವಾ"

ಅವರು ತಮ್ಮ ಶರೀರದಲ್ಲಿ ಧರಿಸಿದ್ದ ಮೂರು ಎಳೆಯ ಶುದ್ಧ ಯಜ್ಞೋಪವೀತ ಸೂತ್ರದಿಂದ ರತ್ನತ್ರಯ ಧರ್ಮ ಪೂರ್ಣವಾಗಿ ಉಜ್ವಲವಾಗಿ ಕಾಣುತ್ತಿದ್ದರು. ಮಹಾಪುರಾಣದಲ್ಲೂ ಭರತ ಚಕ್ರವರ್ತಿ ದ್ವಿಜೋತ್ಪತ್ತಿ ಮಾಡಿದನೆಂದು ಪ್ರಸ್ತಾಪ ಬಂದಿದೆ. ಯಜ್ಞೋಪವೀತ ಧರಿಸಿ ವ್ರತಧಾರಣೆ ಮಾಡಿದವರನ್ನು ಬ್ರಾಹ್ಮಣರೆಂದು ಕರೆದನು. ಯಜ್ಞೋಪವೀತವನ್ನು ರತ್ನತ್ರಯ ಧರ್ಮದ ಸಂಕೇತವಾಗಿ ಕೊಟ್ಟನು."

ಪೂಜ್ಯ ಶ್ರೀಯವರ ಈ ವಿವರಣೆಯಿಂದ ಜನರ ಸಂಶಯ ದೂರಾಯಿತು. ಆಗ ಎಲ್ಲರೂ ಸಂತೋಷದಿಂದ ಯಜ್ಞೋಪವೀತ ಧರಿಸತೊಡಗಿದರು.

ಸಂಘವು ಅಲ್ಲಿಂದ ಹಜಾರಿಬಾಗ್ ತಲ್ಪಿತು. ಅಲ್ಲಿಯ ಜನ ಬಹಳ ಭಕ್ತಿ ಪ್ರಕಟ ಮಾಡಿದರು. ಅಲ್ಲಿ ಐಲಕ ಪನ್ನಲಾಲ್ ಸಂಘಕ್ಕೆ ಸೇರಿದರು. ಅಲ್ಲಿಂದ ಮುಂದೆ ಸಂಘ ನೇರ ಸಮ್ಮೇದಶಿಖರಿಗೆ ಪಯಣ ಬೆಳೆಸಿತು. ಆಗ ಎಲ್ಲರಿಗೂ ಅವರ್ಣನೀಯ ಆನಂತವಾಗತೊಡಗಿತು. ಮುಕ್ತಿಯೇ ಸಮೀಪಿಸಿದಂತೆ ಉದ್ವೇಗಗೊಂಡರು. ಸಮ್ಮೇದ ಶಿಖರ ಅನಂತ ಆತ್ಮರ ಕೈವಲ್ಯ ಧಾಮ. ಸಂಸಾರ ಬಂಧನದ ಬಿಡುಗಡೆಯ ಅಂತಿಮ ನಿಲ್ದಾಣ. ಈ ಸ್ಮರಣೆ ಬರುತ್ತಲೇ ಎಲ್ಲರ ಹೃದಯಗಳೂ ದೀರ್ಘವಾಗಿ ಮಿಡಿಯತೊಡಗಿದವು. ಸಮ್ಮೇದ ಶಿಖರ ಸಂಸಾರ ಬಂಧನ ಸಡಿಲಗೊಳಿಸುವ ಸ್ಥಾನ. ಚತುರ್ಗತಿಗಳ ಭ್ರಮಣೆ ತಪ್ಪಿಸುವ ನೆಲೆ. ಕರ್ಮದ ಬೇರು ಕಿತ್ತು ಹಾಕಿ ಮುಕ್ತಿ ಮಂದಿರ ಸೇರಿಸುವ ಚರಮ ಸೀಮೆ. ಸಂಘವು ಈ ಎಲ್ಲಾ ಭಾವಗಳನ್ನು ಹೊತ್ತು ಶತೃವಿನ ಮೇಲೇರಿ ಹೋಗುವ ವೀರಯೋಧನಂತೆ ಉತ್ಸಾಹದಿಂದ ಮುನ್ನಡೆಯುತ್ತಿತ್ತು.

ಶಿಖರಜಿಯಲ್ಲಿ ಭವ್ಯ ಪಟ್ಟಣದ ನಿರ್ಮಾಣ

ಸಂಘದ ಸ್ವಾಗತಕ್ಕಾಗಿ ಭಾರಿ ಜನಸ್ತೋಮ ಪ್ರವಾಹದೋಪಾದಿಯಲ್ಲಿ ಹೊರವಲಯದ ಸ್ವಾಗತಸ್ಥಾನದತ್ತ ಹರಿಯುತ್ತಿತ್ತು. ಹಿಂದೆಂದೂ ಚತುಃಸಂಘ ದರ್ಶನ

ಮಾಡದ ಜನ ಆಶ್ಚರ್ಯವನ್ನು ಭಕ್ತಿಯೊಡನೆ ಬೆರೆಸಿ ಕುತೂಹಲ ಕೆರಳಿ ತುದಿಗಾಲಲ್ಲಿ ರಸ್ತೆಯ ಇಕ್ಕೆಲಗಳಲ್ಲೂ ನಿಂತಿದ್ದರು. ಭಾರಿ ಜಯಘೋಷದೊಡನೆ ಮುನಿಸಂಘ ಶಿಖರಜಿ ಪ್ರವೇಶಿಸಿತು. ಮುನಿಸಂಘ ಬರುವ ಮುನ್ನವೇ ದೂರದೂರದಿಂದ ಜನರು ಅಲ್ಲಿಗೆ ಬಂದು ಸೇರಿದ್ದರು. ಆದ್ದರಿಂದ ಶಿಖರಿಜಿ "ಭವ್ಯ" ಪುರಿಯಂತೆ ಕಾಣುತ್ತಿತ್ತು. ಶ್ರೇಷ್ಠ ನಿರ್ವಾಣ ಭೂಮಿಯ ದರ್ಶನ ರತ್ನತ್ರಯ ಮೂರ್ತಿ ಆಚಾರ್ಯ ಶಾಂತಿಸಾಗರರ ದರ್ಶನದಂತಹ ಅಪೂರ್ವ ಲಾಭದ ಅಪೇಕ್ಷೆಯಿಂದ ಸೇರಿದ್ದ ಲಕ್ಷಾಂತರ ಜನರು ಒಂದು ದೊಡ್ಡ ಪಟ್ಟಣವನ್ನೇ ನಿರ್ಮಿಸಿದರು. ಟ್ರೈನ್ ಬಸ್ ಗಳಲ್ಲಿ ಯಾತ್ರಿಕರ ಒತ್ತಡ ಅತ್ಯಧಿಕವಿತ್ತು. ಜೈನ ಸಮಾಜ ಅಲ್ಪಸಂಖ್ಯಾತ ಸಮಾಜ ಎನ್ನುವ ಮಾತು ಹುಸಿಯಾಗಿತ್ತು. ಮೋಟಾರ್, ಕಾರ್ ಗಳಲ್ಲಿ ಬಂದು ಹೋಗುವವರರ ಸಂಖ್ಯೆ ತಿಳಿಯಲು ಸಾಧ್ಯವಿರಲಿಲ್ಲ. ಅಲ್ಲಿ ಸೇರಿದ್ದ ಲಕ್ಷಾಂತರ ಭಕ್ತರ ಮನದಲ್ಲಿ ಆಚಾರ್ಯ ಶ್ರೀಯವರು ನೆಲೆಸಿಬಿಟ್ಟಿದ್ದರು. ಯಾರ ಬಾಯಲ್ಲೂ ಅವರ ಪುಣ್ಯ ಸ್ಮರಣೆ ಮಾಡಲ್ಪಡುತ್ತಿತ್ತು. ಸಂಘದ ಪ್ರತಿಯೊಬ್ಬರ ಹೃದಯದಲ್ಲೂ ಆಚಾರ್ಯಶ್ರೀಯವರ ಬಗ್ಗೆ ಅತ್ಯಂತ ಕೃತಜ್ಞತೆ ವ್ಯಕ್ತವಾಗುತ್ತಿತ್ತು. ಅವರ ನಿಮಿತ್ತದಿಂದಲೇ ಎಲ್ಲರಿಗೂ ಯಾತ್ರೆಯ ಸುಯೋಗ ಪ್ರಾಪ್ತಿಯಾಗಿತ್ತು. ಅವರ ನಿಮಿತ್ತದಿಂದಲೇ ಎಲ್ಲರಿಗೂ ಯಾತ್ರೆಯ ಸುಯೋಗ ಪ್ರಾಪ್ತಿಯಾಗಿತ್ತು. ಶಿಖರಿಜಿ ತಲುಪುತ್ತಲೇ ಜಿನ ಮಂದಿರಗಳ ದರ್ಶನದಿಂದ ಯಾತ್ರಿಗಳಿಗೆ ಅಪೂರ್ವ ಆನಂದ ದೊರೆಯಿತು.

ಸ್ವನಾಮ ಧನ್ಯ ಸಂಘಪತಿ ಮುಕ್ತಿಯ ಅಭಿಲಾಷೆಯಿಂದ ಮುಕ್ತಿ ಭೂಮಿಯಲ್ಲಿ ಮುಕ್ತ ಹಸ್ತದಿಂದ ನ್ಯಾಯೋಪಾರ್ಜಿತ ಹಣವನ್ನು ಭಕ್ತಿಯಿಂದ ವ್ಯಯಮಾಡಲು ಮುಂದಾದರು. ಈ ಶತಮಾನದ ಮಹಾನ್ ಆತ್ಮ ಅಲ್ಲಿ ವಿರಾಜಮಾನವಾಗಿರುವಾಗ ಎಲ್ಲರ ಹೃದಯದಲ್ಲೂ ಅಪೂರ್ವ ಆನಂದ ತುಂಬಿ ತುಳುಕುತ್ತಿತ್ತು. ತೀರ್ಥಂಕರರು ಈ ಭೂಮಿಯಲ್ಲಿ ಜನ್ಮತಾಳಿದ ಕೂಡಲೇ ಪ್ರಕೃತಿಯ ಆನಂದದಿಂದ ತೊನೆಯುವುದಂತೆ! ಖಗಚರಗಳು ಸಂತೋಷದಿಂದ ಬಾನ ಅಂಗಳದಲ್ಲಿ ಹಾರಾಡುವವಂತೆ ಇಂತಹದೇ ಆನಂದ ದೇವಲೋಕದ ದೇವತೆಗಳಿಗೂ ಆಗುವುದಂತೆ! ಹೆಚ್ಚೇನು, ಶಾಂತಿಯ ಒದು ಕಣವನ್ನೂ ಕಾಣದ ನಾರಕಿಗಳಿಗೆ ಒಂದು ಕ್ಷಣ ಅಪೂರ್ವ ಶಾಂತಿ ಹುಟ್ಟಿ ಮಾಯವಾಗುವುದಂತೆ. ತೀರ್ಥಂಕರ ಪ್ರಭುವಿನ ಸಾತಿಶಯ ಪುಣ್ಯ ಪರಮಾಣುಗಳ ಪ್ರಭಾವ ಅದು! ಅದೇ ರೀತಿ ಮಹಾತಪಸ್ವಿ ಆಚಾರ್ಯ ಶಾಂತಿಸಾಗರರ ಸಾನಿಧ್ಯದಿಂದ ಅಲ್ಲಿದ್ದವರಿಗೆ ಅಪೂರ್ವ ಆನಂದದ ಅನುಭವ ಆಗುತ್ತಿದ್ದುದು ಯಾವ ಸೋಜಿಗ? ರಾತ್ರೋರಾತ್ರಿ ಜನ ಕೈಯ್ಯಲ್ಲಿ ಲಾಟೀನು ಮತ್ತು ಕೋಲು ಹಿಡಿದು " ಪಾರ್ಶ್ವನಾಥ ಭಗವಾನಕೀ ಜೈ" ಎಂದು

ಘೋಷಣೆ ಕೂಗುತ್ತಾ ಬೆಟ್ಟವೇರುತ್ತಿದ್ದ ಸಡಗರ ಹೇಳತೀರದು. ಭಕ್ತಿ ಮತ್ತು ಶ್ರದ್ಧೆಯ ದೆಸೆಯಿಂದ ಅಶಕ್ತರಿಗೂ ಶಕ್ತಿ ತುಂಬಿ ಲಗುಬಗೆಯಿಂದ ಬೆಟ್ಟವೇರುತ್ತಿದ್ದರು. ಜನ ಮೇಲೆ ಮೇಲೆ ಬೆಟ್ಟವೇರುತ್ತಾ ಜಯಘೋಷ ಮಾಡುತ್ತಿದ್ದಂತೆ ಅದು ಮಾರ್ದನಿಗೊಳ್ಳುತ್ತಿತ್ತು. ಭೀಷಣವಾದ ಕಾಡಿನಲ್ಲಿ ಹೋಗುತ್ತಿದ್ದರೂ ಯಾರಿಗೂ ಯಾವ ಕಷ್ಟವೂ ಕಾಣಿಸುತ್ತಿರಲಿಲ್ಲ. ಯಾರು ಚಿಂತಾಮಣಿ ಪಾರ್ಶ್ವನಾಥ ಪ್ರಭುವಿನ ನಾಮಸ್ಮರಣೆ ಮಾಡುತ್ತಲೇ ದೂರ ದೇಶದಲ್ಲಿದ್ದವರಿಗೂ ಕಷ್ಟಗಳೂ ದೂರವಾಗುವಾಗ ಆ ದೇವಾದಿ ದೇವನ ನಿರ್ವಾಣ ಸ್ಥಳದಲ್ಲೇ ಭಕ್ತಿಯಿಂದ ಸ್ತುತಿಸುವವರಿಗೆ ಕಷ್ಟವೆಂದರೇನು? ಯಾತ್ರಿಕರು ಹೇಗೆ ಹೇಗೆ ಮೇಲೇರಿ ಹೋಗುತ್ತಿದ್ದರೋ ಹಾಗೆ ಹಾಗೆ ಅವರ ಆತ್ಮ ಶುದ್ಧಿಯೂ ಬೆಳೆಯುತ್ತಾ ಹೋಗುತ್ತಿತ್ತು.

ಲಕ್ಷಾಂತರ ಭಕ್ತರ ಕೋಲಾಹಲದಿಂದ ಸುತ್ತುವರೆದಿದ್ದರೂ ಆಚಾರ್ಯಶ್ರೀಯವರು ಪೂರ್ಣ ಶಾಂತಿಯಿಂದಿದ್ದರು. ಮತ್ತು ಶಾಂತಭಾವದಿಂದ ಆತ್ಮದರ್ಶನ ಮಾಡುತ್ತಿದ್ದರು. ಮಂಗಲ ಮಯ ಗಿರಿರಾಜ ಅವರ ಆತ್ಮನಲ್ಲಿ ವಿಲಕ್ಷಣ ವಿಶುದ್ಧಿ ತಂದಿದ್ದ. ಗುಣಶ್ರೇಣಿ ರೂಪ ನಿಚ್ಚಣಿಗೆ ಏರುತ್ತಾ ಕರ್ಮಗಳ ಕಟ್ಟನ್ನು ಸುಟ್ಟು ಹಾಕುತ್ತಿದ್ದರು. ಮಂಗಲ ಪ್ರಭಾತದ ಆಗಮನವಾಯಿತು. ಸೂರ್ಯನು ಮೂಡಣ ಬೆಟ್ಟವೇರಿ ಬಂದನು. ಸಾಮಾಯಿಕ ವಿಧಿ ತೀರಿಸಿ ತೀರ್ಥವಂದನಾರ್ಥ ಗಿರಿರಾಜನತ್ತ ಯೋಗಿ ರಾಜನ ವಿಹಾರ ಆಯಿತು. ಮುನಿಸಂಘ ಆಗ ಉತ್ಸಾಹದಿಂದ ಅವರನ್ನು ಹಿಂಬಾಲಿಸಿತು. ಈರ್ಯಾ ಸಮಿತಿಯಲ್ಲಿ ತತ್ಪರರಾಗಿ ಜೀವ ಕೋಟಿಯನ್ನು ರಕ್ಷಿಸುತ್ತಾ ಆ ಯೋಗಿ ಪುಂಗವ ಬೆಟ್ಟವೇರತೊಡಗಿದರು.

ಸ್ವಲ್ಪ ಕಾಲದಲ್ಲೇ ಗಂಧರ್ವ ಹಾಗೂ ಸೀತಾ ನಾಲೆಗಳ ತಟ ಸೇರಿದರು. ಇವೆರಡೂ ನದಿಗಳು ವ್ಯವಹಾರ ನಿಶ್ಚಯರೂಪಿ ಸ್ಯಾದ್ವಾದ ಸಿದ್ಧಾಂತಗಳಂತೆ ಅವರಿಗೆ ಕಂಡವು. ಕೆಲವು ಗಂಟೆಗಳ ನಂತರ ಭಗವಾನ್ ಕುಂಥುನಾಥರ ಕೂಟ ಸಿಕ್ಕಿತು. ಅಲ್ಲಿ ವಿದ್ಯಮಾನವಿರುವ ತೀರ್ಥಂಕರರ ಪಾದುಕೆಗಳಿಗೆ ವಂದಿಸಿ ಅಲ್ಲಿಂದ ಏಳುಬ್ಬುರಷ್ಟು ಮೇಲೆ ಸಿದ್ಧ ಶಿಲೆಯಲ್ಲಿರುವ ಕುಂಥುನಾಥ ಸಿದ್ಧ ಭಗವಾನರನ್ನು ಭಕ್ತಿಯಿಂದ ಸ್ಮರಿಸಿದರು. ಅವರ ಏಕಾಗ್ರ ಧ್ಯಾನ ಭಂಗಿ ಅವರೂ ಒಂದು ಮೂರ್ತಿಯೋ ಎಂದು ಸಂಶಯ ತರುವಂತಿತ್ತು.

ಸಮಂತ ಭದ್ರರು ಹೀಗೆ ಬರೆದಿದ್ದಾರೆ.

ಯಾವ ಸ್ಥಳದಲ್ಲಿ ಮೋಕ್ಷವಾಗುತ್ತಿತ್ತೋ ಅಲ್ಲಿ ಇಂದ್ರನು ತೀರ್ಥಂಕರರುಗಳ

ಪಾದುಕೆ ನಿರ್ವಾಣ ಮಾಡಿ ಸ್ಥಾಪನೆ ಮಾಡುತ್ತಾನೆ. ಕುಂಥುನಾಥ ಸ್ವಾಮಿ ಮುಕ್ತವಾದ ಕೂಟಕ್ಕೆ ಜ್ಞಾನಧರ ಕೂಟವೆಂದು ಹೆಸರು. ಆ ಕೂಟದಿಂದ ಕೋಟಿಕೋಟಿ ಜೀವಿಗಳು ಮುಕ್ತರಾಗಿದ್ದಾರೆ. ಅಂತಹ ಪುಣ್ಯಮಯ ಪ್ರದೇಶದ ದರ್ಶನದಿಂದ ಪೂಜ್ಯಶ್ರೀಯವರಿಗೆ ಯಾವ ಶಾಂತಿ ಪ್ರಾಪ್ತವಾಯಿತೋ ಆತ್ಮನಲ್ಲಿ ಯಾವ ಪ್ರಕಾಶ ಬಿದ್ದಿತೋ ಅದನ್ನು ರಾಗದಿಂದ ರೋಗಿಗಳಾದ ಸಾಮಾನ್ಯರೇನು ಪಡೆದಾರು ? ಇಂತಹ ಶ್ರೇಷ್ಠ ತೀರ್ಥದಲ್ಲಿ ಇಂತಹ ಶ್ರೇಷ್ಠ ಮುನಿರಾಜನನ್ನು ನೋಡಿ ಸ್ವಯಂ ಸೌಧರ್ಮೇಂದ್ರನ ಮಸ್ತಕವೂ ಭಕ್ತಿಯಿಂದ ಬಗ್ಗಿರಬೇಕು. ಪೂಜ್ಯ ಶ್ರೀಯವರು ಸಾವಧಾನವಾಗಿ ಅನ್ಯಕೂಟಗಳ ದರ್ಶನವನ್ನೂ ಪೂರೈಸಿದರು.

ಎಷ್ಟು ಪವಿತ್ರ ಮನೋಹರ ಆನಂದಮಯ ಈ ನಿರ್ವಾಣ ಭೂಮಿ ? ಇಲ್ಲಿ ಗಜರಾಜನು ರತ್ನತ್ರಯ ಪ್ರಾಪ್ತಿ ಮಾಡಿಕೊಂಡು ಪಾರ್ಶ್ವ ಪ್ರಭುವಾಗಿ ಮುಕ್ತಿ ಸೇರಿದನು. ಸುವರ್ಣಭದ್ರ ಕೂಟದ ದರ್ಶನಾನಂತರ ಪೂಜ್ಯಶ್ರೀಯವರು ಬೆಟ್ಟ ಇಳಿಯತೊಡಗಿದರು. ಉದ್ಯಾನದ ಶೋಭೆ ಪುಷ್ಪದಿಂದ. ಕೊಳಗಳ ಶೋಭೆ ಕಮಲಗಳಿಂದ. ಗಗನಕ್ಕೆ ಶೋಭೆ ಚಂದ್ರನಿಂದ. ಅದೇ ರೀತಿ ಅಧ್ಯಾತ್ಮ ಪುಣ್ಯ ಭೂಮಿಯ ಶೋಭೆ ಮುನಿಗಳಿಂದ. ಅವರು ಪ್ರಕೃತಿಯ ಅವಿಚ್ಛಿನ್ನ ಅಂಗದಂತೆ ಕಾಣುತ್ತಿದ್ದರು. ದಿಗಂಬರ ಮುದ್ರೆ ಪ್ರಕೃತಿದತ್ತ ಆಕಾರವಾಗಿತ್ತು.

ಆಗ ಸೂರ್ಯ ಆಕಾಶದ ಮಧ್ಯಕ್ಕೆ ಬಂದಿದ್ದ. ಸಾಮಾ.ಯಿಕದ ಸಮಯವಾಗಿತ್ತು. ಒಂದು ಯೋಗ್ಯ ಸ್ಥಳದಲ್ಲಿ ಅವರು ಧ್ಯಾನಲೀನರಾದರು. ಅವರ ಅಂದಿನ ಧ್ಯಾನದ ನಿರ್ಮಲತೆಯನ್ನು ಏನೆಂದು ವರ್ಣಿಸುವುದು ? ಅಲ್ಲಿಂದ ಮಧುವನದತ್ತ ಹೊರಟರು. ಈ ರೀತಿ ಅಂದಿನ ತೀರ್ಥ ವಂದನೆ ಸಮಾಪ್ತವಾಗಿತ್ತು. ನಂತರ ಪೂಜ್ಯ ಶ್ರೀಯವರು ಸಂಘಸಹಿತ ಚರಿಗೆಗೆ ಹೊರಟರು. ಅಂದು ಆ ಮಹಾಪುರುಷನಿಗೆ ಆಹಾರ ಕೊಡುವ ಬಾಗ್ಯ ಯಾರದಾಗಿತ್ತೋ ?

ಸೂಕ್ಷ್ಮ ಚರ್ಚೆ

ಒಂದು ದಿನ ಮಾತು ಮಾತಿನ ನಡುವೆ ಅವರು ಒಂದು ಒಳ್ಳೆಯ ವಿಚಾರ ತಿಳಿಸಿದರು, ಯಾರೇ ಮುನಿಗಳು ಕಮಂಡಲುವನ್ನು ಮುಂದಕ್ಕೆ ಮೂತಿ ಮಾಡಿ ಹಿಡಿದು ನಡೆಯಬಾರದು.

ಆಗ ನಾನು ಕೇಳಿದೆ:"ಮಹರಾಜ್ ! ಇದಕ್ಕೇನು ಕಾರಣ ? ಮೂತಿಯು ಮುಂದಕ್ಕಿರಲಿ, ಹಿಂದಕ್ಕಿರಲಿ, ಇವೆರಡರ ರಹಸ್ಯವೇನು ?"

ಅವರು: "ಸಂಘದ ಸಾಧುವಿನ ಮರಣವಾದರೆ ಮೂತಿಯನ್ನು ಮುಂದಕ್ಕೆ ಹಿಡಿದು ನಡೆಯುತ್ತಾರೆ. ಸಂಘದ ಸಾಧುವಿನ ಮರಣದ ಬೋಧೆ ಅದರಿಂದ ಉಂಟಾಗುತ್ತದೆ. ಅದು (ಹಾಗೆ ಹಿಡಿಯುವುದು) ಅನಿಷ್ಟ ಘಟನೆಯ ಸಂಕೇತ. "

ನಾನು: "ಒಂದು ವೇಳೆ ಮೂತಿಯನ್ನು ಮುಂದಕ್ಕೆ ಮಾಡಿಕೊಂಡು ನಡೆದರೆ ಕೆಡುಕೇನು ?"

ಅವರು: "ಮೂತಿಯನ್ನು ಮುಂದಕ್ಕೆ ಹಿಡಿದು ನಡೆಯುವುದರಿಂದ ಕಮಂಡಲುವಿನ ಛಿದ್ರದೊಳಗಿನಿಂದ (ಸಡಿಲಾದ ಮೂತಿಯೊಳಗಿನಿಂದ) ಸಣ್ಣ ಸಣ್ಣ ಕೀಟಗಳು ಹೊಕ್ಕು ಅದರ ನೀರಿನೊಳಗೆ ಮುಳುಗಿ ಮರಣ ಹೊಂದಬಹುದು. ಅಂತಹ ದೋಷ ಬರುತ್ತದೆ. ಮೂತಿ ಹಿಂದಕ್ಕೆ ಹಿಡಿದು ನಡೆಯುವುದರಿಂದ ಯಾವ ದೋಷವೂ ಇಲ್ಲ."

ಈ ವಿಚಾರ ನನಗೆ ಹೊಸದಿತ್ತು. ಅದನ್ನು ಕೇಳಿ ಬಹಳ ಹರ್ಷವಾಯಿತು. ಅವರು ಇಂತಹ ಅದೆಷ್ಟು ಗೂಢ ವಿಚಾರಗಳ ಗಣಿಗಳಾಗಿದ್ದರೋ ? ಗಣಿಯನ್ನು ಅಗೆದಷ್ಟು ಅಮೂಲ್ಯ ರತ್ನಗಳು ಹೊರಬರುವಂತೆ ಅವರನ್ನು ನಾನಾ ಪ್ರಶ್ನೆಗಳಿಂದ ಕೆದಕಿದಾಗ ಹೊಸ ಹೊಸ ರಹಸ್ಯಗಳು ಹೊರ ಬರುತ್ತಲೇ ಇದ್ದವು.

ಮರಣದಲ್ಲಿ ಶರಣು

೧೯೫೧ರ ಮಾತದು. ಆಗ ಬಾರಾಮತಿಯಲ್ಲಿ ಚಾತುರ್ಮಾಸ ನಡೆದಿತ್ತು. ಸೇಠ್ ಲಾಲ್ ಚಂದ್ ಹೀರಾಚಂದ್ ಬಹುದೊಡ್ಡ ವಾಣಿಜ್ಯೋದ್ಯಮಿ. ದೇಶ ವಿದೇಶಗಳಲ್ಲಿ ಅವರು ದೊಡ್ಡ ಹೆಸರು ಮಾಡಿದ್ದರು. ಅವರ ಹತ್ತಿರ ಕೋಟ್ಯಾಂತರ ರೂಪಾಯಿಗಳ ಸಂಪತ್ತು ಕೊಳೆಯುತ್ತಿತ್ತು. ಅವರ ಆ ಸಂಪತ್ತು ಈಗ ಸ್ವಲ್ಪವೂ ಕೆಲಸಕ್ಕೆ ಬಾರದಾಗಿತ್ತು. ಏಕೆಂದರೆ ಅವರಿಗೆ ಪಾರ್ಶ್ವವಾಯು ಬಡಿದಿತ್ತು. ನಾಲಿಗೆ ಬಿದ್ದು ಹೋಗಿತ್ತು. ಕೈ ಕಾಲುಗಳು ನಿರ್ಜೀವವಾಗಿದ್ದವು. ಅನ್ನಪಾನಗಳನ್ನು ಸೇವಿಸಲು ಅವರಿಂದಾಗುತ್ತಿರಲಿಲ್ಲ. ಅತೀವ ಪೀಡೆಯಿಂದ ಮೆಲ್ಲಗೆ ನರಳುತ್ತಿದ್ದರು. ಅಂತಹ ಸ್ಥಿತಿಯಲ್ಲಿ ಕಟ್ಟಕಡೆಯ ಪ್ರಯತ್ನವಾಗಿ ಅವರನ್ನು ಪೂಜ್ಯಶ್ರೀಯವರ ಸನ್ನಿಧಿಗೆ ಕರೆತರಲಾಗಿತ್ತು.

ಅಸಾತಾವೇದನೀಯ ಕರ್ಮದ ತೀವ್ರೋದಯವದು. ಸೇಠ್‌ಜಿಯ ಅಂದಿನ ಸ್ಥಿತಿ ಚಿಂತಾ ಜನಕವಾಗಿತ್ತು. ಹುಲಿಯ ಕೈಗೆ ಸಿಕ್ಕ ಹುಲ್ಲೆಯಂತೆ ಕರುಣಾಕ್ರಂಧನ ದೃಷ್ಟಿಯಿಂದ ನೋಡುತ್ತಿದ್ದರು. ಅವರಿಗಿನ್ನೂ ಬದುಕುವ ಆಸೆ ಇತ್ತು. ಸುಖಪಡುವ ಬಯಕೆ ತುಂಬಿತ್ತು. ಅವರನ್ನು ನೋಡಿದರೆ ಅಯ್ಯೋ ಅನ್ನಿಸುತ್ತಿತ್ತು. ಆಗ ನಾನು ಅವರಿಗೆ ಕೆಲವು ಸಮಾಧಾನದ ಮಾತು ಹೇಳಿದೆ. ಅದಕ್ಕಿಂತ ಹೆಚ್ಚೇನೂ ಮಾಡುವಂತಿರಲಿಲ್ಲ. "ಸೇಠ್ ಜೀ! ನೀವಿಂದು ಮಹಾತಪಸ್ವಿಯ ದರ್ಶನಕ್ಕೆ ಬಂದಿದ್ದೀರಿ. ಅವರ ದರ್ಶನಕ್ಕೆ ಬಂದು ಬಹಳ ಒಳ್ಳೆಯದು ಮಾಡಿದಿರಿ. ನೀವು ದೇಶವಿದೇಶ ಪರ್ಯಟನ ಮಾಡಿದ್ದೀರಿ. ಹಡಗಿನ ವ್ಯಾಪಾರ ಮಾಡಿದ್ದೀರಿ. ಮೋಟಾರ್ ವಾಹನಗಳ ಕಾರ್ಖಾನೆ ನಡೆಸಿದ್ದೀರಿ. ಕೋಟ್ಯಾಂತರ ಸಂಪತ್ತು ಗಳಿಸಿದ್ದೀರಿ. ಅವೆಲ್ಲಾ ನಿಮ್ಮಾತ್ಮನಿಗೆ ಈಗ ಯಾವ ಉಪಕಾರವನ್ನೂ ಮಾಡಲಾರವು. ಧನವೈಭವ ನಿಮ್ಮ ಶರೀರ ವ್ಯಥೆ ದೂರಮಾಡಲಾರವು. ಈಗ ನೀವು ಈ ಸಾಧುರಾಜನಿಗೆ ಪ್ರಣಾಮ ಮಾಡಿ 'ಣಮೋ ಅರಹಂತಾಣಂ' ಎಂದು ನಮೋಕಾರ ಜಪಿಸಿರಿ. ಅದೇ ನಿಮಗೆ ಮರಣದಲ್ಲಿ ಶರಣು. ಸಂಪತ್ತು ಪುಣ್ಯದ ದಾಸಿ. ಅದು ತೀರಿದ ಮೇಲೆ ಜೀವ ಪಾಪೋದಯದಿಂದ ಅಸಹ್ಯ ವೇದನೆ ಅನುಭವಿಸಲೇಬೇಕು. ನೀವು ಗಳಿಸಿದ ಸಂಪತ್ತು ನಿಮ್ಮ ಕಣ್ಣು ಮುಂದೇ ಪಾಪೋದಯದಿಂದ ನಿರುಪಯೋಗವಾಗುತ್ತಿದೆ. ನೀವು ಸಂಪತ್ತನ್ನೇನೋ ಗಳಿಸಿದಿರಿ ನಿಜ. ಒಂದು ಅರ್ಥದಲ್ಲಿ ನೀವು ಗಳಿಸಿದ್ದು ಪಾಪದ ಸಂಪತ್ತು ಮಾತ್ರ! ನಿಮ್ಮಾತ್ಮನಿಗೆ ನೀವು ಏನನ್ನೂ ಮಾಡಲಿಲ್ಲ. ಈ ಮಾತನ್ನು ಕೇಳಿ ಆ ದುಃಖಿ ಜೀವಿಯ ಕಣ್ಣುಗಳು ಒದ್ದೆಯಾದವು. ಪಶ್ಚಾತ್ತಾಪದಿಂದ ತಳಮಳಿಸತೊಡಗಿತ್ತು. ಆದರೆ ಮಾಡುವುದೇನು ? ಕಾಲ ಮಿಂಚಿತ್ತು. ಶರೀರದಲ್ಲಿ ಶಕ್ತಿ ಇದ್ದಾಗ ಭೋಗಕ್ಕೆ ಮುಗಿ ಬೀಳುತ್ತವೆ ಜೀವಿಗಳು. ಶರೀರದ ಶಕ್ತಿ ಹಿಂಡಿ ಹೋಗಿ ನಾನಾ ರೋಗಗಳು ಆಕ್ರಮಿಸಿದಾಗ ಆತ್ಮ ಕಲ್ಯಾಣದ ಚಿಂತೆಯೇನೋ ಆಗ ಹುಟ್ಟುತ್ತದೆ ಆದರೆ ಆಗೇನು ಮಾಡಲು ಬಂದೀತು! ಆದ್ದರಿಂದ ಆತ್ಮಕಲ್ಯಾಣ ಮುಪ್ಪಿನ ಕಾಲದಲ್ಲಿ, ಆಯುಷ್ಯದ ಕೊನೆಯಲ್ಲಿ ಮಾಡಿಕೊಳ್ಳುವಂತಹದ್ದಲ್ಲ. ಶರೀರದಲ್ಲೂ ಶಕ್ತಿ ಇರುವಾಗಲೇ ಸಾಧಿಸುವಂತಹದ್ದು. ಈ ಎಲ್ಲಾ ವಿಚಾರಗಳು ಮೊಟ್ಟ ಮೊದಲು ಆ ಸೇಠ್‌ಜಿಯ ಕಿವಿಗೆ ಬಿದ್ದಿರಬೇಕು. ಆಗ ಜೀವ ಬಹಳ ನೊಂದುಕೊಳ್ಳತೊಡಗಿತು. ಋಗ್ಣಾವಸ್ಥೆಯಲ್ಲಿರುವ ಜೀವಕ್ಕೆ "ಅಪ್ಪಾ! ಇಲ್ಲಿವರೆಗೆ ನೀನು ನಿನ್ನಾತ್ಮನ ಹಿತಕ್ಕಾಗಿ ಪುಣ್ಯವನ್ನೇನೂ ಗಳಿಸಲಿಲ್ಲ. ಪಾಪದ ಹೊರೆಯನ್ನೇ ಹೊತ್ತೆ. ಅದರ ಫಲವಾಗಿ ಈಗ ನೀನು ಅನುಭವಿಸುತ್ತಿರುವ ರೋಗದ ಬಾಧೆಗಿಂತ ಅಸಂಖ್ಯಾತ ಪಟ್ಟು ವೇದನೆ ನರಕ ತಿರ್ಯಂಚ ಗತಿಗಳಲ್ಲಿ ಮುಂದೆ ಅನುಭವಿಸಬೇಕಲ್ಲಾ" ಎಂದು ಹೇಳಿದಾಗ ಆ ಜೀವಿಗೆ

ಆಗುವ ಭಯ, ಪಶ್ಚಾತ್ತಾಪ ಹೇಳಲಸದಳ! ಅಂತಹದ್ದೇ ಸ್ಥಿತಿ ಆ ಸೇಠ್‌ಜಿಗೆ ಆಗಿತ್ತು. ಪೂಜ್ಯಶ್ರೀಯವರಿಗೂ ಆ ವ್ಯಕ್ತಿಯ ದುಃಖದಿಂದ ಕರುಣೆ ಬಂದಿತು.

ಈ ಸೇಠ್‌ಜೀ ಕೇವಲ "ಣಮೋ ಸಿದ್ಧಾಣಂ" ಎಂದು ಜಪಮಾಡಿದರೆ ಸಾಕು ಇದು ಸರಳವೂ ಆಗಿರುತ್ತದೆ. ಸುಖಪ್ರದವೂ ಆಗಿರುತ್ತದೆ ಎಂದು ಹೇಳಿದರು. ಸೇಠ್ ಜೀ ತಮ್ಮ ಅಸ್ಪಷ್ಟ ವಾಣಿಯಿಂದ ಗುರುವಿನ ಆಜ್ಞೆ ಸ್ವೀಕರಿಸಿದರು. ವಾಸ್ತವವಾಗಿ ಪೂಜ್ಯಶ್ರೀಯವರಲ್ಲಿ ಸಿದ್ಧಭಕ್ತಿ ತುಂಬಿತ್ತು. ಅವರು ಸಲ್ಲೇಖನಾ ಸಮಯದಲ್ಲಿ ಣಮೋ ಸಿದ್ಧಾಣಂ ಎಂದೇ ಜಪಿಸುತ್ತಿದ್ದರು. ಕೊನೆಯ ಉಸಿರನ್ನೂ ಣಮೋ ಸಿದ್ಧಾಣಂ ಎಂದು ಹೇಳಿ ಎಳೆದಿದ್ದರು.

ಅದ್ಭುತ ಪಂಚ ಕಲ್ಯಾಣ ಮಹೋತ್ಸವ

ಶಿಖರಿಜಿಯಲ್ಲಿ ಪಂಚಕಲ್ಯಾಣ ಮಹೋತ್ಸವ ಬಹಳ ವೈಭವದಿಂದ ಪೂಜ್ಯಶ್ರೀಯವರ ಸನ್ನಿಧಿಯಲ್ಲಿ ನಡೆದಿತ್ತು ಭಾರತ ವರ್ಷೀಯ ದಿಗಂಬರ ಜೈನ ತೀರ್ಥಕ್ಷೇತ್ರ ಕಮಿಟಿಯ ಉತ್ಸವ ಇಂದೂರಿನ ಧನಕುಬೇರ ದಾನವೀರ ಸರ್ ಸೇಠ್ ಹುಕಮ್ ಚಂದ್ ಸೇಠ್‌ಜಿಯವರ ಅಧ್ಯಕ್ಷತೆಯಲ್ಲಿ ಬಹಳ ಉತ್ಸಾಹ ಹಾಗೂ ಉಲ್ಲಾಸ ಪೂರ್ಣವಾಗಿ ನೆರವೇರಿತು. ಆಗ ಜನಸಂದಣಿ ಅತ್ಯಧಿಕವಾಗಿತ್ತು. ಅಲ್ಲಿಯವರೆಗೆ (೧೯೨೭) ಲೌಡ್ ಸ್ಪೀಕರ್ ಸಾರ್ವಜನಿಕ ಉಪಯೋಗಕ್ಕೆ ಇನ್ನೂ ಬಂದಿರಲಿಲ್ಲ. ಆದ್ದರಿಂದ ಜನಗಳ ಗಲಾಟೆಯೋ ಗಲಾಟೆ. ಭಾಷಣವೇ ಕೇಳುತ್ತಿರಲಿಲ್ಲ, ನರ ಹರಿದು ಹೋಗುವಂತೆ ಮಾತಾಡಬೇಕಾಗುತ್ತಿತ್ತು. ಆಗ ಸಭೆಯಲ್ಲಿ ಮಾತಾಡುವುದೆಂದರೆ ಬೆಟ್ಟವನ್ನು ಹತ್ತಿದಂತೆ ಆಯಾಸದ ಕೆಲಸ! ಆಗ ಜೈನ ಮಹಾ ಸಭಾಧಿವೇಶನವೂ ನಡೆಯಿತು. ಆಗ ವಿದವಾ ವಿವಾಹ ಅನೇಕ ಸಾಮಾಜಿಕ ಸಮಸ್ಯೆಗಳು ಚರ್ಚಿಸಲ್ಪಟ್ಟವು. ಮಹೋತ್ಸವದ ಸ್ಮೃತಿರೂಪದಲ್ಲಿ ಸಂಸ್ಕೃತ ಭಾಷೆಯಲ್ಲಿ ಒಂದು ಶಿಲಾಲೇಖನವನ್ನು ಶಿಖರಿಜಿಯಲ್ಲಿ ಸ್ಥಾಪಿಸಲಾಯಿತು. ಮಹೋತ್ಸವದ ಸಂಕ್ಷಿಪ್ತ ವಿಚಾರ ಮತ್ತು ಪೂಜ್ಯಶ್ರೀಯವರ ಪುನೀತ ಪದಾರ್ಪಣವನ್ನು ಆ ಶಿಲಾಲೇಖನ ಒಳಗೊಂಡಿತ್ತು.

ಯಾವಾಗ ಸಂಘ ಶಿಖರಿಜಿ ಮುಟ್ಟಿತ್ತೋ ಆಗ ದಕ್ಷಿಣ ಪ್ರಾಂತ್ಯಗಳ ಗುರುಭಕ್ತ ಶ್ರಾವಕರು ಜಿನ ಮಂದಿರಗಳಲ್ಲಿ ಪೂಜಾಭಿಷೇಕಗಳನ್ನು ಮಾಡುತ್ತಾ ಸಂಘದ ಶುಭ ಕಾಮನೆಯನ್ನು ಮಾಡುತ್ತಿದ್ದರು. ಮಾರ್ಗದಲ್ಲಿ ಉಂಟಾಗಬಹುದಾದ ಉಪಸರ್ಗದ ಭಯ ಜನಗಳಿಗೆ ಹೆದರಿಕೆ ಹುಟ್ಟಿಸುತ್ತಿತ್ತು. ಸಂಘಕ್ಕೆ ಯಾವುದೇ ಉಪಸರ್ಗ ಭೀತಿ

ಉಂಟಾಗದಿರಲೆಂದು ಹರಕೆ ಹೊತ್ತವರೆಷ್ಟೋ? ವ್ರತ ನಿಂತವರೆಷ್ಟೋ? ಅಂದಿನ ಶ್ರಾವಕರ ಸಂಘ ಭಕ್ತಿ ಅಸಾಮಾನ್ಯವಾಗಿತ್ತು. ಪೂಜ್ಯ ಶ್ರೀಯವರ ಅಸಾಧಾರಣ ತಪಃಶಕ್ತಿ ಮತ್ತು ಜಿನೇಂದ್ರ ಭಕ್ತಿ ಲೌಕಿಕವ ಸಮಸ್ತ ಅಡ್ಡಿ ಆತಂಕಗಳನ್ನು ಸಮರ್ಥವಾಗಿ ಎದಿರಿಸಿ ಹೋದ ಹೋದೆಡೆಯಲ್ಲೆಲ್ಲಾ ಧರ್ಮಧ್ವಜ ನೀಲಾಕಾಶದಲ್ಲಿ ನಿರ್ಭಿಡೆಯಿಂದ ಹಾರಾಡುವಂತೆ ಮಾಡುತ್ತಿತ್ತು.

ಶಿಖರಿಜಿಯಲ್ಲಿ ನಡೆದ ಆ ಪಂಚಕಲ್ಯಾಣ ಅದ್ಭುತವಾದದ್ದು. ಅದೂ ಆ ಸಿದ್ಧ ಕ್ಷೇತ್ರದಲ್ಲಿ. ಆ ಸಿದ್ಧ ಪುರುಷನ ಸನ್ನಿಧಿಯಲ್ಲಿ! ಸಿದ್ಧತ್ವ ಸಾಧಿಸಿದ ತೀರ್ಥಂಕರರ ಅಲೌಕಿಕ ವಿಭೂತಿಯನ್ನು ತೋರಿಸುವ ಪಂಚಕಲ್ಯಾಣ! ಈಗ ಅದು ಒಂದು ಸವಿನೆನಪಷ್ಟೇ? ಪೂಜ್ಯಶ್ರೀಯವರು ತೀರ್ಥವಂದನೆಯ ನಂತರ ಲೋಕ ಕಲ್ಯಾಣಾರ್ಥ ಸರ್ವತ್ರ ವಿಹರಿಸಲು ಮನಸ್ಸು ಮಾಡಿದರು.

ಶಿಖರಿಜಿಯಿಂದ ಪ್ರಸ್ಥಾನ

ಅಷ್ಟಾಹ್ನಿಕ ಮಹಾಪರ್ವ ಮುಕ್ತಾಯವಾದ ಬಳಿಕ ಚೈತ್ರಶುದ್ಧ ೧ಕ್ಕೆ ಸಂಘವು ಸಮ್ಮೇದ ಶಿಖರದಿಂದ ಮುಂದಕ್ಕೆ ವಿಹಾರ ಹೊರಟಿತು. ಇಲ್ಲಿಯವರೆಗೆ ಶಿಖರಿಜಿಗೆ ಸಂಘದ ಆಗಮನದಿಂದ ಚೈತನ್ಯ ಬಂದಂತಾಗಿತ್ತು. ಸಂಘದ ವಿಹಾರದಿಂದ ಸಮ್ಮೇದಶಿಖರವು ಪ್ರಾಣವನ್ನು ಕಳೆದುಕೊಂಡ ಶವದಂತೆ ನಿರ್ಜೀವವಾಯಿತು. ಜನಗಳ ಮೈಮನಗಳು ಭಾವಸೂನ್ಯವಾದವು. ಚಟುವಟಿಕೆಯಿಂದ ತುಂಬಿದ್ದ ಆ ತೀರ್ಥರಾಜನಿಗೆ ಒಮ್ಮೆಗೇ ಮಂಕು ಬಡಿದಿತ್ತು. ಹಕ್ಕಿಗಳ ಚಿಲಿಪಿಲಿ ನಾದಕ್ಕೂ ಹೊಸ ಅರ್ಥ ಕಲ್ಪಿಸಿ ಆನಂದಿಸುತ್ತಿದ್ದ ಜನ ಸಂಘ ವಿಹಾರದಿಂದ ಮಂಕಾಗಿ ಮೂಲೆ ಹಿಡಿದರು. ಆಚಾರ್ಯಶ್ರೀಯವರ ದೇದೀಪ್ಯಮಾನ ದಿವ್ಯದೀಪ್ತಿ ಹೃದಯದ ಆಳಕ್ಕೆ ಬಹಳ ಆಳಕ್ಕೆ ಸರಿದು ಹೋಗುತ್ತಿರುವಂತೆ ಕಾಣಿಸುತ್ತಿತ್ತು. ಆ ಮಹಾಯುಗಪುರುಷನ ಚರಣ ದರ್ಶನ ನಮಗಿನ್ನೆಂದೋ? ಅವರನ್ನು ಇನ್ನೊಮ್ಮೆ ದರ್ಶನ ಮಾಡಲು ಬದುಕುಳಿಯುವೆವೋ ಎಂದು ಮುಪ್ಪಿನವರು ಕಣ್ಣಲ್ಲಿ ನೀರು ತರುತ್ತಿದ್ದರು. ಸಂಘ ವಿಹಾರದಿಂದಾದ ಜನಗಳ ಮಾನಸಿಕ ವೇದನೆ ಕರುಳು ಕಿತ್ತು ಬರುವಂತಿತ್ತು. ಸಂಘವು ಅನಂತರ ವಾಸುಪೂಜ್ಯ ತೀರ್ಥಂಕರರ ನಿರ್ವಾಣ ಸ್ಥಳ ಚಂಪಾಪುರಿಯ ವಂದನಾರ್ಥ ಪ್ರಸ್ಥಾನ ಬೆಳೆಸಿತು.

ನಾಥ ನಗರದ ಹತ್ತಿರ ಚಂಪಾಪುರಿಯಲ್ಲಿ ವಾಸುಪೂಜ್ಯ ತೀರ್ಥಂಕರರ ಚರಣ ಚಿನ್ಹೆ ಇದೆ. ಸವರ್ಣ ವರ್ಣದ ಪ್ರತಿಮೆಯ ದರ್ಶನದಿಂದ ಎಲ್ಲರಿಗೂ

ಆನಂದವಾಯಿತು. ಐದು ಬಾಲಯತಿ ತೀರ್ಥಂಕರರಲ್ಲಿ ಇವರು ಮೊದಲಿಗರು. ಅಲ್ಲಿಂದ ಸಂಘ ಭಗವಾನ್ ಮಹಾವೀರರ ವಿಹಾರ ಭೂಮಿ ರಾಜಗೃಹದತ್ತ ಹೊರಳಿತು. ರಾಜಗೃಹ ಶ್ರೇಣಿಕ ರಾಜನ ರಾಜಧಾನಿಯಾಗಿತ್ತು. ಮಹಾವೀರ ತೀರ್ಥಂಕರನ ಪ್ರಥಮ ಶ್ರೋತೃವಾಗುವ ಭಾಗ್ಯ ಶ್ರೇಣಿಕನದಾಗಿತ್ತು. ಮುನಿಗಳೊರ್ವರಿಗೆ ಮಾಡಿದ ಉಪಸರ್ಗದಿಂದ ಶ್ರೇಣಿಕನಿಗೆ ಏಳನೆ ನರಕಾಯು ಬಂಧವಾಗಿತ್ತು. ಅವನ ಭಾವನೆಗಳು ಮಿಥ್ಯಾತ್ವದಿಂದ ಸಮ್ಯಕ್ತ್ವಕ್ಕೆ ಸಂಕ್ರಮಣಗೊಂಡಾಗ, ಸಮ್ಯಕ್ತ್ವದ ಪ್ರಭಾವದಿಂದ ಏಳನೆ ನರಕಾಯು ಒಂದನೆ ನರಕಕ್ಕೆ ಇಳಿದಿತ್ತು. ಜೀವಿಯ ಸ್ಥಿತಿ ಬದಲಾಗುವುದೇ ಹೊರತು ಗತಿ ಬದಲಾಗುವುದಿಲ್ಲ ಎಂದು ಆಗಮದಲ್ಲಿ ಹೇಳಿದೆ. ತತ್ಕಾರಣ ಶ್ರೇಣಿಕ ನರಕದಲ್ಲಿ ಜನ್ಮ ತಾಳುವುದು ಅನಿವಾರ್ಯವಾಗಿದ್ದರೂ ಆಯುಸ್ಥಿತಿ ಗಣನೀಯ ಪ್ರಮಾಣದಲ್ಲಿ ಇಳಿದಿತ್ತು. ಮಹಾವೀರ ತೀರ್ಥಂಕರರಲ್ಲಿ ಅವನು ತೋರಿದ ಅಸೀಮ ಭಕ್ತಿಯ ಪರಿಣಾಮವಾಗಿ ಭವಿಷತ್ಕಾಲದ ಪ್ರಥಮ ತೀರ್ಥಂಕರ (ಮಹಾಪದ್ಮ) ನಾಗುವ ಸೌಭಾಗ್ಯ ಅವನಿಗೆ ಪ್ರಾಪ್ತವಾಗಿತ್ತು. ಇಂದಿಗೆ ಸುಮಾರು ಎಂಬತ್ತು ಸಾವಿರ ವರ್ಷಗಳ ಅನಂತರ ಇದೇ ಭರತ ಖಂಡದಲ್ಲಿ ಆರಂಭಗೊಂಡಿರುವ ಉತ್ಸರ್ಪಿಣೀ ಕಾಲದ ದುಷಮ-ಸುಷಮ ಎಂಬ ಮೂರನೇ ಕಾಲದ ಚತುರ್ವಿಂಶತಿ ತೀರ್ಥಂಕರರ ಉದಯದ ಉದ್ಘಾಟನೆಯನ್ನು ಶ್ರೇಣಿಕನು ಮಹಾಪದ್ಮ ಪ್ರಥಮ ತೀರ್ಥಂಕರನ ರೂಪದಲ್ಲಿ ಮಾಡಲಿದ್ದಾನೆ. ಅಂತಹ ಮಹಾವಿಭೂತಿಪುರುಷ, ಭವಿಷತ್ಕಾಲದ ಪ್ರಥಮ ತೀರ್ಥಂಕರನಾಗುವ ಜೀವ ಶ್ರೇಣಿಕ ಆಳಿದ ರಾಜಧಾನಿ ಅದಾಗಿತ್ತು! ಸಂಘದ ವಿಹಾರ ಅತ್ತ ನಡೆಯಿತು. ಅಲ್ಲಿರುವ ಪಂಚಶೈಲದಲ್ಲಿ ಒಂದಾದ ವಿಪುಲಾಚಲ ಪರ್ವತದ ಮೇಲೆ ವಾಸುಪೂಜ್ಯರ ಹೊರತು ಎಲ್ಲಾ ತೀರ್ಥಂಕರರ ಸಮವಸರಣ ಬಂದಿದ್ದವು.

ವಿಪುಲಾಚಲ

ವಿಪುಲಾಚಲ ಪರ್ವತವೇರುತ್ತಾ ಹೋದಂತೆ ಗತ ವೈಭವದ ಮಧುರ ಸ್ಮರಣೆ ಸ್ಮೃತಿಃ ಪಟಲದ ಮೇಲೆ ಮೂಡಿ ನಿಲ್ಲುತ್ತದೆ. ನಯನ ಮನೋಹರ ಸಮವಸರಣ, ದ್ವಾದಶಗಣ ಪರಿವೇಷ್ಟಿತ ತ್ರಿಮೇಖಲಾಪೀಠ ಭಗವಂತನ ಪರಮೌಧಾರಿಕ ದಿವ್ಯ ಶರೀರ, ಭಗವಂತನನ್ನು ಸದಾ ವಂದಿಸುವ ಶತೇಂದ್ರರು, ಭಗವಂತನ ದಿವ್ಯವಾಣಿಯನ್ನು ಬಿಡಿಸಿ ಹೇಳುವ ಗೌತಮಾದಿ ಗಣಧರರು, ಭಗವಂತನ ದಿವ್ಯಧ್ವನಿಯನ್ನು ಕೇಳಲು ಕಾದುಕುಳಿತ ಅಸಂಖ್ಯಾತ ಭವ್ಯಜೀವಿಗಳು, ಈ ಕಲ್ಪನೆ

ನಮ್ಮನ್ನು ಎರಡುವರೆ ಸಾವಿರ ವರ್ಷಗಳ ಹಿಂದಕ್ಕೆ ಕೊಂಡೊಯ್ಯುತ್ತದೆ. ಆ ಅದ್ಭುತ ದಿನಗಳ ಕಲ್ಪನೆಯಿಂದ ಮನಸ್ಸು ಗರಿಗೆದರಿ ಕುಣಿಯುತ್ತದೆ.

ಪಾವಾಪುರಿಯಲ್ಲಿ ಮುನಿಸಂಘ

ರಾಜಗಿರಿಯ ವಂದನೆ ಮಾಡಿ ಸಂಘ ಪಾವಾಪುರಿಯತ್ತ ಪ್ರಸ್ಥಾನ ಬೆಳೆಸಿತು. ಜಲಮಂದಿರದ ಒಳಗೆ ಮಹಾವೀರ ಭಗವಂತನ ಚರಣ ಚಿಹ್ನೆಗಳಿವೆ. ಕೆರೆಯು ಸುಮಾರು ಅರ್ಧ ಮೈಲು ಉದ್ದಗಲವಿದೆ. ಕೆರೆಯ ಮಧ್ಯ ಜಲಮಂದಿರವಿದೆ. ಆ ಸರೋವರದಲ್ಲಿ ಸುವಾಸನಾಯುಕ್ತ ಕಮಲಗಳು ಸದಾ ಅರಳಿರುತ್ತವೆ. ಮಂದಿರ ಅಮೃತ ಶಿಲೆಯಿಂದ ನಿರ್ಮಾಣವಾಗಿದೆ. ಪೂರ್ಣಿಮೆಯ ದಿನ ಆ ಮಂದಿರದ ಸೊಬಗನ್ನು ಸವಿಯಲು ಎರಡು ಕಣ್ಣುಗಳೂ ಸಾಲವು. ಭಗವಂತನ ಅಂತರಂಗ ಎಷ್ಟೋ ಉಜ್ವಲವೋ, ಮಂದಿರವೂ ಅಷ್ಟೇ ಉಜ್ವಲವಾಗಿ ಕಾಣುತ್ತದೆ. ಆ ಸರೋವರದಿಂದ ಮಂದಿರಕ್ಕೆ ಇನ್ನಷ್ಟು ಸೊಬಗು ಬಂದಿದೆ. ಆ ಸರೋವರದಲ್ಲಿ ದೊಡ್ಡ ದೊಡ್ಡ ಮೀನುಗಳು ಸ್ವಚ್ಛಂದವಾಗಿ ಕ್ರೀಡಿಸುತ್ತವೆ. ಜೀವ ಕೋಟಿಯನ್ನು ರಕ್ಷಿಸುವ ಭಗವಂತನ ಅಹಿಂಸಾಮಯ ವಾಣಿ ಅಲ್ಲಿ ಸ್ಥಾಪಿತವಾಗಿದೆ. ಮಂದಿರದ ಸಮೀಪ ಸುಂದರ ವನವಿದೆ. ವಿದೇಶಿಯರೂ, ಮಂದಿರದ ಸೌಂದರ್ಯಕ್ಕೆ, ಶಾಂತಿಗೆ ಮಾರು ಹೋಗುತ್ತಾರೆ.

ಜಲಮಂದಿರದಲ್ಲಿ ಚರಣ ಚಿಹ್ನೆಗಳಿವೆ. ಅದು ನಿರ್ವಾಣ ಸ್ಥಳ. ಆಚಾರ್ಯಯತಿ ವೃಷಭರು ಬರೆದಿದ್ದಾರೆ.

"ವೀರ ಭಗವಾನರು ಕಾರ್ತೀಕ ಕೃಷ್ಣ ಚತುರ್ದಶಿಯ ಪ್ರಭಾತ ಸ್ವಾತಿ ನಕ್ಷತ್ರದಲ್ಲಿ ಪಾವಾಪುರಿಯ ಮಧ್ಯೆ ಒಬ್ಬರೇ ಮುಕ್ತರಾದರು" ಅವರ ಜೊತೆಯಲ್ಲಿ ಇನ್ನಾವ ಮುನಿಯೂ ಮುಕ್ತರಾಗಲಿಲ್ಲ. ಪಾರ್ಶ್ವನಾಥ ಸ್ವಾಮಿಯೊಡನೆ ಮುವ್ವತ್ತು ನಾಲ್ಕು ಮುನಿಗಳು ಶ್ರಾವಣಶುದ್ಧ ಸಪ್ತಮಿಯಲ್ಲಿ ಸಂಧ್ಯಾಕಾಲದಲ್ಲಿ ಸಮ್ಮೇದಗಿರಿಯಲ್ಲಿ ಮುಕ್ತರಾಗಿದ್ದರು. ಜಲ ಮಂದಿರದಲ್ಲಿ ಮಹಾವೀರ ಭಗವಂತನ ಖಡ್ಗಾಸನದ ಮೂರ್ತಿ ಇದೆ. ಆಚಾರ್ಯರು ಹೀಗೆ ಹೇಳಿದ್ದಾರೆ.

"ಯಾವ ಜೀವ ಸಂಯಮ ಹಾಗೂ ಯೋಗಯುಕ್ತ ಮುದ್ರೆಯಿಂದ ಧ್ಯಾನಸ್ಥಿತವಾಗಿ ವೀರ ಜಿನೇಂದ್ರನ ಚರಣಗಳಿಗೆ ಪ್ರಣಾಮ ಮಾಡುತ್ತದೋ, ಅದು ಜಗತ್ತಿನಲ್ಲಿ ವೀತಶೋಕವುಳ್ಳದ್ದಾಗುತ್ತದೆ. ವಿಷಯ ಕಷಾಯಗಳ ಸಂಕಟದಿಂದ

ಪಾರಾಗುತ್ತದೆ" ಈಗ ಮಹಾವೀರ ಪ್ರಭುವಿನ ಶಾಸನ ಪ್ರವರ್ತಿಸುತ್ತಿದೆ. ಆಚಾರ್ಯಶ್ರೀಯವರು ಭಗವಂತನ ಅಸೀಮ ಭಕ್ತಿಯಲ್ಲಿ ಮಿಂದೇಳುತ್ತಿದ್ದರು.

ನಾನು ಒಂದು ದಿನ ಅವರಲ್ಲಿ ಕೇಳಿದೆ.

"ಸ್ವಾಮಿನ್ ! ತಮ್ಮ ತಪಸ್ಸು ಹಾಗೂ ಆತ್ಮ ತೇಜಸ್ಸಿನಿಂದಲೇ ಅಸಂಭವವೆಂದು ತೋರುವ ದೊಡ್ಡ ದೊಡ್ಡ ಕೆಲಸಗಳೂ ಸುಲಭವಾಗಿ ಬಿಡುತ್ತವೆಯಲ್ಲ ?"

ಅವರು: "ಇದರಲ್ಲಿ ನಮ್ಮದೇನಿದೆ ? ಇದೆಲ್ಲಾ ಮಹಾವೀರ ಭಗವಾನರ ಕೃಪೆ."

ಅಲ್ಲಿಂದ ಸಂಘ ಗುಣವಾಕ್ಕೆ ಹೊರಟಿತು. ಹಿಂದೂ ಮುಸಲ್ಮಾನರಾದಿಯಾಗಿ ಅವರ ಉಪದೇಶ ಲಾಭ ಪಡೆದರು. ಮದ್ಯ ಮಧು ಮಾಂಸ ತ್ಯಾಗ ವ್ರತ ಬಹಳ ಜನ ಸ್ವೀಕರಿಸಿದರು. ಆಗ ಭೀಷಣ ಝಳವಿತ್ತು, ಆ ಉಷ್ಣ ಝಳಕ್ಕೆ ಜನ ಕಂಗಾಲಾಗಿ ಹೋಗುತ್ತಿದ್ದರು. ಆದರೂ ಮಹಾವ್ರತಿ ಮುನಿಗಳು ಈ ಉಷ್ಣ ಪರೀಷಹವನ್ನು ತಣ್ಣನೆ ಸಹಿಸುತ್ತಿದ್ದರು. ಅದರಿಂದ ಪೂರ್ವಾರ್ಜಿತ ಕರ್ಮ ಅಸಂಖ್ಯಾತ ಗುಣ ಕ್ಷಯವಾಗುತ್ತಿತ್ತು.

ಕಾಶಿಯತ್ತ ವಿಹಾರ

ಅಲ್ಲಿಂದ ಸಂಘ ಕಾಶಿಯತ್ತ ಹೊರಟಿತು. ಕಾಶಿಯಲ್ಲಿ ಬಹಳ ವೈಭವದ ಸ್ವಾಗತ ಕೋರಲಾಯಿತು. ಆ ನಗ್ನ ದಿಗಂಬರ ಯತಿಗಳು ನಿರ್ವಿಕಾರವಾಗಿ ರಸ್ತೆಯಲ್ಲಿ ಹೋಗುವುದನ್ನು ನೋಡಿ ವೈದಿಕ ಹಾಗೂ ಹಿಂದೂ ಸಹೋದರರು ಪರಮಾಶ್ಚರ್ಯ ಹಾಗೂ ಪೂಜ್ಯಭಾವದಿಂದ ನಮ್ರೀಭೂತರಾಗುತ್ತಿದ್ದರು. ಕಾಶಿಗೆ ಶಿವಪುರಿಯೆಂದು ಇನ್ನೊಂದು ಹೆಸರಿತ್ತು, ಶಿವಪುರಿ ಎಂದರೆ ಮೋಕ್ಷ ಸಾಧಿಸುವ ಸ್ಥಾನ ಎಂದೂ ಅರ್ಥವಾಗುತ್ತದೆ. ಸುಪಾರ್ಶ್ವ ಮತ್ತು ಪಾರ್ಶ್ವನಾಥ ತೀರ್ಥಂಕರರ ಜನ್ಮಭೂಮಿ ಅದಾಗಿತ್ತು, ಅಲ್ಲಿ ಸ್ವಲ್ಪ ಕಾಲವಿದ್ದು ಸಂಘವು ಪ್ರಯಾಗದತ್ತ ಮುನ್ನಡೆಯಿತು. ಕಾಶಿ ಮತ್ತು ಪ್ರಯಾಗದ ಅಂತರ ಸುಮಾರು ೧೨೦ ಮೈಲಿಗಳು. ಕೆಲವು ದಿನಗಳ ಪ್ರಯಾಣದಿಂದ ಪ್ರಯಾಗ ತಲ್ಪಿತು. ನಂತರ ಗಂಗಾತಟದಲ್ಲಿ ವಿಶ್ರಮಿಸಿತು. ಈ ನಗರದ ಪ್ರಾಚೀನ ಹೆಸರೂ ಪ್ರಯಾಗ ಎಂದೇ ಇತ್ತು, ಬಹಳ ದೊಡ್ಡ ಉತ್ಸವದೊಡನೆ ನಗರದೊಳಗೆ ಸ್ವಾಗತಿಸಲಾಯಿತು. ಅಲ್ಲಿಯ ಧರ್ಮಶಾಲೆಯೊಂದರಲ್ಲಿ ಸಂಘ ಬಿಡಾರ ಹೂಡಿತ್ತು, ನಾಲ್ಕು ದಿನಗಳ ಮೇಲೆ ಪೂಜ್ಯಶ್ರೀಯವರಿಗೆ ಜ್ವರ ಕಾಣಿಸಿತು. ಪ್ರಯಾಣದ ಮೇಲೆ ಪ್ರಯಾಣ, ಬಿಡುವಿಲ್ಲದ ಉಪನ್ಯಾಸ ಕಾರ್ಯಕ್ರಮ ಶರೀರದ

ಮೇಲೆ ಹೆಚ್ಚು ಒತ್ತಡ ತಂದಿತ್ತು, ಅಸ್ವಸ್ಥತೆಯ ಕಾರಣ ಸಂಘವು ಅಲ್ಲಿ ಹತ್ತು ದಿನಗಳವರೆಗೆ ನಿಲ್ಲಬೇಕಾಯಿತು. ಅಲ್ಲಿ ಮುನಿ ಶ್ರೀವೀರಸಾಗರ ಮತ್ತು ನೇಮಿಸಾಗರರ ಕೇಶ ಲೋಚನಗಳಾದವು. ಸಾವಿರಾರು ನಾಗರೀಕರು ಈ ಸಮಾರಂಭದಲ್ಲಿ ಹಾಜರಿದ್ದು ಬೆಚ್ಚಿಬಿದ್ದರು. ತಲೆ ಗಡ್ಡ ಮೀಸೆಗಳ ಕೂದಲನ್ನು ಕೈಯಿಂಲೇ ಕಿತ್ತು ಹಾಕುವುದೇನು ಸಾಮಾನ್ಯವೇ? ಒಬ್ಬ ವೀರ ಒಂದು ಸಾಮ್ರಾಜ್ಯವನ್ನೇ ಕಟ್ಟಬಲ್ಲ. ಯುದ್ಧದಲ್ಲಿ ಸಾವಿರಾರು ಜನಗಳನ್ನು ಗೆಲ್ಲಬಲ್ಲ. ಆದರೆ ತನ್ನ ಒಳಗೇ ಮಾರ್ಮಲೆತು ನಿಂತಿರುವ ರಾಗ-ದ್ವೇಷಾದಿ ಶತೃಗಳನ್ನು ಗೆಲ್ಲಬಲ್ಲನೆ? ಕರ್ಮದ ಬೇರುಗಳನ್ನೇ ಕಿತ್ತು ಹಾಕುವಂತೆ ತಲೆಕೂದಲನ್ನು ಕಿತ್ತು ಹಾಕುವುದೇನು ಸಾಮಾನ್ಯರ ಕೆಲಸವೇ? ಮುನಿಗಳ ಶರೀರದ ನಿರ್ಮಮಕಾರ ವೃತ್ತಿ ನೋಡಿ ಅನ್ಯಧರ್ಮೀಯರು ಬೆರಗಾಗಿ ಹೋದರು. ಸಂಘವು ಆಷಾಡಿ ವದಿ ಸಪ್ತಮಿ ೧೯೨೮ರಂದು ರೀವಾ ಸೇರಿತು. ಸರ್ಕಾರಿ ಕುದುರೆ, ಆನೆ, ಬ್ಯಾಂಡ್ ಗಳೊಡನೆ ಭಾರಿ ಮೆರವಣಿಗೆ ಹೊರಟಿತು. ನಿಷ್ಪ್ರರಾದ ಮುನಿಗಳಿಗೇಕೆ ಇಂತಹ ಉತ್ಸವ ಎಂದು ಯಾರಾದರೂ ಕೇಳಬಹುದು.

ಇದು ವಾಸ್ತವಿಕ ಪ್ರಶ್ನೆ. ಇಂತಹ ಉತ್ಸವಗಳಿಂದ ಅವರಿಗೆ ಏನೂ ಆಗಬೇಕಾಗಿಲ್ಲ.

ಇಂತಹ ಉತ್ಸವಾದಿಗಳಲ್ಲಿ ಅವರ ಮನಸ್ಸು ತೊಡಗುವುದಿಲ್ಲ. ಯೋಗಿಗಳು ಬಾಹ್ಯದ ಆಡಂಬರಗಳನ್ನು ಉಪೇಕ್ಷ ಮಾಡಿ ಆತ್ಮ ಸಮಾರಾಧನೆಯಲ್ಲಿ ಸಂಲಗ್ನರಾಗಿರುತ್ತಾರೆ. ಆದರೆ ಇಂತಹ ಉತ್ಸವಗಳು ಲೋಕ ಕಲ್ಯಾಣಕ್ಕೆ ಕಾರಣಗಳಾಗಿವೆ. ಇಂತಹ ಧಾರ್ಮಿಕ ಉತ್ಸವಗಳಿಂದ ಎಷ್ಟೋ ಜನ ಪ್ರಭಾವಿತರಾಗಿ ಧರ್ಮ ಮತ್ತು ಧರ್ಮದ ಫಲದಲ್ಲಿ ಅನುರಕ್ತರಾಗುತ್ತಾರೆ. ಅವರ ಉಪದೇಶ ಕೇಳಲು ಉತ್ಸಾಹ ತೋರಿಸುತ್ತಾರೆ. ಹೀಗೆ ಅನೇಕ ಜೀವಿಗಳಿಗೆ ಆತ್ಮ ಕಲ್ಯಾಣ ಮಾರ್ಗ ತೆರೆಯುತ್ತದೆ. ಆದ್ದರಿಂದ ಧಾರ್ಮಿಕ ಉತ್ಸವಾದಿಗಳು ಲೋಕಕಲ್ಯಾಣಕ್ಕೆ ಕಾರಣವಾಗಿವೆ. ಧರ್ಮ ಪ್ರಭಾವನೆ ಸಮ್ಯಕ್ತ್ವದ ಒಂದು ಅಂಗವೆಂದೂ ಹೇಳಿದ್ದಾರೆ. ಈ ಅಂಗವನ್ನು ಪೂರ್ಣಗೊಳಿಸುವುದು ಶ್ರಾವಕರ ಕರ್ತವ್ಯ. ದೊಡ್ಡ ದೊಡ್ಡ ಆರಾಧನೆ ಉತ್ಸವಾದಿ ಧರ್ಮ ಪ್ರಭಾವನೆಗಳು ಎಷ್ಟೋ ಬಾರಿ ಸಮ್ಯಕ್ತ್ವದ ಉದಯಕ್ಕೆ ಬೀಜದಂತಿರುತ್ತವೆ.

ಎಷ್ಟೋಜನ ಪೂಜ್ಯಶ್ರೀಯವರ ಉಪದೇಶದಿಂದ ವ್ರತಗಳನ್ನು ಸ್ವೀಕರಿಸಿದರು. ಜೀವಿಗಳ ಪುಣ್ಯವು ಯಾವದೇಶ, ಯಾವಕಾಲದಲ್ಲಿ ಹೇಗೆ ಉದಯಕ್ಕೆ ಬಂದು ಮುಕ್ತಿ ಮಾರ್ಗಕ್ಕೆ ಹಚ್ಚುವುದೋ ಕಂಡವರಾರು? ಬಹಳ ಹಿಂದೆ ತಲೆಯಲ್ಲಿ ನರೆತ

ನರಗೂದವೊಂದರಿಂದಲೇ ವಿರಕ್ತಗೊಂಡು ಮುಕ್ತಿ ಮಾರ್ಗದಲ್ಲಿ ತೆರಳಲು ಸಾಕಾಗಿತ್ತು. ಈಗ ಕಾಲದೋಷದಿಂದ ಜೀವಿಗಳಿಗೆ ಕರ್ಮದ ಉದಯ ಸದಾ ತೀವ್ರವಾಗಿರುವುದರಿಂದ ಸಾಧಾರಣ ಕಾರಣಗಳು ಮನಸ್ಸನ್ನು ಮುಕ್ತಿಯತ್ತ ತಿರುಗಿಸಲು ಅಸಮರ್ಥವಾಗಿವೆ. ಮಹಾತಪಸ್ವಿಗಳ ದರ್ಶನ ಮಾತ್ರದಿಂದಲೇ ಎಷ್ಟೋ ಜನಗಳ ಮೋಹ ಜ್ವರ ಇಳಿದು ದೀಕ್ಷೆ ಕೈಗೊಂಡಿರುವ ಉದಾಹರಣೆಗಳೆಷ್ಟಿಲ್ಲ. ಈ ಕಾರಣದಿಂದಲೇ "ಸಾಧೂನಾಂ ದರ್ಶನೇನ ಪುಣ್ಯಂ" ಎದು ಹೇಳಿದ್ದಾರೆ. ಇನ್ನು ಸಾಧುಗಳ ದರ್ಶನವನ್ನೂ ಮಾಡಿ ಅತಿಶಯ ಭಕ್ತಿ ಪ್ರಕಟಿಸಿದರೆ ಅಂತಹ ಜೀವಿಯ ಪುಣ್ಯಾತಿಶಯವನ್ನು ಯಾರು ಹೊಗಳಬಲ್ಲರು. ಒಂದು ವೇಳೆ ಆ ಜೀವಿ ಮುನಿಮಹಾತ್ಮರ ನಿರಂತರ ಸೇವೆಯಲ್ಲೇ ನಿರತವಾಗಿ ಬಿಟ್ಟರೆ ಕೈವಲ್ಯ ಕೈಯ್ಯಲ್ಲೇ! ಆದ್ದರಿಂದ ಮುನಿಮಹಾತ್ಮರ ಬಗ್ಗೆ ಮಾಡುವ ಉತ್ಸವಾದಿಗಳು ಸ್ತುತಿ ಸ್ತೋತ್ರಾದಿಗಳು ಭಕ್ತಿ-ಸೇವಾದಿಗಳು ಜಗತ್ಕಲ್ಯಾಣಕಾರಿಗಳಾಗಿರುತ್ತವೆ. ಪೂಜ್ಯಶ್ರೀಯವರು ಮೋಹ ಜ್ವರ ಪೀಡಿತ ಜೀವಿಗಳಿಗೆ ಸಂಯಮದ ಸಂಜೀವಿನಿ ಕುಡಿಸುತ್ತಾ ಮುಂದೆ ಮುಂದೆ ಹೋಗುತ್ತಿದ್ದರು. ಮಹಾವ್ರತ ಧಾರೀ ಮುನಿಗಳಿಂದ ಈ ಜಗತ್ತಿಗೆ ಎಷ್ಟು ಪ್ರಮಾಣದಲ್ಲಿ ಹಿತವಾಗುತ್ತದೋ ಅಷ್ಟು, ಎಷ್ಟೋ ಯೋಜನೆಗಳಿಂದಲೂ ಸಾಧಿಸಲಾಗುವುದಿಲ್ಲ.

೧೧ಜೂನ್ ೧೯೨೮ರಂದು ರೀವಾ ಸಮಾಜ ಸಂಘಪತಿಗೆ ತಮ್ಮ ಕೃತಜ್ಞತೆ ಮತ್ತು ವಾತ್ಸಲಭಾವ ಪ್ರಕಟಿಸಿ ಸನ್ಮಾನ ಪತ್ರ ಸಮರ್ಪಿಸಿತು.

ಅಲ್ಲಿಂದ ಸಂಘ ಮೆಹರ್ ರಾಜ್ಯ ಪ್ರವೇಶಿಸಿತು. ಮುಂದೆ ಹೋದಂತೆ ಪಲಾಸ್ ವಾಡ ಎಂಬ ಗ್ರಾಮ ಸಿಕ್ಕಿತು. ಅಲ್ಲಿ ಒಬ್ಬ ಮುಗ್ಧ ಗೃಹಸ್ಥ ಮಹರಾಜರ ಬಳಿ ವಿನಮ್ರನಾಗಿ ಬಂದ. ಇವರು ನಮ್ಮ ನಾಗಬಾಬಾಗಳಿದ್ದಂತೆ ಎಂದು ಭಾವಿಸಿದ. ನಾಗಾ ಬಾಬಾಗಳು ತಂಭಾಕು ಗಾಂಜಾ ಸೇದುತ್ತಾರೆ. ತಿನ್ನುಣ್ಣುವುದರಲ್ಲಿ ಸ್ವಚ್ಛಂದಿಗಳು. ಅವರು ಧೂಮಪಾನ ಮಾಡುವಾಗ ಭಗವಂತನೂ ಧೂಮಪಾನ ಮಾಡುತ್ತಾನೆ ಎಂದು ಉಪದೇಶ ಕೊಡುತ್ತಾರೆ.

ಮೋಹಪರವಶ ಜೀವಿಗಳು ಏನೆಲ್ಲಾ ಸೃಷ್ಟಿಸಬಲ್ಲರೋ? ಒಮ್ಮೆ ಇಂದ್ರನು ಭಗವಂತನನ್ನು ಕೇಳಿದನಂತೆ.

"ಹೇ! ಚತುರಾನನ ಈ ಭೂಮಿಯಲ್ಲಿ ಶ್ರೇಷ್ಠ ವಸ್ತು ಯಾವುದು? ನಾಲ್ಕು ಮುಖಗಳಿಂದ ಬ್ರಹ್ಮ ಹೇಳಿದನಂತೆ "ತಂಬಾಕು!" ನೋಡಿ ಹೇಗಿದೆ! ಮೋಹಿ ಜೀವಿಗಳ ಕಲ್ಪನೆ:

ಈ ಕಾಲದಲ್ಲಿ ಸತ್ಯದ ಸೂರ್ಯನನ್ನು ಮೋಹದ ಮೋಡಗಳು ಮುಚ್ಚಿವೆ. ಕುಡಿದವನಿಗೆ ಕುಣಿದದ್ದೇ ಕುಣಿತ. ತಿಪ್ಪೆಯೂ ಉಪ್ಪರಿಗೆಯು ಮನೆ ಮೋಹದ ಅಮಲಿನಲ್ಲಿ ದೊಡ್ಡ ದೊಡ್ಡ ವಿದ್ವಾಂಸರೂ ಮುಳುಗಿ ಹೋಗಿರುವಾಗ ಹಳ್ಳಿಯ ಹುಂಬನಿಗೇನು ತಿಳಿದೀತು ತತ್ವದ ತಿರುಳು ! ಆ ಗೃಹಸ್ಥನಿಗೂ ಅಂತಹದ್ದೇ ಹುಂಬತನ ಹುಟ್ಟಿತ್ತು !

ಈ ಮಹಾಪುರುಷನಿಗೆ ಒಮ್ಮೆ ನಾನು ಗಾಂಜಾ ಸೇದಿಸಬೇಕೆಂಬ ಭಾವ ಹುಟ್ಟಬೇಕೆ ? ಸನಿಹಕ್ಕೆ ಬಂದು ವಿನಯವಾಗಿ ಕೇಳಿಯೇ ಬಿಟ್ಟ.

"ಸ್ವಾಮೀಜಿ ! ಒಂದು ಪ್ರಾರ್ಥನೆ ಇದೆ ಆಜ್ಞೆ ಮಾಡಿ !"

"ಏನು ಹೇಳಬೇಕೆಂದಿರುವೆಯೋ ಹೇಳು"

ಪೂಜ್ಯಶ್ರೀಯವರು ಪ್ರಸಾದಿಕ ವಾಣಿಯಲ್ಲಿ ಹೇಳಿದರು.

"ಭಗವಾನ್ ! ಸ್ವಲ್ಪ ಗಾಂಜಾ ತಂದು ಕೊಡುತ್ತೇನೆ. ಸೇದಿರಿ. ಅದರಿಂದ ನಿಮ್ಮ ಮನಸ್ಸು ಬಹಳೇ ಹಗುರಾಗುತ್ತದೆ."

ಪೂಜ್ಯ ಶ್ರೀಯವರಿಗೆ ಅವನ ಮುಗ್ಧ ಮನಸ್ಸಿಗೆ ಎದೆ ಕರಗಿತು. "ನಮ್ಮ ಮನಸ್ಸು ಸದಾ ಹಗುರಾಗಿರುತ್ತದೆ. ನಾವು ಗಾಂಜಾ ಕುಡಿಯುವುದಿಲ್ಲ." ಈ ಮಾತು ಕೇಳಿ ಆ ಗೃಹಸ್ಥ ಚಕಿತನಾದ.

"ಮತ್ತೆ ಎಲ್ಲಾ ಸಾಧುಗಳೂ ಗಾಂಜಾ ಕುಡಿಯುವರಲ್ಲಾ ಮಹರಾಜ್" ಮತ್ತೊಂದು ಮುಗ್ಧ ಪ್ರಶ್ನೆ ಹಾಕಿದ್ದ.

ನೋಡು ! ಅದು ಮಾದಕ ಪದಾರ್ಥ. ಅದರ ಸೇವನೆಯಿಂದ ಮನಸ್ಸು ವಿಕಾರವಾಗುತ್ತದೆ. ಮಲಿನತೆ ಹುಟ್ಟುತ್ತದೆ. ಅದರಿಂದ ಪಾಪ ಸಂಘಟನೆ ಆಗುತ್ತದೆ. ನಿಜವಾದ ಸಾಧುಗಳಿರಲಿ ಸಾಮಾನ್ಯ ಮನುಷ್ಯನೂ ಸೇದಬಾರದು."

ಈ ಮಾತು ಅವನಿಗೆ ಒಪ್ಪಿಗೆಯಾದಂತೆ ಕಂಡಿತು. ಆದರೂ ಅವರಿಗೆ ಏನಾದರೊಂದು ಕೊಡಬೇಕೆಂಬ ಹಂಬಲ ಹೋಗಲಿಲ್ಲ. ಅದೇ ಭಾವನೆಯಿಂದಲೇ ಕುಂಟುತ್ತಾ ಅವರ ಬೆನ್ನುಹತ್ತಿದ.

"ಮಹರಾಜ್ ! ಸ್ವಲ್ಪ ಮಿಠಾಯಿ ತಂದುಕೊಡುತ್ತೇನೆ. ಅದನ್ನು ತಿಂದು ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು" ಆ ಜೀವದ ಮುಗ್ಧತೆಗೆ ಅವರ ಮನಸ್ಸು ಮತ್ತಷ್ಟು

ಕರಗಿತು. ಈ ಜೀವಕ್ಕೆ ಕಲ್ಯಾಣಕಾರಿಯಾದ ಯಾವುದಾದರೊಂದು ವ್ರತವನ್ನು ಕೊಡಬೇಕೆಂಬ ಭಾವ ಅವರ ಮನಸ್ಸಿನಲ್ಲಿ ಸುಳಿಯಿತು. ಸ್ವಲ್ಪ ನಿಂತು ಒಂದೆರಡು ಮಾತು ಹೇಳತೊಡಗಿದರು.

"ಅಪ್ಪಾ ! ಸಾಧುಗಳ ಭೋಜನ ನಿಯಮ ಕಠಿಣವಾಗಿದೆ. ಹೇಗೋ ಹಾಗೆ ಭೋಜನ ಮಾಡುವಂತಿಲ್ಲ. ದಿನದಲ್ಲಿ ಒಮ್ಮೆ ಮಾತ್ರ ಶುದ್ಧ ಆಹಾರ ನಾವು ಕೈಗೊಳ್ಳುತ್ತೇವೆ." ಇಷ್ಟು ಹೇಳಿ ಅವರ ಜ್ಞಾನ ಮಟ್ಟಕ್ಕೆ ತಕ್ಕಂತೆ ಒಂದೆರಡು ತಿಳಿ ಮಾತು ಹೇಳಿದರು. ಆಗ ಆ ಗೃಹಸ್ಥ ಮತ್ತು ಆತನ ಹೆಂಡತಿ, ಆ ಎರಡೂ ಮುಪ್ಪಿನ ಜೀವಗಳಿಗೂ ಕಾಲಲಬ್ಧಿ ಬಂದಿತ್ತೇನೋ. ಆ ಗೃಹಸ್ಥನ ಹೆಂಡತಿಯು ಜೀವ ಜೀವನ ಪೂರ್ತಾ ನೀರು ಶೋಧಿಸಿ ಕುಡಿಯಲು ವ್ರತ ತೆಗೆದುಕೊಂಡಿತು. ಆ ಮುದುಕ ಪರಸ್ತ್ರೀ ವಿರತಿ ವ್ರತ ತೆಗೆದುಕೊಂಡ. ಅವರ ಆಶೀರ್ವಾದದ ಹಸ್ತ ಅವರ ಮಸ್ತಕದ ಮೇಲೆ ಬಿತ್ತು. ಆ ಎರಡು ಬಡಪಾಯಿ ಜೀವಗಳ ಬದುಕು ಹೀಗೆ ಸಾರ್ಥಕವಾಗಿತ್ತು !

ಈಗ ದೊಡ್ಡ ದೊಡ್ಡ ವಿದ್ವಾಂಸರೂ ನೀರನ್ನು ಸೋಸಿ ಕುಡಿಯುವುದು ಮಹತ್ವದ ಮಾತೆಂದು ತಿಳಿದಿಲ್ಲ. ಧರ್ಮದ ಮಾತಿರಲಿ ವಿಜ್ಞಾನವೂ ನೀರನ್ನು ಸೋಸಿ ಕುಡಿಯಬೇಕೆಂದು ಹೇಳುತ್ತದೆ. ಸೋಸದ ನೀರಲ್ಲಿ ಅಸಂಖ್ಯಾತ ಜೀವಾಣುಗಳಿರುತ್ತವೆ. ಜೈನ ಧರ್ಮ ಆ ಜೀವಿಗಳ ರಕ್ಷಣಾರ್ಥ ಹೇಳುತ್ತದೆ. ವಿಜ್ಞಾನ ಶರೀರದ ರಕ್ಷಣಾರ್ಥ ಹೇಳುತ್ತದೆ. ಆದರೆ ಜೈನ ತತ್ವ ದೃಷ್ಟಿಯಿಂದ ನೀರು ಸೋಸಿ ಕುಡಿದರೆ ಎರಡೂ ದೃಷ್ಟಿಗಳೂ ಈಡೇರಿದಂತಾಗುತ್ತದೆ. ಮನುಸ್ಮೃತಿಯಲ್ಲಿ ಒಂದು ಮಾತು ಹೇಲಿದ್ದಾರೆ. "ದುಷ್ಟಿ ಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಂ" ನೋಡಿ ಕಾಲಿಡು, ಸೋಸಿ ನೀರು ಕುಡಿ ಎಂದರ್ಥ. ಸೋಸದ ನೀರು ಕುಡಿಯುವುದರಿಂದ ಜೀವ ಹಿಂಸೆ ತಟ್ಟುವುದೇ ಅಲ್ಲದೆ ನೂರಾರು ರೋಗಗಳೂ ಬರುತ್ತವೆ. ರಾತ್ರಿ ಭೋಜನದ ರೋಗ ಜೈನ ಸಮಾಜವನ್ನು ಅಂಟು ರೋಗದಂತೆ ಕಾಡುತ್ತಿದೆ. ಎಷ್ಟೋ ಜನ ಶ್ರೀಮಂತರು ರಾತ್ರಿ ಭೋಜನ ಮಾಡುತ್ತಾರೆ. ಮತ್ತು ರಾತ್ರಿ ಭೋಜನ ತ್ಯಾಗಿಗಳನ್ನು ತಿರಸ್ಕಾರದಿಂದ ಕಾಣುತ್ತಾರೆ. ಇಂತಹ ಅಜ್ಞಾನಿಗಳ ಸಂಪತ್ತಿಗೆ ಯಾವ ಬೆಲೆ ? ಅಜ್ಞಾನಿಗಳ ಸಂಪತ್ತು ನಾಯಿಯ ಮೊಲೆಯ ಹಾಲಿನಂತೆ ನಿರರ್ಥಕ. ಒಂದು ರಾತ್ರಿ ಭೋಜನ ತ್ಯಾಗದಿಂದ ನರಿಯಂತಹ ತಿರ್ಯಂಚವೂ ಸದ್ಗತಿಗೆ ಹೋಯಿತು. ಸಾಧಾರಣ ಭಿಕ್ಷುಕಿ ಒಂದು ಜಾವದ ರಾತ್ರಿ ಭೋಜನ ತ್ಯಾಗ ವ್ರತದಿಂದ ರಾಜಕುಮಾರಿಯಾಗಿ ಹುಟ್ಟಿದಳು. ಇನ್ನು ತನ್ನ ಆಯುಷ್ಯ ಪೂರ್ಣ ರಾತ್ರಿ ಭೋಜನ ತ್ಯಾಗ ಮಾಡುವವನ ಪುಣ್ಯವನ್ನು ಹೊಗಳಲು ಯಾರಿಂದ ಸಾಧ್ಯ ?

ಅಸಂಯಮಿಯಾಗಿದ್ದರೂ ಜೀವನ ಪರ್ಯಂತ ರಾತ್ರಿ ಭೋಜನ ತ್ಯಾಗ ಮಾಡುವವರು ಅನಾಯಾಸ 'ಸ್ವರ್ಗಕ್ಕೆ ಹೋಗುತ್ತಾರೆ' ಎಂದು ಹೇಳಿದೆ. ನೀರು ಸೋಸಿ ಕುಡಿಯುವುದು, ರಾತ್ರಿ ಭೋಜನತ್ಯಾಗ, ಕಂದಮೂಲತ್ಯಾಗ ಇವು ಮೂರು ಜೈನರ ಬಹುಮುಖ್ಯ ಬಾಹ್ಯ ಲಕ್ಷಣವವೆಂದಿದ್ದಾರೆ. ಇದಿಷ್ಟು ವ್ರತ ಮಾತ್ರದಿಂದಲೇ ಜೀವಿಗೆ ನಿಸ್ಸಂಶಯವಾಗಿ ಕಲ್ಯಾಣವಾಗುತ್ತದೆ. ಜೈನರ ಮಾತಿರಲಿ, ಗಾಂಧೀಜಿಯೂ ರಾತ್ರಿ ಅನ್ನಪಾನ ಸೇವಿಸುತ್ತಿರಲಿಲ್ಲ. ಒಮ್ಮೆ ಗಾಂಧೀಜಿ ಬಹುಷಃ ೧೯೩೦ರಲ್ಲಿ ಕಾಶಿ ವಿಶ್ವವಿದ್ಯಾನಿಲಯದಲ್ಲಿ ಉಪಾನ್ಯಾಸ ಮಾಡುತ್ತಿದ್ದಾಗ ಸಂಜೆಯಾದ್ದರಿಂದ ಮದನ ಮೋಹನ ಮಾಳವೀಯರು ನಡುವೆಯೇ ತಡೆದು ಹೇಳಿದರು. "ನಮ್ಮ ಸಹೋದರ ಗಾಂಧೀಜಿಯವರು ರಾತ್ರಿ ಭೋಜನ ಮಾಡುವುದಿಲ್ಲ. ಆದ್ದರಿಂದ ಸಭೆಯನ್ನು ಸಮಾಪ್ತಿಗೊಳಿಸುತ್ತೇವೆ" ಜೈನ ಕುಲೀನರೂ ಇದರಿಂದ ಪಾಠ ಕಲಿಯಬೇಕಾದೀತು.

ಅಸಂಬದ್ಧ ಭ್ರಾಂತಿ

ತಿನ್ನುಣ್ಣುವುದಕ್ಕೂ ನಮ್ಮ ಸಂಸ್ಕೃತಿಗೂ ಏನು ಸಂಬಂಧ ಎಂದು ಕೇಳುವವರುಂಟು. ಸಂಬಂಧವಿದೆ. ಶುದ್ಧ ಆಚಾರ ವಿಚಾರಗಳೇ ಸಂಸ್ಕೃತಿಯ ಮಾನದಂಡ. ಪವಿತ್ರ ಆಚಾರ ಮತ್ತು ಪವಿತ್ರ ವಿಚಾರಗಳಿಂದಲೇ ಜೀವನದ ಉನ್ನತಿ ಆಗಲು ಸಾಧ್ಯ. ಜೀವನದ ಉನ್ನತಿ ಸಾಧಿಸುವುದೇ ಸಂಸ್ಕೃತಿ. ಒಳ್ಳೆಯ ಆಚಾರ ವಿಚಾರಗಳು ನಮ್ಮ ನಡೆ ನುಡಿ ಮತ್ತು ವ್ಯಕ್ತಿಯನ್ನು ಸುಧಾರಿಸಬಲ್ಲವು. ಯಾರ ಜೀವನ ಉನ್ನತ ಚಾರಿತ್ರದಿಂದ ತುಂಬಿದೆಯೋ ಉದ್ದಾತ್ತ ವಿಚಾರಗಳಿಂದ ಭೂಯಿಷ್ಠವಾಗಿದೆಯೋ ಅಂತವರನ್ನು ದೇವತೆಗಳೂ ಪೂಜಿಸುತ್ತಾರೆ.

ಶುದ್ಧವಿಚಾರಗಳು, ಭಾವನೆಗಳು ಹುಟ್ಟಿದಾಗ ಒಳ್ಳೆಯ ಆಚಾರ ಪಾಲಿಸಲ್ಪಡುತ್ತದೆ. ಶುದ್ಧ ವಿಚಾರಗಳು ತಿನ್ನುವ ಆಹಾರವನ್ನು ಬಹು ಮಟ್ಟಿಗೆ ಅವಲಂಬಿಸಿರುತ್ತವೆ. ಹಾಲು ಕುಡಿದವನ ಮಾತು ಹೇಗೆ? ಹೆಂಡ ಕುಡಿದವನ ನಡತೆ ಹೇಗೆ? ಆಹಾರದ ಅಂತರವಾದ ಕೂಡಲೇ ನಡೆ ನುಡಿಯಲ್ಲೂ ಅಂತರ ಉಂಟಾಗುತ್ತದೆ. ಜೈಸಾ ಅನ್ನ ವೈಸಾ ಮನ್ ಎಂದು ಹಿಂದಿಯಲ್ಲಿ ಹೇಳುತ್ತಾರೆ. ನಾವು ತಿನ್ನುವ ಆಹಾರವನ್ನು ಅವಲಂಬಿಸಿ ನಮ್ಮ ಭಾವನಾ ಲಹರಿ ಹರಿಯುತ್ತದೆ. ಸಸ್ಯಾಹಾರ ತಿಂದ ಹಸು ಶಾಂತ ಪರಿಣಾಮದಿಂದಲೇ ಸಂಚರಿಸುತ್ತದೆ. ಮಾಂಸಾಹಾರಿ ಸಿಂಹ ರೌದ್ರಭಾವದಿಂದ ಘರ್ಜಿಸುತ್ತದೆ. ಶಾಂತ ಮತ್ತು ರೌದ್ರ ಭಾವಗಳಿಗೆ ಆಹಾರದ ಕೊಡುಗೆಯೇನೂ ಕಡಿಮೆ ಇಲ್ಲ. ತಾಯಿ ಸಿಟ್ಟುಗೊಂಡಾಗ ಮಗುವಿಗೆ

ಹಾಲೂಡಿಸಬಾರದೆಂದು ಆಯುರ್ವೇದ ವಿಧಿಸುತ್ತದೆ. ಏಕೆಂದರೆ ಆಗ ತಾಯಿಯ ಹಾಲು ವಿಷಯುಕ್ತವಾಗಿರುತ್ತದೆ. ಆದ್ದರಿಂದ ಮಗು ಆ ಹಾಲು ಕುಡಿದು ರಚ್ಚೆ ಮಾಡುತ್ತದೆ. ಆಹಾರ ಶರೀರದ ಮೇಲೆ ಗಣನೀಯ ಪರಿಣಾಮ ಬೀರುವಂತೆ ಮನಸ್ಸಿನ ಮೇಲೂ ಬೀರುತ್ತದೆ. ಆದ್ದರಿಂದ ಜೈನಧರ್ಮ ಮಾನಸಿಕ ಹತೋಟಿಯನ್ನು ಶುದ್ಧ ಆಹಾರ ವೃತ್ತಿಯಿಂದಲೇ ಬಹುಮಟ್ಟಿಗೆ ನಿಯಂತ್ರಿಸಲು ಯೋಚಿಸುತ್ತದೆ. ರಾಜಸ ತಾಮಸ ಆಹಾರಗಳ ತ್ಯಾಗ ದೂರದಿಂದಲೇ ಮಾಡಲು ವಿಧಿಸುತ್ತದೆ. ಇದರಲ್ಲಿ ಜೀವರಕ್ಷಣೆ ಮತ್ತು ಮಾನಸಿಕ ನಿಯಂತ್ರಣ ಎರಡೂ ದೃಷ್ಟಿಗಳು ಸೇರಿದೆ. ಅತಿ ಆಹಾರ ಮಾನಸಿಕ ಸಮತೋಲನ ತಪ್ಪಿಸುತ್ತದೆ. ಶಕ್ತಿ ಮೀರಿದ ಆಹಾರ ತ್ಯಾಗವೂ ಮಾನಸಿಕ ವ್ಯಾಕುಲತೆ ಹುಟ್ಟಿಸುತ್ತದೆ. ತನ್ನ ಮಿತಿಯೊಳಗೆ ಆಹಾರ ಸೇವನೆ ಹೇಳಿದರು ಹಂತಹಂತವಾದ ಆಹಾರ ನಿಯಂತ್ರಣದಿಂದ ಮನಸ್ಸಿನ ಮೇಲೆ ಸುಸಂಬದ್ಧ ನಿಯಂತ್ರಣ ತರಲು ಸಾಧ್ಯ ಎನ್ನುವುದು ಜೈನಾಚಾರ್ಯರಿಗೆ ಚೆನ್ನಾಗಿ ತಿಳಿದಿತ್ತು, ಆದರಿಂದ ಅಪಾರ ಆಧ್ಯಾತ್ಮ ಲಾಭವಾಗುತ್ತಿತ್ತು, ಆದ್ದರಿಂದಲೇ ಅವರು ನಾನಾ ರೀತಿಯ ಅನಶನ ವ್ರತಗಳನ್ನು ಪಾಲನೆಯಲ್ಲಿ ತಂದರು. ಸಿಂಹ ನಿಷ್ಕ್ರೀಡಿತ, ಸುದರ್ಶನ, ಆಚಾಮ್ಲವರ್ಧನ ಇತ್ಯಾದಿ ವ್ರತಗಳು ಮುನಿಗಳ ಸೂಕ್ಷ್ಮ ಚಿಂತನೆಯ ಕೊಡುಗೆಗಳು. ಆಹಾರ ಮತ್ತು ಮನಸ್ಸಿಗೆ ಇರುವ ಅವಿನಾಭಾವಿ ಸಂಬಂಧವನ್ನು ಚೆನ್ನಾಗಿ ತಿಳಿದಿದ್ದ ಅವರುಗಳು ಆಹಾರ ನಿಯಂತ್ರಣದಿಂದ ಮನಸ್ಸಿನ ನಿಯಂತ್ರಣ ಮಾಡಿ ಅಪಾರ ಆಧ್ಯಾತ್ಮ ಲಾಭ ಸಾಧಿಸುತ್ತಿದ್ದರು. ಕೆಟ್ಟ ಆಹಾರದಿಂದ ಮನಸ್ಸಿನ ಮೇಲೆ ದುಷ್ಪರಿಣಾಮವಾಗುವಷ್ಟೇ ಶುದ್ಧ ಸಾತ್ವಿಕ ಆಹಾರದಿಂದ ಮನಸ್ಸಿನ ಮೇಲೆ ಸತ್ಪರಿಣಾಮವಾಗಬಲ್ಲದು. ನವದಾಭಕ್ತಿಯಿಂದ ಕೂಡಿದ ಸದ್ಗಹಸ್ಥನು ಕೊಟ್ಟ ಶುದ್ಧ ಸಾತ್ವಿಕ ಆಹಾರದಿಂದ ಮುನಿಗೆ ಹೆಚ್ಚು ಸಮಯದವರೆಗೆ ಸಾಮಾಯಿಕದಲ್ಲಿ ಮನಸ್ಸು ನಿಲ್ಲುವುದಂತೆ. ಇದು ಶುದ್ಧ ಆಹಾರದ ಪರಿಣಾಮವಲ್ಲದೆ ಮತ್ತೇನು? ಅಶುದ್ಧ ಮತ್ತು ಅಭದ್ರ ಪರಿಣಾಮದವರು ಕೊಟ್ಟ ಆಹಾರದಿಂದ ಮುನಿಯ ಮನಸ್ಸು ಗೊಂದಲ ಮತ್ತು ಕೋಲಾಹಲಕ್ಕೀಡಾಗಿದ್ದ ಉದಾಹರಣೆಗಳೂ ಉಂಟು. ಆದ್ದರಿಂದ ಶುದ್ಧ ಸಾತ್ವಿಕ ಆಹಾರ ಸೇವನೆ ಮತ್ತು ಕ್ರಮಬದ್ಧ ಆಹಾರ ನಿಯಂತ್ರಣ ಇವುಗಳು ಆತ್ಮ ಕಲ್ಯಾಣದ ಪ್ರಥಮ ಪಾಠ! ಮನಸ್ಸಿಗೆ ಭ್ರಮೆಯನ್ನುಂಟು ಮಾಡುವ ದೈಹಿಕ ಆಲಸ್ಯವನ್ನುಂಟು ಮಾಡುವ ಆಹಾರವನ್ನು ತ್ಯಾಗಿಗಳಿರಲಿ ಶ್ರಾವಕರೂ ತ್ಯಜಿಸಬೇಕು. ಕ್ಷಣಕ್ಷಣಕ್ಕೂ ಏನಾದರೊಂದು ಬಾಯಿಗೆ ಹಾಕಿ ಅಗಿಯುವ ಚಪಲದವರುಂಟು. ಹೊಟ್ಟೆಯನ್ನು ಗೋಣಿ ಚೀಲದಂತೆ ತುಂಬುತ್ತಿರುವ ಅವರಿಗೆ ನಾನಾ ರೋಗಗಳು ಬಂದು ಮನೆ ಮಾಡುತ್ತವೆ. ನಾಲಿಗೆ ರುಚಿಯೇ ಬೇರೆ ಹೊಟ್ಟೆಯ ಶಕ್ತಿಯೇ ಬೇರೆ. ಇವೆರಡನ್ನೂ ತಿಳಿಯದವರು ನಾಲಿಗೆ ರುಚಿಗೆ ಜೋತು ಬಿದ್ದು ಹೊಟ್ಟೆಯನ್ನು

ಗುಡಾಣದಂತೆ ಬೆಳೆಸಿ, ರೋಗದ ಕೋಳಿಗಳಾಗುತ್ತಾರೆ. ಇಂತವರೇ ಇಂದು ನಮ್ಮ ದೇಶದ ಆಸ್ತಿಯಾಗುತ್ತಿದ್ದಾರೆ. ಈ ಕಾರಣದಿಂದಲೇ ತಿನ್ನುಣ್ಣುವುದಕ್ಕು ಸಂಸ್ಕೃತಿಗೂ ಸಂಬಂಧವೇನು ಎನ್ನುವ ಪ್ರಶ್ನೆಗಟ್ಟಿಯಾಗಿ ಕುಳಿತಿದೆ? ಆಹಾರ ಸೇವನೆ ಕ್ಲಪ್ತಕಾಲದಲ್ಲಿ ಮಾಡುವುದೂ ಒಳ್ಳೆಯ ಅಭ್ಯಾಸವೆಂದು ಹೇಳಿದ್ದಾರೆ. ತ್ಯಾಗಿಗಳು ದಿನಕ್ಕೆ ಒಮ್ಮೆ ಮಾತ್ರ ಶುದ್ಧ ಆಹಾರ ತೆಗೆದುಕೊಳ್ಳುತ್ತಾರೆ. ಅಂತಹ ತ್ಯಾಗದಿಂದ ಶರೀರ ದುರ್ಬಲವಾಗುವುದೆಂದು ಹೇಳುವವರೂ ಉಂಟು. ಸದಾಕಾಲ ಯಥೇಚ್ಛವಾಗಿ ತಿನ್ನುವವರಿಗಿಂತ ಒಂದು ಹೊತ್ತು ತಿನ್ನುವ ಸಾಧುಗಳು ನಿರೋಗಿಗಳಾಗಿ ದೀರ್ಘಕಾಲ ಬದುಕುತ್ತಾರೆ. ಆದ್ದರಿಂದ ತಿನ್ನುಣ್ಣುವುದಕ್ಕೂ ಸಂಸ್ಕೃತಿಗೂ ಸಂಬಂಧ ಇದ್ದೇ ಇದೆ ಎನ್ನುವುದು ನಿರ್ವಿವಾದ.

ಇನ್ನೊಬ್ಬ ವೃದ್ಧನ ಭಕ್ತಿ

ಆಚಾರ್ಯ ಶ್ರೀಯವರ ಸಂಘ ಕಾಡಿನ ಬದಿಯಲ್ಲಿ ಹೋಗುತ್ತಿತ್ತು, ಒಬ್ಬ ವೃದ್ಧನ ದೃಷ್ಟಿ ಪೂಜ್ಯಶ್ರೀಯವರ ಮೇಲೆ ಬಿತ್ತು, ಈ ಬಾಬಾನ ದರ್ಶನ ಅವಶ್ಯ ಮಾಡಬೇಕೆಂದು ಆ ವೃದ್ಧನ ಮನಸ್ಸಿಗೆ ಹುಟ್ಟಿತು. ಮಹರಾಜರು ಮುಂದೆ ಮುಂದೆ ಹೋಗಲಾರಂಭಿಸಿದರು. ಪಾಪ ಆ ವೃದ್ಧನಾದರೋ ಕೈಲಾಗದೆ ಊರುಗೋಲು ಕುಟ್ಟುತ್ತಾ ಹಿಂದೆ ಹಿಂದೆಯೇ ದೌಡಾಯಿಸತೊಡಗಿದ. ಆ ಮುದುಕನ ಭಕ್ತಿ ಮತ್ತು ದೃಢತೆ ಸಂಘಪತಿಗೆ ಕರುಣೆ ಹುಟ್ಟಿಸಿತು. "ಮಹರಾಜ್! ಒಬ್ಬ ವೃದ್ಧ ನಿಮ್ಮ ದರ್ಶನಕ್ಕೆ ಹಾತೊರೆಯುತ್ತಿದ್ದಾನೆ. ಕರುಣಿಸಬೇಕು" ಎಂದು ವಿನಂತಿಸಿದರು. ಪೂಜ್ಯ ಶ್ರೀಯವರು ಕೂಡಲೇ ನಿಂತರು. ಆ ಮುದುಕ ಅವರ ದರ್ಶನದಿಂದ ಬಹಳ ಹರ್ಷಗೊಂಡ. ಆ ಜನ ಬೇಟೆಯಾಡಲು ಬಂದಿದ್ದರು. ಇಂದು ಈ ಮಹಾಪುರುಷನ ದರ್ಶನ ಮಾಡಿದ್ದೇವೆ. ಬೇಟೆಯಾಡುವುದು ಬೇಡ ಎಂದು ಆ ವೃದ್ಧ ತನ್ನ ಸಂಗಡಿಗರಿಗೆ ತಿಳಿಸಿದ.

ಒಬ್ಬ ಧಾರ್ಮಿಕ ವ್ಯಕ್ತಿ ಅಮೇರಿಕಾಕ್ಕೆ ಹೋಗಿದ್ದ. ಅಲ್ಲಿ ಒಬ್ಬ ಅಮೇರಿಕಾ ಪ್ರಜೆ ಹಾಗೂ ಇವನ ಸ್ನೇಹಿತನಿಗೆ ಮೀನು ಹಿಡಿಯಬಾರದೆಂದು ಬೋಧಿಸತೊಡಗಿದ. ಆದರೂ ಅವನು ಇವನ ಮಾತು ಕೇಳದೆ ಮೀನು ಹಿಡಿಯಲು ಕುಳಿತ. ಆ ಜೈನ ಯುವಕ ಜಿನೇಂದ್ರನನ್ನು ಧ್ಯಾನಿಸಲಾರಂಭಿಸಿದ. ಆ ಮೀನುಗಳಿಗೆ ಅಭಯ ಉಂಟಾಗಲಿ ಎನ್ನುದೇ ಅವನ ಧ್ಯಾನವಾಗಿತ್ತು, ಎಷ್ಟು ಹೊತ್ತು ಕಳೆದರೂ ಒಂದು ಮೀನೂ ಬಲೆಗೆ ಬೀಳಲಿಲ್ಲ. ಇದರಿಂದ ಬೇಸತ್ತ ಅಮೇರಿಕಾದವ ಮೀನು

ಹಿಡಿಯುವುದನ್ನು ನಿಲ್ಲಿಸಿದ. ಆ ಜೈನ ಬಂಧುವಿನ ಶ್ರದ್ಧಾಪೂರ್ಣ ಭಾವದಿಂದ ತನಗೆ ಮೀನು ಸಿಗದೇ ಹೋಯಿತು. ನಿಶ್ಚಲಭಾವದಲ್ಲಿ ಬಹಳ ಶಕ್ತಿ ಇದೆ ಎಂದು ಹೇಳಿ ಧರ್ಮದತ್ತ ಒಲವು ತೋರಿದನಂತೆ. ವಾಸ್ತವಿಕವಾಗಿ ನೋಡಿರೆ ಜಿನೇಂದ್ರನಲ್ಲಿ ಶ್ರದ್ಧೆ ಇಟ್ಟು ನಾವು ಯಾವುದೇ ಕಾರ್ಯ ಮಾಡಿದರೂ ಅಂತಹ ಪವಿತ್ರ ಕಾರ್ಯದಲ್ಲಿ ಅವಶ್ಯ ಸಫಲತೆ ಉಂಟಾಗುತ್ತದೆ.